04 August 2026 Tuesday SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಬ್ಬರನ್ನು ನೆನಪಿಸಿಕೊಳ್ಳಲು ಆ ವ್ಯಕ್ತಿಗಳು ಕಣ್ಮುಂದೆಯೇ ಇರಬೇಕೆಂದೇನಿಲ್ಲ, ಅವರಲ್ಲಿರುವ ವ್ಯಕ್ತಿತ್ವ ಸಾಕು!

-ಸ್ನೇಹಾ ಆನಂದ್

info.varthaman@gmail.com



ನವ ಶಕ್ತಿದೇವತೆಗಳ ಕರಗ ಮಹೋತ್ಸವ: ನಗರಸಭೆ ಯಿಂದ ಆರ್ಥಿಕ ಸಹಕಾರ ಪುಟ ಸಂ. 2



3 ವರ್ಷಗಳಲ್ಲಿ 1433 ಕೋಟಿ ರೂ ವೆಚ್ಚದ ಅಭಿವೃದ್ಧಿ ಪುಟ ಸಂ. 3



ತನ್ವೀರ್ ಸೇಠ್ ಗೆ ತಪ್ಪಿದ ಸಚಿವ ಸ್ಥಾನ: ಹೆದ್ದಾರಿ ಸಂಚಾರ ತಡೆದು ಆಕ್ರೋಶ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 242 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## 19 ಸಚಿವರ ಪದಗ್ರಹಣ | 2 ತಿಂಗಳ ನಂತರ ಮುಗಿದ 'ಸಂಪುಟ ಸರ್ಕಸ್'!

# ಕೊನೆಗೂ 'ಶಿವ ಸಂಪುಟ' ವಿಸ್ತರಣೆ

## ಮಹಿಳೆಯರಿಗೆ ಸಿಗದ ಸಚಿವ ಸ್ಥಾನ | ಇನ್ನೂ ಒಂದು ಸ್ಥಾನ ಖಾಲಿ

**ಬೆಂಗಳೂರು:** ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸರಿಯಾಗಿ ಎರಡು ತಿಂಗಳ ನಂತರ ಸೋಮವಾರ 19 ಮಂದಿ ಸಚಿವರನ್ನು ಸೇರಿಸಿಕೊಳ್ಳುವ ಮೂಲಕ ಸಂಪುಟವನ್ನು ವಿಸ್ತರಿಸಿದ್ದಾರೆ.

ಲೋಕಭವನದಲ್ಲಿ ಸೋಮವಾರ ಸಂಜೆ 5 ಗಂಟೆಗೆ ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆಯಿತು. ಇದರೊಂದಿಗೆ ಮುಖ್ಯಮಂತ್ರಿ ಸೇರಿದಂತೆ ಒಟ್ಟು 33 ಸಚಿವರ ಸಂಪುಟ ರಚನೆ ಆಗಿದೆ. ಕೊನೇ ಕ್ಷಣದಲ್ಲಿ ಎಂಎಲ್ಸಿ ಗಾಯತ್ರಿ ಅವರನ್ನು ಪಟ್ಟಿಯಿಂದ ಕೈಬಿಟ್ಟಿರುವ ಹಿನ್ನೆಲೆಯಲ್ಲಿ 1 ಸ್ಥಾನವನ್ನು ಹೊರತುಪಡಿಸಿ ಪೂರ್ಣ ಪ್ರಮಾಣದ ಸಂಪುಟ ರಚನೆ ಆಗಿದೆ. ಆದರೆ ಸಚಿವ ಸಂಪುಟದಲ್ಲಿ ಮಹಿಳೆಯರಿಗೆ ಸ್ಥಾನ ಸಿಕ್ಕಿಲ್ಲ. ಕೊನೇ ಕ್ಷಣದಲ್ಲಿ ಗಾಯತ್ರಿ ಶಾಂತೇಗೌಡ ಅವರನ್ನು ಸಚಿವರ ಪಟ್ಟಿಯಿಂದ ಕೈಬಿಡಲಾಗಿದೆ. ಈ ಒಂದು ಸ್ಥಾನ ಖಾಲಿ ಉಳಿದಿದ್ದು, ಇದು ಯಾರಿಗೆ ಒಲಿಯಲಿದೆ ಎಂಬ ಕುತೂಹಲ ಇನ್ನೂ ಉಳಿದಿದೆ.

**ಹೊಸಮುಖಗಳು:** ನರೇಂದ್ರಸ್ವಾಮಿ, ಬಸವಂತಪ್ಪ, ರಘುಮೂರ್ತಿ, ಪುಟ್ಟರಂಗಶೆಟ್ಟಿ, ವಿಜಯಾನಂದ ಕಾಶಪ್ಪನವರ್, ಶಿವಲಿಂಗೇಗೌಡ ಇದೇ ಮೊದಲ ಬಾರಿಗೆ ಸಚಿವ ಸಂಪುಟವನ್ನು ಸೇರಿದ್ದಾರೆ.

ಸಿದ್ದರಾಮಯ್ಯ ಅವರ ಆಪ್ತರೆಂದು ಗುರುತಿಸಿಕೊಂಡಿರುವ ಜಮೀರ್ ಅಹ್ಮದ್ ದಾವಣಗೆರೆ ಉಪ ಚುನಾವಣೆಯಲ್ಲಿ ಪಕ್ಷದ ಸೋಲಿಗೆ ಸಂಬಂಧಿಸಿದಂತೆ ತಮ್ಮ ವಿರುದ್ಧ ಆರೋಪಗಳಿದ್ದರೂ ಸಂಪುಟಕ್ಕೆ ಮರಳಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದ ಆರೋಪಗಳನ್ನು ಎದುರಿಸುತ್ತಿದ್ದರೂ, ಬಿ.ನಾಗೇಂದ್ರ ಕೂಡ ಸಚಿವ ಸಂಪುಟಕ್ಕೆ ಮರಳಿದ್ದಾರೆ.

ಎಸ್.ಎಸ್.ಮಲ್ಲಿಕಾರ್ಜುನ್ ಅವರಿಗೆ ಕೊನೇ ಕ್ಷಣದಲ್ಲಿ ಸಚಿವ ಸ್ಥಾನ ನೀಡಲಾಗಿದೆ. ಇದರ ಹಿಂದೆಯೂ ರಾಜಕೀಯ ಬೆಳವಣಿಗೆಗಳಿವೆ ಎನ್ನಲಾಗಿದೆ.

ಸಚಿವ ಸ್ಥಾನ ದೊರೆಯದಿದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಅವರು ಹೈಕಮಾಂಡ್‌ಗೆ ತಿಳಿಸಿದ್ದರು. ಅಲ್ಲದೆ, ತಮ್ಮ ಕುಟುಂಬದ ರಾಜಕೀಯ ಸ್ಥಾನಗಳ ಬಗ್ಗೆಯೂ ಕಠಿಣ ನಿಲುವು ವ್ಯಕ್ತಪಡಿಸಿದ್ದರಿಂದ ಕೊನೆಯ ಕ್ಷಣದಲ್ಲಿ ಹೈಕಮಾಂಡ್ ನಿರ್ಧಾರ ಬದಲಿಸಿ, ಅವರಿಗೆ ಸಚಿವ ಸ್ಥಾನ ನೀಡಿದೆ ಎನ್ನಲಾಗಿದೆ. ಮಂಕಾಳು ವೈದ್ಯ ಅವರ ಹೆಸರು ಪಟ್ಟಿಗೆ ಸೇರ್ಪಡೆಯಾಗಿತ್ತು. ನಂತರ ಬದಲಿಸಿ ಮಲ್ಲಿಕಾರ್ಜುನ್ ಅವರನ್ನು ಸೇರಿಸಲಾಯಿತು.




### 12 ಹೊಸಮುಖಗಳಿಗೆ ಮಣೆ: 7 ಮಾಜಿ ಸಚಿವರಿಗೂ ಸ್ಥಾನ

***ಅಳೆದುತೂಗಿ ಕಾಂಗ್ರೆಸ್ ಹೈಕಮಾಂಡ್ 'ಗ್ರೀನ್ ಸಿಗ್ನಲ್'**

ಬೆಂಗಳೂರು: ಕಳೆದ 2 ತಿಂಗಳಿಂದ ನನೆಗುದಿಗೆ ಬಿದ್ದಿದ್ದ ಸಚಿವ ಸಂಪುಟ ವಿಸ್ತರಣೆಯನ್ನು ಕಾಂಗ್ರೆಸ್ ಹೈಕಮಾಂಡ್ ಅಳೆದು ತೂಗಿ ಮಾಡಿದೆ. 2ನೇ ಹಂತದಲ್ಲಿ ಡಿ.ಕೆ.ಶಿವಕುಮಾರ್ ಮಂತ್ರಿ ಮಂಡಲದಲ್ಲಿ 12 ಹೊಸ ಮುಖಗಳಿಗೆ ಮಣೆ ಹಾಕಲಾಗಿದೆ. ಸಿದ್ದರಾಮಯ್ಯ ಅವಧಿಯ 6 ಸಚಿವರನ್ನು ಮುಂದುವರಿಸಿದ್ದಾರೆ. 20 ಖಾಲಿ ಸ್ಥಾನಗಳಲ್ಲಿ 19 ಮಂದಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

### ಬ್ರಾಹ್ಮಣರಿಗೆ ಸಿಗದ ಪ್ರಾತಿನಿಧ್ಯ: ಮುಸ್ಲಿಮರಿಗೆ 3 ಸಚಿವ ಸ್ಥಾನ

ಬೆಂಗಳೂರು: ವಿಸ್ತರಿತ ಸಚಿವ ಸಂಪುಟದಲ್ಲಿ ಬ್ರಾಹ್ಮಣ ಸಮುದಾಯದ ಯಾವುದೇ ಶಾಸಕರು ಸಚಿವರಾಗಿಲ್ಲ. ಈ ಮೂಲಕ ಬ್ರಾಹ್ಮಣ ಸಮುದಾಯಕ್ಕೆ ಪ್ರಾತಿನಿಧ್ಯ ಇಲ್ಲದಂತಾಗಿದೆ. ಈ ಹಿಂದೆ ಸಿದ್ದರಾಮಯ್ಯ ಅವಧಿಯಲ್ಲಿ ದಿನೇಶ್ ಗುಂಡೂರಾವ್ ಆರೋಗ್ಯ ಸಚಿವರಾಗಿದ್ದರು. ಈ ಬಾರಿ ಮೂವರು ಮುಸ್ಲಿಂರಿಗೆ ಸಚಿವ ಸ್ಥಾನ ಸಿಕ್ಕಿದೆ. ಮುಸ್ಲಿಂ ಸಮುದಾಯದ ಪ್ರಾತಿನಿಧ್ಯ ಏರಿಕೆಯಾಗಿದೆ. ಇದು ಹೊಸ ಸಂಪುಟದ ಗಮನಾರ್ಹ ಬದಲಾವಣೆ. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಆಪ್ತರೆಂದು ಪರಿಗಣಿಸಲ್ಪಟ್ಟಿರುವ ಹಲವು ಹಿರಿಯ ನಾಯಕರು ಸಂಪುಟದಲ್ಲಿ ತಮ್ಮ ಸ್ಥಾನವನ್ನು ಉಳಿಸಿಕೊಂಡಿದ್ದಾರೆ ಅಥವಾ ಮರುಸೇರ್ಪಡೆಯಾಗಿದ್ದಾರೆ. ಜಮೀರ್ ಅಹ್ಮದ್ ಖಾನ್ ಅವರನ್ನು ಮತ್ತೊಮ್ಮೆ ಸಚಿವ ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ.



**ಬಿ.ನಾಗೇಂದ್ರ:** 2023ರ ವಿಧಾನಸಭಾ ಚುನಾವಣೆಯಲ್ಲಿ ಬಳ್ಳಾರಿ ಗ್ರಾಮಾಂತರ ಭಾಗದಿಂದ ಶಾಸಕರಾಗಿರುವ ಬಿ.ನಾಗೇಂದ್ರ ಅವರು 2008ರಿಂದ ಸತತವಾಗಿ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಈ ಮೊದಲು ಸಿದ್ದರಾಮಯ್ಯ ಸಂಪುಟದಲ್ಲಿಯೂ ಸಚಿವರಾಗಿದ್ದರು. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ಹಗರಣ ಕೇಳಿ ಬಂದ ಬಳಿಕ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಈಗ ಅವರನ್ನು ಮತ್ತೆ ಡಿ.ಕೆ.ಶಿವಕುಮಾರ್ ಸಂಪುಟಕ್ಕೆ ಸೇ–ರಿಸಿಕೊಳ್ಳಲಾಗಿದೆ.



**ಮಧು ಬಂಗಾರಪ್ಪ:** ಮಾಜಿ ಸಿಎಂ ಬಂಗಾರಪ್ಪ ಅವರ ಪುತ್ರ ಮಧು ಬಂಗಾರಪ್ಪ. 2013ರಲ್ಲಿ ಮೊದಲ ಬಾರಿಗೆ ಸೊರಬ ಕ್ಷೇತ್ರದಿಂದ ಜೆಡಿಎಸ್‌ನಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. ಬಳಿಕ, ಕಾಂಗ್ರೆಸ್ ಸೇರಿದ ಅವರು 2023 ರಲ್ಲಿ ಶಾಸಕರಾಗಿ ಆಯ್ಕೆಯಾದರು. ಅವರು, ಈ ಹಿಂದೆ ಸಿದ್ದರಾಮಯ್ಯ ಸಂಪುಟದಲ್ಲಿಯೂ ಸಚಿವರಾಗಿದ್ದರು.



**ಪಿ.ಎಂ.ನರೇಂದ್ರಸ್ವಾಮಿ:** ಮಂಡ್ಯ ಜಿಲ್ಲೆಯ ಮಳವಳ್ಳಿ ಪರಿಶಿಷ್ಟ ಜಾತಿ ಮೀಸಲು ವಿಧಾನಸಭಾ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2008ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲುವು ಸಾಧಿಸಿದ್ದರು. 2013 ಹಾಗೂ 2023ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ಈಗ 2ನೇ ಬಾರಿಗೆ ಡಿಕೆಶಿ ಸಂಪುಟದಲ್ಲಿ ಸಚಿವರಾಗಿ ಆಯ್ಕೆಯಾಗಿದ್ದಾರೆ.



**ವಿಜಯಾನಂದ ಕಾಶಪ್ಪನವರ್:** ಬಾಗಲಕೋಟೆ ಜಿಲ್ಲೆಯ ಹುನಗುಂದ ವಿಧಾನಸಭಾ ಕ್ಷೇತ್ರದಿಂದ 2013 ಮತ್ತು 2023 ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ಪಂಚಮಸಾಲಿ ಸಮುದಾಯಕ್ಕೆ ಸೇರಿದ ಅವರು ಇದೇ ಮೊದಲ ಬಾರಿಗೆ ಸಚಿವರಾಗಿದ್ದಾರೆ.



**ರುದ್ರಪ್ಪ ಲಮಾಣಿ:** ಲಮಾಣಿ ಅವರು 1999ರಲ್ಲಿ ಹಾವೇರಿ ಜಿಲ್ಲೆಯ ಬ್ಯಾಡಗಿ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು. ನಂತರ, ಹಾವೇರಿ ಪರಿಶಿಷ್ಟ ಜಾತಿ ಮೀಸಲು ವಿಧಾನಸಭಾ ಕ್ಷೇತ್ರದಿಂದ 2013 ಹಾಗೂ 2023 ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದರು. ಇನ್ನೂ, 2023ರ ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ವಿಧಾನ ಸಭೆಯ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.



**ಶಿವರಾಜ್ ತಂಗಡಗಿ:** ಕೊಪ್ಪಳ ಜಿಲ್ಲೆಯ ಕನಕಗಿರಿ ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ 2008, 2013 ಮತ್ತು 2023 ಒಟ್ಟು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.



**ಎಚ್.ಸಿ.ಬಾಲಕೃಷ್ಣ:** ಬಾಲಕೃಷ್ಣ ಅವರು ರಾಮನಗರ ಜಿಲ್ಲೆಯ ಮಾಗಡಿ ವಿಧಾನಸಭಾ ಕ್ಷೇತ್ರದಿಂದ ಒಟ್ಟು 5 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 1994ರಲ್ಲಿ ಬಿಜೆಪಿಯಿಂದ ಆಯ್ಕೆಯಾಗಿದ್ದರು. ನಂತರ, 2004, 2008 ಮತ್ತು 2013ರಲ್ಲಿ ಜೆಡಿಎಸ್ ನಿಂದ ಗೆಲುವು ದಾಖಲಿಸಿದ್ದರು. 2023ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಶಾಸಕರಾದರು. ಈಗ ಮೊದಲ ಬಾರಿ ಸಚಿವರಾಗಿದ್ದಾರೆ.




**ಜಮೀರ್ ಅಹಮದ್ ಖಾನ್:** ಬೆಂಗಳೂರಿನ ಚಾಮ ರಾಜಪೇಟೆ ವಿಧಾನಸಭಾ ಕ್ಷೇತ್ರದಿಂದ ಸತತವಾಗಿ ಐದು ಬಾರಿ ಶಾಸಕರಾಗಿದ್ದಾರೆ. 2005ರ ಉಪಚುನಾವಣೆಯಿಂದ ಜೆಡಿಎಸ್ ಚಿನ್ಹೆಯಡಿ ಗೆಲ್ಲುತ್ತಾ ಬಂದಿದ್ದ ಅವರು 2018ರಲ್ಲಿ ಕಾಂಗ್ರೆಸ್ ಪಕ್ಷ ಸೇರಿ, ಗೆಲುವು ದಾಖಲಿಸಿದ್ದರು. 2023ರಲ್ಲಿ ಗೆಲುವು ದಾಖಲಿಸಿರುವ ಅವರು ಕಳೆದ ಸಿದ್ದರಾಮಯ್ಯ ಸಂಪುಟದಲ್ಲಿಯೂ ಸಚಿವರಾಗಿದ್ದರು. ಇದೀಗ, ಡಿಕೆಶಿ ಸಂಪುಟದಲ್ಲಿ ಸಚಿವಾಗಿ ಮರು ಆಯ್ಕೆಯಾಗಿದ್ದಾರೆ.




**ಡಾ.ಅಜಯ್ ಸಿಂಗ್:** ಮಾಜಿ ಮುಖ್ಯಮಂತ್ರಿ ಧರಮ್ ಸಿಂಗ್ ಪುತ್ರ ಡಾ. ಅಜಯ್ ಸಿಂಗ್ ಕಲಬುರಗಿ ಜಿಲ್ಲೆಯ ಜೇವರ್ಗಿ ಕ್ಷೇತ್ರದಿಂದ 2013, 2018 ಹಾಗೂ 2023 ಒಟ್ಟು 3 ಬಾರಿ ಕಾಂಗ್ರೆಸ್‌ನಿಂದ ಶಾಸಕರಾಗಿದ್ದಾರೆ. ಮೊದಲ ಬಾರಿಗೆ ಅವರು ಸಚಿವರಾಗಿದ್ದಾರೆ.




**ಎನ್.ಚಲುವರಾಯಸ್ವಾಮಿ:** ನಾಗಮಂಗಲ ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿ ಮತ್ತು 2009ರಿಂದ 2013ರ ಅವಧಿಯಲ್ಲಿ ಮಂಡ್ಯ ಸಂಸದರಾಗಿಯೂ ಆಯ್ಕೆಯಾಗಿದ್ದರು. 1999, 2004, 2013 ಜೆಡಿಎಸ್‌ನಿಂದ ಮತ್ತು 2023ರಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಕಳೆದ ಸಿದ್ದರಾಮಯ್ಯ ಸಂಪುಟದಲ್ಲಿ ಕೃಷಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.



**ಕೆ.ಎಂ.ಶಿವಲಿಂಗೇಗೌಡ:** ಹಾಸನ ಜಿಲ್ಲೆಯ ಅರಸೀಕೆರೆ ವಿಧಾನಸಭಾ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2008ರಿಂದ 2018ರವರೆಗೆ ಜೆಡಿಎಸ್ ಪಕ್ಷದಿಂದ ಶಾಸಕರಾದರೆ, ಈಗ 2023ರಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಗೆಲುವು ದಾಖಲಿಸಿದ್ದಾರೆ. ಮೊದಲ ಬಾರಿಗೆ ಸಚಿವರಾಗಿದ್ದಾರೆ.



**ಸಂತೋಷ್ ಲಾಡ್:** 2004ರಲ್ಲಿ ಸಂಡೂರು ಕ್ಷೇತ್ರದಲ್ಲಿ ಜೆಡಿಎಸ್ ಶಾಸಕರಾಗಿದ್ದರು. ಸಂತೋಷ್ ಲಾಡ್ ಅವರು, 2008, 2013 ಮತ್ತು 2023ರಲ್ಲಿ ಕಾಂಗ್ರೆಸ್ ಶಾಸಕರಾಗಿದ್ದಾರೆ. ಸಿದ್ದರಾಮಯ್ಯ ಸಂಪುಟದಲ್ಲಿಯೂ ಕಾರ್ಮಿಕ ಸಚಿವರಾಗಿದ್ದರು. ಡಿ.ಕೆ. ಶಿವಕುಮಾರ್ ಸಂಪುಟದಲ್ಲಿಯೂ ಸಚಿವರಾಗಿದ್ದಾರೆ.



**ರಿಜ್ವಾನ್ ಅರ್ಷದ್:** ಯೂಥ್ ಕಾಂಗ್ರೆಸ್‌ನಿಂದ ಬಂದ ರಿಜ್ವಾನ್ ಅರ್ಷದ್ ಅವರು, 2016ರಿಂದ 2019ರ ಅವಧಿಯಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದರು. 2019ರ ಉಪಚುನಾವಣೆ ಮತ್ತು 2023ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಶಾಸಕರಾಗಿದ್ದಾರೆ. ಮೊದಲ ಬಾರಿ ಸಚಿವರಾಗಿದ್ದಾರೆ.



**ಸಿ.ಪುಟ್ಟರಂಗಶೆಟ್ಟಿ** ಪುಟ್ಟರಂಗಶೆಟ್ಟಿ ಅವರು ಚಾಮ ರಾಜನಗರ ವಿಧಾನಸಭಾ ಕ್ಷೇತ್ರದಿಂದ ಸತತ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. 2008, 2013, 2018 ಹಾಗೂ

ಪುಟ 2ಕ್ಕೆ

## ದೇಶ ಟಾಪ್ 50ರ ಪ್ರವಾಸಿ ತಾಣದ ಪಟ್ಟಿಗೆ ಮೈಸೂರು ಸೇರ್ಪಡೆಗೆ ಸಂಸದರ ಮನವಿ

**ಮೈಸೂರು:** ವಿಶ್ವಮಟ್ಟದ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸುವ ಮಹತ್ವದ ಉದ್ದೇಶದೊಂದಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕೇಂದ್ರ ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್‌ರನ್ನು ಭೇಟಿ ಮಾಡಿ ಕೇಂದ್ರ ಬಜೆಟ್ 2025–26ರಲ್ಲಿ ಘೋಷಿಸಲಾದ "ಭಾರತದ 50 ಜಾಗತಿಕ ಮಟ್ಟದ ಸ್ಪರ್ಧಾತ್ಮಕ ಪ್ರವಾಸಿ ತಾಣಗಳ ಅಭಿವೃದ್ಧಿಗಾಗಿ ರಾಷ್ಟ್ರೀಯ ಮಿಷನ್" ಅಡಿಯಲ್ಲಿ ಮೈಸೂರನ್ನು ಸೇರಿಸುವಂತೆ ಅಧಿಕೃತ ಪ್ರಸ್ತಾವನೆಯನ್ನು ಸಲ್ಲಿಸಿದರು.

ಈ ಕುರಿತು ಮಾತನಾಡಿದ ಯದುವೀರ್ ಒಡೆಯರ್, ಮೈಸೂರು ತನ್ನ ಶ್ರೀಮಂತ ಪರಂಪರೆ, ರಾಜಮನೆತನದ ವೈಭವ ಹಾಗೂ ಶಾಶ್ವತ ಸಾಂಸ್ಕೃತಿಕ ಪರಂಪರೆಯಿಂದ ವಿಶ್ವದಾದ್ಯಂತ ಹೆಸರುವಾಸಿಯಾಗಿದೆ ಎಂದು ಹೇಳಿದರು. ಭಾರತದ ಅತ್ಯಂತ ಜನಪ್ರಿಯ ಪರಂಪರೆ ತಾಣಗಳಲ್ಲಿ ಒಂದಾದ ಮೈಸೂರು ಅರಮನೆ, ಜಾಗತಿಕ ಖ್ಯಾತಿಯ ಮೈಸೂರು ದಸರಾ, ಅದರ ಸಾಂಸ್ಕೃತಿಕ ಮಹತ್ವಕ್ಕಾಗಿ ಯುನೆಸ್ಕೋ ಮಾನ್ಯತೆ ಪಡೆದಿರುವುದು, ಯೋಗ ಮತ್ತು ವೆಲ್‌ನೆಸ್ ಕ್ಷೇತ್ರದಲ್ಲಿ ಮೈಸೂರಿನ ವಿಶಿಷ್ಟ ಸ್ಥಾನ, ಸಾಂಪ್ರದಾಯಿಕ ಕರಕುಶಲ ಕಲೆಗಳು, ಶ್ರೀಮಂತ ಕಲಾ ಸಂಸ್ಕೃತಿ ಹಾಗೂ ಉತ್ತಮ ರಸ್ತೆ, ರೈಲು ಮತ್ತು ವಿಮಾನ ಸಂಪರ್ಕ ವ್ಯವಸ್ಥೆ ಮೈಸೂರನ್ನು ಜಾಗತಿಕ ಪ್ರವಾಸಿ ತಾಣವನ್ನಾಗಿ ರೂಪಿಸಲು ಅತ್ಯುತ್ತಮ ಅಡಿಪಾಯವಾಗಿದೆ ಎಂದು ತಿಳಿಸಿದರು.



ಪ್ರತಿ ವರ್ಷ ಲಕ್ಷಾಂತರ ದೇಶೀಯ ಹಾಗೂ ವಿದೇಶಿ ಪ್ರವಾಸಿಗರು ಮೈಸೂರಿಗೆ ಭೇಟಿ ನೀಡುತ್ತಿರುವುದರಿಂದ, ಇದು ಭಾರತದ ಪ್ರಮುಖ ಪಾರಂಪರಿಕ ನಗರಗಳಲ್ಲಿ ಒಂದಾಗಿದೆ ಎಂದು ಅವರು ಹೇಳಿದರು. ಈ ರಾಷ್ಟ್ರೀಯ ಮಿಷನ್‌ಗೆ ಮೈಸೂರನ್ನು ಸೇರಿಸುವುದರಿಂದ ಪ್ರವಾಸೋದ್ಯಮ ಮೂಲಸೌಕರ್ಯ ಅಭಿವೃದ್ಧಿ, ಪ್ರವಾಸಿಗರಿಗೆ ಉತ್ತಮ ಸೌಲಭ್ಯಗಳು, ಪರಂಪರೆ ತಾಣಗಳ

ಪುಟ 2ಕ್ಕೆ

## ಜಿ.ಎಸ್.ಪಾಟೀಲ್ ಸ್ಪೀಕರ್, ಸಲೀಂ ಅಹ್ಮದ್ ಸಭಾಪತಿ

### ವಿಧಾನಸಭೆ ಉಪಸಭಾಧ್ಯಕ್ಷರಾಗಿ ಪೊನ್ನಣ್ಣ | ಉಮಾಶ್ರೀ ಉಪಸಭಾಪತಿ

**ಬೆಂಗಳೂರು:** ರಾಜ್ಯ ಸರ್ಕಾರದ ಸಂಪುಟ ವಿಸ್ತರಣೆ ಜೊತೆಯಲ್ಲಿಯೇ ಕಾಂಗ್ರೆಸ್ ಹೈಕಮಾಂಡ್ ರಾಜ್ಯ ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಪ್ರಮುಖ ಹುದ್ದೆಗಳಿಗೆ ಅಧಿಕೃತವಾಗಿ ಹೆಸರನ್ನು ಪ್ರಕಟಿಸಿದೆ. ದೆಹಲಿಯಲ್ಲಿ ನಡೆದ ಸರಣಿ ಸಭೆಗಳ ಬಳಿಕ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆಸಿ ವೇಣುಗೋಪಾಲ್ ಈ ಪಟ್ಟಿಯನ್ನು ಬಿಡುಗಡೆ ಮಾಡಿದ್ದಾರೆ.

ವಿಧಾನಸಭೆ ನೂತನ ಸ್ಪೀಕರ್ ಆಗಿ ಗದಗ ಜಿಲ್ಲೆಯ ರೋಣ ಕ್ಷೇತ್ರದ ಶಾಸಕ ಜಿ.ಎಸ್ ಪಾಟೀಲ್ ಅವರನ್ನು ಆಯ್ಕೆ ಮಾಡಲಾಗಿದೆ. ಪಾಟೀಲ್ ಅವರು ಹಿರಿಯ ಶಾಸಕರಾಗಿದ್ದಾರೆ. ವಿಧಾನಪರಿಷತ್‌ನ ನೂತನ ಸಭಾಪತಿ ಸ್ಥಾನಕ್ಕೆ ಕಾಂಗ್ರೆಸ್ ಹಿರಿಯ ನಾಯಕ ಸಲೀಂ ಅಹ್ಮದ್ ಅವರಹೆಸರನ್ನು ಅಂತಿಮಗೊಳಿಸಲಾಗಿದೆ

ವಿಧಾನಸಭೆ ಉಪಸಭಾಧ್ಯಕ್ಷರಾಗಿ ಕೊಡಗು ಜಿಲ್ಲೆಯ ವಿರಾಜಪೇಟೆ ಕ್ಷೇತ್ರದ ಶಾಸಕ ಎಎಸ್ ಪೊನ್ನಣ್ಣ ಅವರನ್ನು ನೇಮಿಸಲಾಗಿದೆ. ವಿಧಾನ ಪರಿಷತ್ ಉಪಸಭಾಪತಿ ಸ್ಥಾನಕ್ಕೆ ಹಿರಿಯ ನಾಯಕಿ ಮತ್ತು ಮಾಜಿ ಸಚಿವೆ ಉಮಾಶ್ರೀ ಅವರನ್ನು ಆಯ್ಕೆ ಮಾಡಲಾಗಿದೆ. ಸಮುದಾಯಗಳಿಗೆ ಸಮಾನ ಪ್ರಾತಿನಿಧ್ಯ ನೀಡಲು ಪ್ರಯತ್ನಿಸಿದೆ ಎನ್ನಲಾಗಿದೆ.





### ಹೊರಟ್ಟಿಗೆ ಕೊಕ್?

ಕಾಂಗ್ರೆಸ್ ಪಕ್ಷವು ವಿಧಾನ ಪರಿಷತ್ ನೂತನ ಸಭಾಪತಿ ಸ್ಥಾನಕ್ಕೆ ಸಲೀಂ ಅಹ್ಮದ್ ಅವರ ಹೆಸರನ್ನು ಅಂತಿಮಗೊಳಿಸುವ ಮೂಲಕ ಶೀಘ್ರದಲ್ಲೇ ಬಿಜೆಪಿಯ ಬಸವರಾಜ ಹೊರಟ್ಟಿ ಅವರು ರಾಜೀನಾಮೆ ಕೊಡಬೇಕಾಗಿದೆ. ಅಕಸ್ಮಾತ್, ಹೊರಟ್ಟಿ ರಾಜೀನಾಮೆ ಕೊಡದೇ ಹೋದರೆ ಸದನದಲ್ಲಿ ಹೆಚ್ಚು ಸದಸ್ಯರನ್ನು ಹೊಂದಿರುವ ಕಾರಣ ಕಾಂಗ್ರೆಸ್ ಅವಿಶ್ವಾಸ ನಿರ್ಣಯ ಮಂಡಿಸುವ ಸಾಧ್ಯತೆ ಇದೆ.

ಪುಟ 2ಕ್ಕೆ

## 11 ಮಾಜಿ ಸಚಿವರಿಗೆ ಕೋಕ್

### ಸಿದ್ದು ಆಪ್ತ ಮಹದೇವಪ್ಪಗೂ ಸಿಗದ ಸ್ಥಾನಮಾನ!

**ಬೆಂಗಳೂರು:** ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸಚಿವರಾಗಿದ್ದ ಎಚ್.ಡಿ.ಮಹಾದೇವಪ್ಪ, ಕೆ.ವೆಂಕಟೇಶ್ ಸೇರಿದಂತೆ ಹಲವು ಹಿರಿಯ ಸಚಿವರಿಗೆ ಕೋಕ್ ನೀಡಲಾಗಿದೆ. ಡಿ.ಕೆ.ಶಿವಕುಮಾರ್ ನೇತೃತ್ವದ ಸಂಪುಟದಲ್ಲಿ ಹಲವರಿಗೆ ಅವಕಾಶ ಸಿಕ್ಕಿಲ್ಲ. ಸಚಿವ ಸ್ಥಾನ ಕಳೆದುಕೊಂಡವರ ಪಟ್ಟಿ ಇಂತಿದೆ.




**ಎಚ್.ಸಿ.ಮಹಾದೇವಪ್ಪ:** ಸಮಾಜ ಕಲ್ಯಾಣ ಸಚಿವರಾಗಿದ್ದ ಟಿ.ನರಸೀಪುರ ಕ್ಷೇತ್ರದ ಶಾಸಕ ಎಚ್.ಸಿ.ಮಹಾದೇವಪ್ಪ ಅವರು ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದರು. ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಯಾಗಿದ್ದ ಅವರಿಗೆ ಈ ಬಾರಿ ಅವಕಾಶ ಸಿಕ್ಕಿಲ್ಲ. 2023ರಲ್ಲಿ ಅವರು ಲೋಕೋಪಯೋಗಿ ಸಚಿವರಾಗಿದ್ದರು.

**ಎಚ್.ಕೆ.ಪಾಟೀಲ:** ಕಳೆದ ಸಂಪುಟದಲ್ಲಿ ಕಾನೂನು ಮತ್ತು ಪ್ರವಾಸೋದ್ಯಮ ಸಚಿವರಾಗಿದ್ದ ಗದಗ ಕ್ಷೇತ್ರದ ಶಾಸಕ ಎಚ್.ಕೆ.ಪಾಟೀಲ ಅವರು ಈ ಹಿಂದೆ ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಸಂಸದೀಯ ವ್ಯವಹಾರ

## ಸಿದ್ದು ಆಪ್ತ ಪುಟ್ಟರಂಗಶೆಟ್ಟಿಗೆ ಕೊನೆಗೂ ಒಲಿದ ಸಚಿವ ಸ್ಥಾನ

**ಚಾಮರಾಜನಗರ:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಬಳಗದಲ್ಲಿ ಗುರುತಿಸಿಕೊಂಡಿರುವ ಚಾಮರಾಜನಗರ ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರಿಗೆ ಎರಡನೇ ಬಾರಿ ಸಚಿವ ಸ್ಥಾನ ಒಲಿದು ಬಂದಿದೆ.

ಪುಟ್ಟರಂಗಶೆಟ್ಟಿ ಅವರು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯವಾಗಿ ಅತ್ಯಂತ ಹಿಂದುಳಿದ ಉಪ್ಪಾರ ಸಮುದಾಯದ ಏಕೈಕ ಶಾಸಕ. ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನ ಉಪ್ಪಿನಮೋಳೆ ಗ್ರಾಮದ ಚಾಮಶೆಟ್ಟಿ ಹಾಗೂ ನಂಜಮ್ಮ ದಂಪತಿಯ 10 ಮಕ್ಕಳಲ್ಲಿ ಆರನೇಯವರಾದ ಪುಟ್ಟರಂಗಶೆಟ್ಟಿ ಪದವಿ ಶಿಕ್ಷಣ ಪಡೆದಿದ್ದಾರೆ. ಉಪ್ಪಾರರ ಸಂಘದ ರಾಜ್ಯಾಧ್ಯಕ್ಷರಾಗಿದ್ದರು.



ಪುಟ್ಟರಂಗಶೆಟ್ಟಿ ಅವರು ರಾಜಕೀಯ ಪ್ರವೇಶಿಸುವ ಮುನ್ನ ದಾವಣಗೆರೆ ಜಿಲ್ಲೆಯ ಎಪಿಎಂಸಿಯಲ್ಲಿ

ಪುಟ 2ಕ್ಕೆ

## 3 ಬಾರಿ ಬದಲಾದ ಪಟ್ಟಿ: ಮಲ್ಲಿಕಾರ್ಜುನ್ ಸೇರ್ಪಡೆ

**ಬೆಂಗಳೂರು:** ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವ ಸಂಪುಟ ವಿಸ್ತರಣೆ ಹಾಗೂ ಸ್ಪೀಕರ್ ಆಯ್ಕೆ ಪ್ರಕ್ರಿಯೆ ಸುತ್ತ ಸೋಮವಾರ ತೀವ್ರ ಕುತೂಹಲಕರ ಮತ್ತು ನಾಟಕೀಯ ಬೆಳವಣಿಗೆಗಳು ನಡೆದವು.

ಸರ್ಕಾರದ ಮಟ್ಟದಲ್ಲಿ ಹಾಗೂ ಪಕ್ಷದ ಹೈಕಮಾಂಡ್ ಹಂತದಲ್ಲಿ ಕೊನೆ ಕ್ಷಣದವರೆಗೂ ಬಾರೀ ಕಸರತ್ತು ನಡೆಯಿತು. ಕೇವಲ ಕೆಲವೇ ಗಂಟೆಗಳಲ್ಲಿ ಮೂರು ಬಾರಿ ಸಚಿವರ ಪಟ್ಟಿಯನ್ನು ಬದಲಿಸಲಾಯಿತು.

ಮುಖ್ಯಮಂತ್ರಿ ಡಿಕೆಶಿ ಅವರು, ಸ್ಪೀಕರ್ ಅಭ್ಯರ್ಥಿಯಾಗಿ ಹಿರಿಯ ನಾಯಕ ಟಿ.ಬಿ.ಜಯಚಂದ್ರ ಅವರ ಹೆಸರನ್ನು ಅಂತಿಮಗೊಳಿಸಿ ರಾಜ್ಯಪಾಲರಿಗೆ ಶಿಫಾರಸು ಪತ್ರ ರವಾನಿಸಿದ್ದರು. ಆದರೆ ಕೆಲವೇ ಗಂಟೆಗಳಲ್ಲಿ ಎಐಸಿಸಿ ಕಡೆಯಿಂದ ಜಿ.ಎಸ್.ಪಾಟೀಲ್ ಅವರ ಹೆಸರನ್ನು ಸ್ಪೀಕರ್ ಸ್ಥಾನಕ್ಕೆ ಶಿಫಾರಸು ಮಾಡುವ ಮೂಲಕ ಅಚ್ಚರಿ ಮೂಡಿಸಲಾಯಿತು.

ಎಐಸಿಸಿ ಬಿಡುಗಡೆ ಮಾಡಿದ

ಪುಟ 2ಕ್ಕೆ

### ಗಾಯತ್ರಿಗೆ ಕೊನೆಗೂ ಸಿಗದ ಸಚಿವ ಸ್ಥಾನ!

ಮಹಿಳಾ ಕೋಟಾದಡಿಯಲ್ಲಿ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ ಅವರಿಗೆ ಸಚಿವ ಸ್ಥಾನ ಒಲಿದುಬಂದಿತ್ತು. ಆದರೆ ತಮ್ಮ ಆಪ್ತರಾದ ಶಿವಣ್ಣನವರ್ ಅವರಿಗೆ ಸಚಿವ ಸ್ಥಾನ ಕೈತಪ್ಪಿದ್ದಕ್ಕೆ ಅಸಮಾಧಾನಗೊಂಡ ಸಿದ್ದರಾಮಯ್ಯ ಅವರು, ಗಾಯತ್ರಿ ಶಾಂತೇಗೌಡ ಅವರಿಗೆ ಪ್ರಮಾಣವಚನ ಸ್ವೀಕರಿಸದಂತೆ ಸೂಚನೆ ನೀಡಿದ್ದಾರೆ ಎನ್ನಲಾಗಿದೆ.

ಮೊದಲ ಪುಟದಿಂದ

## 11 ಮಾಜಿ ಸಚಿವರಿಗೆ ಕೋಕ್

ಸೇರಿದಂತೆ ಹಲವು ಖಾತೆಗಳನ್ನು ನಿರ್ವಹಿಸಿದ್ದರು. ಈ ಬಾರಿ ಸಚಿವ ಸ್ಥಾನದಿಂದ ವಂಚಿತರಾಗಿದ್ದಾರೆ.

**ದಿನೇಶ್ ಗುಂಡೂರಾವ್:** ಕಳೆದ ಸಂಪುಟದಲ್ಲಿ ಆರೋಗ್ಯ ಸಚಿವರಾಗಿದ್ದ ಗಾಂಧಿನಗರ ಕ್ಷೇತ್ರದ ಶಾಸಕ ದಿನೇಶ್ ಗುಂಡೂರಾವ್ ಅವರಿಗೆ ಡಿ.ಕೆ.ಶಿವಕುಮಾರ್ ಸಂಪುಟದಲ್ಲಿ ಸಚಿವ ಸ್ಥಾನ ಲಭಿಸಿಲ್ಲ. ಆಹಾರ ಸಚಿವರಾಗಿ ಹಾಗೂ ಕೆಪಿಸಿಸಿ ಅಧ್ಯಕ್ಷರಾಗಿ ಸೇರಿದಂತೆ ಪಕ್ಷ ಮತ್ತು ಸರ್ಕಾರದಲ್ಲಿ ವಿವಿಧ ಜವಾಬ್ದಾರಿ ನಿರ್ವಹಿಸಿದ್ದರು.

**ಕೆ.ವೆಂಕಟೇಶ್:** ಪಿರಿಯಾಪಟ್ಟಣ ಕ್ಷೇತ್ರದ ಶಾಸಕ ಕೆ.ವೆಂಕಟೇಶ್ ಅವರಿಗೂ ಈ ಬಾರಿ ಸಚಿವ ಸ್ಥಾನ ಕೈತಪ್ಪಿದೆ. ಹಿಂದಿನ ಸಂಪುಟದಲ್ಲಿ ಅವರು ಪಶುಸಂಗೋಪನೆ, ರೇಷ್ಮೆ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರಾಗಿದ್ದರು.

**ಶರಣಬಸಪ್ಪ ದರ್ಶನಾಪುರ:** ಶಹಾಪುರ ವಿಧಾನಸಭಾ ಕ್ಷೇತ್ರವನ್ನು ಐದು ಬಾರಿ ಪ್ರತಿನಿಧಿಸಿರುವ ಶರಣಬಸಪ್ಪ ದರ್ಶನಾಪುರ ಅವರು ಜೆ. ಎಚ್.ಪಟೇಲ್ ಸಂಪುಟದಲ್ಲಿ ಇಂಧನ ಸಚಿವರಾಗಿ, ಎಚ್.ಡಿ.ಕುಮಾರಸ್ವಾಮಿ ಸಂಪುಟದಲ್ಲಿ ಕೃಷಿ ಮಾರುಕಟ್ಟೆ ಸಚಿವರಾಗಿ ಹಾಗೂ ಸಿದ್ದರಾಮಯ್ಯ ಸಂಪುಟದಲ್ಲಿ ಸಣ್ಣ ಕೈಗಾರಿಕೆಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

**ಶಿವಾನಂದ ಪಾಟೀಲ:** ಬಸವನಬಾಗೇವಾಡಿ ಕ್ಷೇತ್ರದ ಶಾಸಕ ಶಿವಾನಂದ ಪಾಟೀಲ ಅವರು ಜವಳಿ, ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಖಾತೆಗಳನ್ನು ನಿರ್ವಹಿಸಿದ್ದರು.

**ಆರ್.ಬಿ.ತಿಮ್ಮಾಪುರ:** ಮುಧೋಳ ಕ್ಷೇತ್ರದ ಶಾಸಕ ಆರ್.ಬಿ.ತಿಮ್ಮಾಪುರ ಅವರು ಸಿದ್ದರಾಮಯ್ಯ ಸಂಪುಟದಲ್ಲಿ ಅಬಕಾರಿ ಸಚಿವರಾಗಿದ್ದರು.

**ಲಕ್ಷ್ಮೀ ಹೆಬ್ಬಾಳ್ಕರ್:** ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಸಿದ್ದರಾಮಯ್ಯ ಸಂಪುಟದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರಾಗಿದ್ದರು.

**ರಹೀಂಖಾನ್:** ಬೀದರ್ ಕ್ಷೇತ್ರದ ಶಾಸಕ ರಹೀಂ ಖಾನ್ ಅವರು ಸಿದ್ದರಾಮಯ್ಯ ಸಂಪುಟದಲ್ಲಿ ಪೌರಾಡಳಿತ ಮತ್ತು ಹಜ್ ಸಚಿವರಾಗಿದ್ದರು. ಈ ಹಿಂದೆ ಯುವಜನ ಸೇವೆ ಮತ್ತು ಕ್ರೀಡಾ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು.

**ಎನ್.ಎಸ್.ಬೋಸರಾಜು:** ವಿಧಾನ ಪರಿಷತ್ ಸದಸ್ಯರಾಗಿರುವ ಎನ್.ಎಸ್.ಬೋಸರಾಜು ಅವರು ಸಿದ್ದರಾಮಯ್ಯ ಸಂಪುಟದಲ್ಲಿ ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾಗಿದ್ದರು. ರಾಯಚೂರು ಜಿಲ್ಲೆಯ ಪ್ರಮುಖ ಕಾಂಗ್ರೆಸ್ ನಾಯಕರಾಗಿರುವ ಅವರಿಗೆ ಈ ಬಾರಿ ಸಂಪುಟದಲ್ಲಿ ಸ್ಥಾನ ದೊರೆತಿಲ್ಲ.

**ಎಂ.ಸಿ.ಸುಧಾಕರ್:** ಚಿಂತಾಮಣಿ ಕ್ಷೇತ್ರದ ಶಾಸಕ ಎಂ.ಸಿ.ಸುಧಾಕರ್ ಅವರು ಸಿದ್ದರಾಮಯ್ಯ ಸಂಪುಟದಲ್ಲಿ ಉನ್ನತ ಶಿಕ್ಷಣ ಸಚಿವರಾಗಿದ್ದರು. ಈ ಹಿಂದೆ ಕೂಡ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

**ಮಂಕಾಳ ವೈದ್ಯ:** ಉತ್ತರ ಕನ್ನಡ ಜಿಲ್ಲೆಯ ಭಟ್ಕಳ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿರುವ ಮಂಕಾಳ ಸುಬ್ಬಾ ವೈದ್ಯ ಅವರು 2023ರಲ್ಲಿ ಭಟ್ಕಳ ಕ್ಷೇತ್ರದಿಂದ ಗೆದ್ದು ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಮೀನುಗಾರಿಕೆ ಮತ್ತು ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಹೈಕಮಾಂಡ್ ಕಳುಹಿಸಿದ ಪಟ್ಟಿಯಲ್ಲಿ ಹೆಸರಿತ್ತು. ಆದರೆ ಕೊನೇ ಕ್ಷಣದಲ್ಲಿ ಅವರ ಹೆಸರನ್ನು ಕೈಬಿಡಲಾಯಿತು.

## ಒಲಿದ ಸಚಿವ ಸ್ಥಾನ

ಗುಮಾಸ್ತರಾಗಿದ್ದರು. ಮೊದಲ ಬಾರಿಗೆ ಗೌಡಳ್ಳಿ ಮಂಡಲ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾದರು. ನಂತರ ಎರಡು ಬಾರಿ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ, ಚಾಮರಾಜನಗರ ಎಪಿಎಂಸಿ ಅಧ್ಯಕ್ಷರಾಗಿ, ಜಿಲ್ಲಾ ಪಂಚಾಯಿತಿ ಅಧ್ಯಕ್ಷರಾಗಿದ್ದರು. 2008ರಲ್ಲಿ ಮೊದಲ ಬಾರಿಗೆ ಶಾಸಕರಾದರು. 2013, 2018 ಮತ್ತು 2023ರಲ್ಲಿ ಸತತ ನಾಲ್ಕು ಬಾರಿ ಚಾಮರಾಜನಗರ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದಾರೆ. ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ, ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯಾಗಿ, 2018ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ.

### ಸಿ.ಪುಟ್ಟರಂಗಶೆಟ್ಟಿ

**2023ರಲ್ಲಿಯೂ ಶಾಸಕರಾಗಿ ಆಯ್ಕೆಯಾದ ಇವರು, ಇದೀಗ ಡಿಕೆಶಿ ಸಂಪುಟದಲ್ಲಿಯೂ ಸಚಿವರಾಗಿದ್ದಾರೆ.**

### ಲಕ್ಷ್ಮಣ ಸವದಿ

ಬೆಳಗಾವಿ ಜಿಲ್ಲೆಯ ಅಥಣಿ ವಿಧಾನಸಭಾ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿರುವ ಲಕ್ಷ್ಮಣ ಸವದಿ ಬಿಜೆಪಿಯಿಂದ ಮೂರು ಬಾರಿ ಶಾಸಕರಾಗಿ ಹಾಗೂ ಒಂದು ಬಾರಿ ಎಂಎಲ್ಸಿ ಆಗಿದ್ದರು. 2023ರಲ್ಲಿ ಕಾಂಗ್ರೆಸ್ ಸೇರಿ ಶಾಸಕರಾದರು. ಬಿಜೆಪಿಯ ಯಡಿಯೂರಪ್ಪ ಸಂಪುಟದಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು. ಡಿ.ಕೆ.ಶಿ ಸಂಪುಟದಲ್ಲಿ ಸಚಿವರಾಗಿದ್ದಾರೆ.

### ಬಸವರಾಜ ರಾಯರೆಡ್ಡಿ

ಕೊಪ್ಪಳ ಜಿಲ್ಲೆಯ ಯಲಬುರ್ಗಾ ಕ್ಷೇತ್ರದ ಶಾಸಕರಾಗಿರುವ ಬಸವರಾಜ ರಾಯರೆಡ್ಡಿ ಐದು ಬಾರಿ ಶಾಸಕರಾಗಿ ಹಾಗೂ ಒಂದು ಬಾರಿ ಸಂಸದರಾಗಿ ಆಯ್ಕೆಯಾಗಿದ್ದಾರೆ. 1985ರಲ್ಲಿ ಮೊದಲ ಬಾರಿಗೆ ಜನತಾ ಪಕ್ಷದ ಅಭ್ಯರ್ಥಿಯಾಗಿ ಯಲಬುರ್ಗಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದರು. ನಂತರ 1989, 1994, 2013, 2023 ರಲ್ಲಿ ಶಾಸಕರಾಗಿದ್ದಾರೆ. 1996ರಲ್ಲಿ ಒಂದು ಬಾರಿ ಕೊಪ್ಪಳ ಲೋಕಸಭಾ ಕ್ಷೇತದಿಂದ ಸಂಸದರಾಗಿದ್ದರು. 2013 ರಿಂದ 2018ರವರೆಗೆ ಸಿದ್ದರಾಮಯ್ಯ ಸರ್ಕಾರದಲ್ಲಿ ಉನ್ನತ ಶಿಕ್ಷಣ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

### ಕೆ.ಎಸ್.ಬಸವಂತಪ್ಪ

ದಾವಣಗೆರೆ ಜಿಲ್ಲೆಯ ಮಾಯಕೊಂಡ ವಿಧಾನಸಭಾ ಕ್ಷೇತ್ರದಿಂದ 2023ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಇದೀಗ ಅವರು ಡಿ.ಕೆ. ಶಿವಕುಮಾರ್ ಸಂಪುಟದಲ್ಲಿ ಸಚಿವರಾಗಿದ್ದಾರೆ.

### ಟಿ.ರಘುಮೂರ್ತಿ

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರದಿಂದ 2013ರಿಂದ 2023ರವರೆಗೆ ಸತತ ಮೂರನೇ ಅವಧಿಗೆ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಮೊದಲ ಬಾರಿಗೆ ಸಚಿವ ಸಂಪುಟದಲ್ಲಿ ಅವಕಾಶ ಪಡೆದಿದ್ದಾರೆ.

## ರಾಜೀನಾಮೆಗೆ ಮುಂದಾದ ಯಶವಂತರಾಯ, ಬೇಳೂರು

ಬೆಂಗಳೂರು: ಸಚಿವ ಸ್ಥಾನ ಕೈತಪ್ಪಿರುವ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಇಬ್ಬರು ಶಾಸಕರು ರಾಜೀನಾಮೆಗೆ ಮುಂದಾಗಿದ್ದಾರೆ. ಅಲ್ಲದೆ ರಾಜ್ಯದ ವಿವಿಧೆಡೆ ಸಚಿವ ಕೈತಪ್ಪಿದ ಶಾಸಕರ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ. ಕಾಂಗ್ರೆಸ್‌ನಲ್ಲಿ ಆಕ್ರೋಶ ಸ್ಫೋಟಗೊಂಡಿದೆ.

ಸೋಮವಾರ ಸಚಿವರ ಪಟ್ಟಿಯನ್ನು ಕಾಂಗ್ರೆಸ್ ಹೈಕಮಾಂಡ್ ನೂತನ ಸಚಿವರ ಪಟ್ಟಿ ಪ್ರಕಟಿಸಿದ ಬೆನ್ನಲ್ಲೇ ಇಂಡಿ ಶಾಸಕ ಯಶವಂತರಾಯಗೌಡ ಪಾಟೀಲ, ಸಾಗರ ಶಾಸಕ ಬೇಳೂರು ಗೋಪಾಲಕೃಷ್ಣ ಆಕ್ರೋಶ ಹೊರಹಾಕಿದ್ದಾರೆ. ರಾಜೀನಾಮೆ ನೀಡುವ ಇಂಗಿತ ವ್ಯಕ್ತಪಡಿಸಿದ್ದಾರೆ. ಅಲ್ಲದೆ ಯಶವಂತರಾಯಗೌಡ ಪಾಟೀಲ, ಬೇಳೂರು ಗೋಪಾಲಕೃಷ್ಣ ಸೇರಿದಂತೆ ಹಲವು ಶಾಸಕರು ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದರು. ಕಾಂಗ್ರೆಸ್ ನಲ್ಲಿ ಬಹಿರಂಗ ಅಸಮಾಧಾನ ಭುಗಿಲೆದ್ದಿದೆ.

## ತನ್ವೀರ್ ಸೇಠ್ ಅಸಮಾಧಾನ

ಮೈಸೂರು: ಬಹಿರಂಗವಾಗಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದವರಿಗೆ ಸಚಿವ ಸ್ಥಾನ ಸಿಕ್ಕಿದೆ ಎಂದು ಶಾಸಕ ತನ್ವೀರ್ ಸೇಠ್ ಅಸಮಾಧಾನ ವ್ಯಕ್ತಪಡಿಸಿದರು. ಸಿಎಂ ಡಿಕೆ ಶಿವಕುಮಾರ್ ಸಂಪುಟದಲ್ಲಿ ಸಚಿವ ಸ್ಥಾನ ಕೈತಪ್ಪಿದ ಹಿನ್ನೆಲೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಆಸೆ ನಿರಾಸೆ ಆಗಿದೆ. ರಾಹುಲ್ ಗಾಂಧಿ ಪದ ಬಳಕೆ ಮಾಡಿದ್ದಕ್ಕೆ ಕೆ.ಎನ್.ರಾಜಣ್ಣರನ್ನು ಸಚಿವ ಸ್ಥಾನದಿಂದ ವಜಾ ಮಾಡಿದರು. ಮೈಸೂರು ಪ್ರಾಂತ್ಯಕ್ಕೆ ಸಿಗಬೇಕಾದ ಶಕ್ತಿ ಸಿಕ್ಕಿಲ್ಲ. ಇದು ಆಶಾದಾಯಕ ಪಟ್ಟಿಯಲ್ಲ ಎಂದು ಟೀಕಿಸಿದರು. ನನ್ನ ಅಭಿಮಾನಿಗಳು ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧ. ನನಗೆ ಸಿಗಬೇಕಾದ ಗೌರವ ಸಿಗಲಿಲ್ಲ. ಕಾರ್ಯಕರ್ತರು ಏನೂ ಹೇಳುತ್ತಾರೋ ಅದೇ ರೀತಿ ಮಾಡುತ್ತೇನೆ. ಯಾವ ಮಾನದಂಡದ ಮೇಲೆ ಸಚಿವ ಸಂಪುಟ ರಚನೆ ಆಗಿದೆಯೋ ಗೊತ್ತಿಲ್ಲ. ಪಕ್ಷಕ್ಕೆ ಸವಾಲು ಹಾಕಿದವರಿಗೆ ಸಚಿವ ಸ್ಥಾನ ಸಿಗುತ್ತಿದೆ. ಪಕ್ಷಕ್ಕೆ ನಿಷ್ಠರಾಗಿದ್ದವರಿಗೆ ಇಲ್ಲ ಎಂದು ಜಮೀರ್ ಅಹ್ಮದ್ ಹೆಸರು ಹೇಳದೆ ಬೇಸರ ವ್ಯಕ್ತಪಡಿಸಿದರು.

### ನವ ಶಕ್ತಿದೇವತೆಗಳ ಕರಗ ಮಹೋತ್ಸವ

# ನಗರಸಭೆ ವತಿಯಿಂದ ಆರ್ಥಿಕ ಸಹಕಾರ

## ನಗರಸಭಾಧ್ಯಕ್ಷ ಕೆ.ಶೇಷಾದ್ರಿ ಮತ್ತು ಸದಸ್ಯರಿಂದ ಚೆಕ್‌ಗಳ ವಿತರಣೆ

**ರಾಮನಗರ:** ಸಾಮಾಜಿಕ, ಶೈಕ್ಷಣಿಕ ಅಗತ್ಯತೆಗಳಿಗೆ ವಿವಿಧ ಕಾರ್ಯಕ್ರಮಗಳನ್ನು ಜಾರಿ ಮಾಡುವುದು ಮತ್ತು ಆರ್ಥಿಕ ಸಹಕಾರದ ಮೂಲಕ ಸ್ಪಂದಿಸಿ, ಉತ್ತಮ ಜನಾಭಿಪ್ರಾಯಗಳಿಸುತ್ತಿರುವ ಕೆ.ಶೇಷಾದ್ರಿ ನೇತೃತ್ವದ ನಗರಸಭಾ ಆಡಳಿತ ಇದೀಗ ಧಾರ್ಮಿಕ ವಿಚಾರಗಳಲ್ಲಿಯೂ ಸ್ಪಂದಿಸುವ ಉದಾರ ಮನೋಭಾವ ಪ್ರದರ್ಶಿಸಿದೆ. ನಗರದಲ್ಲಿ ನಡೆಯುವ 9 ಶಕ್ತಿ ದೇವತೆಗಳ ಕರಗ ಮಹೋತ್ಸವಕ್ಕೆ ನಗರಸಭೆಯವತಿಯಿಂದ ಆರ್ಥಿಕ ಸಹಕಾರ ನೀಡಲಾಗಿದ್ದು, ನಗರ ವ್ಯಾಪ್ತಿಯ ನಿವಾಸಿಗಳು ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



### ಆಯವ್ಯಯದಲ್ಲಿ 5 ಲಕ್ಷ ಮೀಸಲು

**ನವ ಶಕ್ತಿ ದೇವತೆಗಳ ಕರಗ ಮಹೋತ್ಸವ ನಡೆಯುವ ದೇವಾಲಯಗಳ ಉಸ್ತುವಾರಿಗಳು ಮತ್ತು ಕರಗಧಾರಕರಿಗೆ ಆರ್ಥಿಕ ಸಹಾಯದ ಚೆಕ್‌ಗಳನ್ನು ಅಧ್ಯಕ್ಷ ಕೆ.ಶೇಷಾದ್ರಿ ನಗರಸಭೆಯ ಸಭಾಂಗಣದಲ್ಲಿ ಹಸ್ತಾಂತರಿಸಿದರು. ಈ ವೇಳೆ ಮಾತನಾಡಿದ ಅವರು ಧಾರ್ಮಿಕ ಆಚರಣೆಗಳು ಸಮುದಾಯದ ಒತ್ತಾಸೆಯಾಗಿರಬೇಕು ಎಂಬ ಉದ್ದೇಶ ನಗರಸಭೆಯ ಆಡಳಿತಕ್ಕಿದೆ. ಈ ವಿಚಾರದಲ್ಲಿ ಪಕ್ಷ ಬೇಧ ಮರೆತು ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳು ಕರಗ ಮಹೊತ್ಸವಕ್ಕೆ ಆರ್ಥಿಕ ಸಹಾಯ ನೀಡಲು ಒಮ್ಮತದ ಒಪ್ಪಿಗೆ ಸೂಚಿಸಿದ್ದಾರೆ. 2026-27ನೇ ಸಾಲಿನ ಆಯವ್ಯಯದಲ್ಲಿ ಈ ಸಂಬಂಧ 5 ಲಕ್ಷ ರೂ ಮೀಸಲಿಡಲಾಗಿತ್ತು. ಇದೀಗ ಕರಗ ಮಹೋತ್ಸವದ ಸಮಯ ಆರ್ಥಿಕ ಸಹಾಯದ ಚೆಕ್ಕುಗಳನ್ನು ವಿತರಿಸಲಾಗುತ್ತಿದೆ ಎಂದು ತಿಳಿಸಿದರು.**

### ಆರ್ಥಿಕ ಸಹಕಾರ ಏಕೆ?

ರಾಮನಗರದಲ್ಲಿ ಕರಗ ಮಹೋತ್ಸವಗಳ ಆಚರಣೆ ದಶಕಗಳಿಂದ ನಡೆದುಕೊಂಡು ಬರುತ್ತಿದೆ. ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗಕ್ಕೆ 10 ದಶಕಗಳ ಇತಿಹಾಸವಿದೆ.
ಬಹಳ ಹಿಂದೆ ಗ್ರಾಮಗಳಿದ್ದ ವೇಳೇ ಆಯಾಭಾಗದಲ್ಲಿ ಕರಗ ಆಚರಣೆ ಪರಂಪರೆಯಾಗಿದೆ. ಬಡ ಕುಟುಂಬಗಳು ಸಹ ಕರಗ ಮಹೋತ್ಸವವನ್ನು ಅತ್ಯಂತ ಭಕ್ತಿ ಮತ್ತು ಶ್ರದ್ದೆಯಿಂದ ಆಚರಿಸಿಕೊಂಡು ಬಂದಿದ್ದಾರೆ.
ಗ್ರಾಮದ ಹಬ್ಬದಂತೆ ನಡೆದುಕೊಂಡು ಬರುತ್ತಿರುವ ಈ ಆಚರಣೆಗೆ ಆರ್ಥಿಕವಾಗಿ ಹಿಂದುಳಿದ ಕುಟುಂಬ ಗಲು ಸೇರಿ ಎಲ್ಲ ಕುಟುಂಬಗಳು ತಮ್ಮ ಕೈಲಾದಷ್ಟು ದೇಣಿಗೆ ನೀಡಿ ದೇವರಿಗೆ ಅಲಂಕಾರ ಸೇವೆ, ಗ್ರಾಮದಲ್ಲಿ ಹಬ್ಬದ ವಾತಾವರಣ ಸೃಜನೆಗೆ ಸಹಕಾರ ನೀಡಿಕೊಂಡು ಬರುತ್ತಿದ್ದರು. ಇದೀಗ ಈ ಗ್ರಾಮಗಳು ನಗರಸಭೆಯ ಭಾಗವಾಗಿ ವಾರ್ಡುಗಳ ರೂಪ ಪಡೆದುಕೊಂಡಿವೆ.
ಕರಗ ಆಚರಣೆ ನಿರಂತರವಾಗಿ ನಡೆಯುತ್ತಿದೆ. ಈ ಆಚರಣೆಗಳು ಸಮಾಜದ ಆಚರಣೆಗಳಾಗಿ ಹೊರಹೊಮ್ಮಿದ್ದು, ಈ ಒತ್ತಾಸೆ ಇರಬೇಕು ಎಂಬ ಉದ್ದೇಶದಲ್ಲಿ ನಗರಸಭೆವತಿಯಿಂದ ಆರ್ಥಿಕ ಸಹಕಾರ ನೀಡಲಾಗುತ್ತಿದೆ ಎಂದು ವಿವರಿಸಿದರು.

### ಯಾವ್ಯಾವ ಕರಗ ಮಹೋತ್ಸವಗಳಿಗೆ ಸಹಕಾರ

ಭಂಡಾರಮ್ಮ, ಮ್ಮಗದ ಕೇರಿ ಮಾರಮ್ಮ, ಗಾಂಧಿ ನಗರದ ಆಧಿಶಕ್ತಿ, ಐಜೂರಿನ ಆಧಿಶಕ್ತಿ, ಕೊಂಕಾಣಿ ದೊಡ್ಡಿಯ ಆಧಿಶಕ್ತಿ, ಬಿಸಿಲು ಮಾರಮ್ಮ, ಗಿಂಡಿ ಕರಗ, ಮುತ್ತುಮಾರಮ್ಮ ಮತ್ತು ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಮಹೋತ್ಸವಕ್ಕೆ ನಗರಸಭೆವತಿಯಿಂದ ಆರ್ಥಿಕ ಸಹಕಾರ ನೀಡಲಾಗುತ್ತಿದೆ ಎಂದರು.


### ಶಾಂತಿ, ಸೌಹಾರ್ದತೆ ಕಾಪಾಡಲು ಮನವಿ

ಕರಗ ಮಹೋತ್ಸವವನ್ನು ವೀಕ್ಷಿಸಲು ಲಕ್ಷಾಂತರ ಮಂದಿ ಆಗಮಿಸುವುದು ಸಹ ವಾಡಿಕೆಯಾಗಿದೆ. ಯಾರೊಬ್ಬರಿಗೂ ಅನಾನುಕೂಲವಾಗದಂತೆ ಆಯಾ ದೇವಾಲಯಗಳ ಉಸ್ತುವಾರಿಗಳು, ಆಡಳಿತ ಮಂಡಳಿ ಸದಸ್ಯರು, ಪದಾಧಿಕಾರಿಗಳು ಸೂಕ್ತ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು. ಎಲ್ಲ ನಾಗರೀಕರು ಜಾತಿ, ಧರ್ಮ ಮರೆತು ಎಲ್ಲರೂ ಒಟ್ಟಾಗಿ ಈ ಆಚರಣೆಯಲ್ಲಿ ಭಾಗಿಯಾಗಬೇಕು. ಶಾಂತಿ ಮತ್ತು ಸೌಹಾರ್ಧತೆಯನ್ನು ಕಾಪಾಡಬೇಕು ಎಂದು ಮನವಿ ಮಾಡಿದರು. ವೇದಿಕೆಯಲ್ಲಿ ನಗರಸಭೆಯ ಉಪಾಧ್ಯಕ್ಷೆ ಗಿರಿಜಮ್ಮ, ಸ್ಥಾಯಿ ಸಮಿತಿ ಅಧ್ಯಕ್ಷ ಆರಿಫ್, ಸದಸ್ಯರುಗಳಾದ ಸೋಮಶೇಖರ್ (ಮಣಿ), ಮಂಜುನಾಥ್, ಅಜ್ಮತ್, ಮುತ್ತುರಾಜ್, ಅಧಿಕಾರಿಗಳು ಉಪಸ್ಥಿತರಿದ್ದರು.



## 2ನೇ ಬಾರಿಗೆ ಸಚಿವರಾದ ಪುಟ್ಟರಂಗಶೆಟ್ಟಿ

ಚಾಮರಾಜನಗರ, ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ಹಿಂದುಳಿದ ಜಿಲ್ಲೆಯಾದ ಚಾಮರಾಜನಗರಕ್ಕೆ ಸಚಿವ ಸ್ಥಾನ ದೊರೆತಿದ್ದು, ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಶಾಸಕ ಸಿ. ಪುಟ್ಟರಂಗಶೆಟ್ಟಿ ಎರಡನೇ ಬಾರಿಗೆ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.



ಉಪ್ಪಾರ ಸಮುದಾಯದ ಪ್ರಮುಖ ನಾಯಕರಾಗಿರುವ ಸಿ. ಪುಟ್ಟರಂಗಶೆಟ್ಟಿ ರಾಜ್ಯದಲ್ಲಿ ಉಪ್ಪಾರ ಸಮಾಜವನ್ನು ಪ್ರತಿನಿಧಿಸುವ ಏಕೈಕ ಶಾಸಕರಾಗಿದ್ದು, ಅವರಿಗೆ ಮತ್ತೊಮ್ಮೆ ಸಚಿವ ಸ್ಥಾನ ದೊರೆತಿದೆ.

ಸಿ. ಪುಟ್ಟರಂಗಶೆಟ್ಟಿ ಚಾಮರಾಜನಗರ ವಿಧಾನಸಭಾ ಕ್ಷೇತ್ರ ದಿಂದ ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವಧಿಯಲ್ಲಿ 2018ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಜೊತೆಗೆ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿ, ಮುಖ್ಯಮಂತ್ರಿಗಳ ಸಂಸದೀಯ ಕಾರ್ಯದರ್ಶಿಯಾಗಿ ಹಾಗೂ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು. ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕೇಂದ್ರ ರೈಲ್ವೆ ಸಚಿವ ವಿ. ಸೋಮಣ್ಣ ಅವರನ್ನು ಸೋಲಿಸಿ ಸತತ ನಾಲ್ಕು ಬಾರಿಗೆ ಗೆಲುವು ಸಾಧಿಸಿದ್ದ ಸಿ. ಪುಟ್ಟರಂಗಶೆಟ್ಟಿ ಅವರಿಗೆ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಮಂತ್ರಿ ಮಂಡಲದಲೀ ಕೊನೆಗೂ ಸಚಿವ ಸ್ಥಾನ ದೊರೆತಿದ್ದು ಹಲವು ವರ್ಷಗಳ ಬಳಿಕ ಜಿಲ್ಲೆಗೆ ಪ್ರಾತಿನಿಧ್ಯ ದೊರಕಿದೆ.

ಚಾಮರಾಜನಗರದಲ್ಲಿ ಮೂಲ ಸೌಕರ್ಯ, ಉದ್ಯೋಗ, ಕೈಗಾರಿಕೆ, ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಮತ್ತಷ್ಟು ವೇಗ ನೀಡಬೇಕಿದೆ. ಎರಡನೇ ಬಾರಿಗೆ ಸಚಿವರಾಗಿರುವ

ಸಿ. ಪುಟ್ಟರಂಗಶೆಟ್ಟಿ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಯಾವ ರೀತಿಯ ಆದ್ಯತೆ ನೀಡಲಿದ್ದಾರೆ ಎಂಬುದು ಈಗ ಜಿಲ್ಲೆಯ ಜನರ ಕುತೂಹಲದ ವಿಷಯವಾಗಿದೆ.

## ರೋಟರಿ ಸಂಸ್ಥೆಯಲ್ಲಿ ಕಣ್ಣಿನ ತಪಾಸಣೆ

ಚಾಮರಾಜನಗರ: ರೋಟರಿ ಸಂಸ್ಥೆ ವತಿಯಿಂದ ನಗರದಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ನಡೆಯಿತು.

ನಗರದ ಬಿ.ರಾಚಯ್ಯ ಜೋಡಿರಸ್ತೆಯಲ್ಲಿರುವ ರೋಟರಿ ಭವನದಲ್ಲಿ ರೋಟರಿ ಸಂಸ್ಥೆ, ಅರವಿಂದ ಕಣ್ಣಿನ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ನಡೆದ ಉಚಿತ ಕಣ್ಣಿನ ತಪಾಸಣೆ ಶಿಬಿರದಲ್ಲಿ 260

ಮಂದಿ ತಪಾಸಣೆ ಮಾಡಿಸಿಕೊಂಡರು. 110 ಮಂದಿ ಶಸ್ತ್ರಚಿಕಿತ್ಸೆಗೆ ಆಯ್ಕೆಯಾಗಿದ್ದು, ಅವರನ್ನು ಕೊಯಮತ್ತೂರಿನ ಅರವಿಂದ ಕಣ್ಣಿನ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಬಿರದಲ್ಲಿ ವ್ಯವಸ್ಥೆ ಮಾಡಲಾಯಿತು. ರೋಟರಿ ಅಧ್ಯಕ್ಷ ಅಬ್ದುಲ್ ಅಜೀಜ್ ದೀನಾ, ರೋಟರಿ ಸಂಸ್ಥೆಯು ಕಣ್ಣಿನ ಆರೋಗ್ಯದ ಕಡೆ ಗಮನಹರಿಸುವುದು ಇಂದಿನ ಡಿಜಿಟಲ್ ಯುಗದಲ್ಲಿ ಅತ್ಯಗತ್ಯವಾಗಿದೆ. ಈ ಶಿಬಿರಕ್ಕೆ ಹೊರ ಜಿಲ್ಲೆಗಳಿಂದ ಜನತೆ ಬರುತ್ತಿದ್ದು, ಶಿಬಿರದ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಪ್ರತಿ ತಿಂಗಳು ಮೊದಲನೆಯ ಭಾನುವಾರ ಉಚಿತ ನೇತ್ರ ತಪಾಸಣಾ ಶಿಬಿರವನ್ನು ಅಯೋಜಿಸುತ್ತಿದ್ದು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಪ್ರಯೋಜನ ಪಡೆಯುತ್ತಿರುವುದು



ತುಂಬಾ ಸಂತಸವಾಗಿದ್ದು,ಮುಂದಿನ ಶಿಬಿರದ ಸದುಪಯೋಗವನ್ನು ಜನತೆ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಜಿ.ಅಂಕಶೆಟ್ಟಿ, ರೋಟರಿ ಸಂಸ್ಥಾಪಕ ಸದಸ್ಯ ಜಿ.ಆರ್.ಅಶ್ವಥ್ ನಾರಾಯಣ್, ಜಿಲ್ಲಾ ಸಹಾಯಕ ಗೌರ್ನರ್ ಸುರೇಶ್, ನಿರ್ಗಮಿತ ಅಧ್ಯಕ್ಷ ಕಾಗಲವಾಡಿ ಚಂದ್ರು, ಸಿ.ಎನ್.ಚಂದ್ರಪ್ರಭಜೈನ್, ಪ್ರಕಾಶ್, ಎಸ್ ಅರ್ ಎಸ್ ಶ್ರೀನಿವಾಸ, ಎ.ಶ್ರೀನಿವಾಸನ್, ಖಜಾಂಚಿ ಆರ್.ಎಂ.ಸ್ವಾಮಿ, ಬಿ.ಕೆ.ಮೋಹನ್, ಮಹಾದೇವಸ್ವಾಮಿ, ಪಿ ಆರ್ ಓ ವಿಜಯಕಾಂತ್, ಮನೋಜ್, ಸವಿತಾ ಇತರರು ಹಾಜರಿದ್ದರು

ಮೊದಲ ಪುಟದಿಂದ

## ಮಲ್ಲಿಕಾರ್ಜುನ್ ಸೇರ್ಪಡೆ

ಮೊದಲ ಸಚಿವರ ಪಟ್ಟಿಯಲ್ಲಿ ಮಂಕಾಳು ವೈದ್ಯ ಅವರ ಹೆಸರು ಪ್ರಕಟವಾಗಿತ್ತು. ಆದರೆ ನಂತರದ ರಾಜಕೀಯ ಬೆಳವಣಿಗೆಯಲ್ಲಿ, ಮಂಕಾಳು ವೈದ್ಯ ಅವರ ಸ್ಥಾನದಲ್ಲಿ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಅವಕಾಶ ಕಲ್ಪಿಸಿ ಎರಡನೇ ಪಟ್ಟಿಯನ್ನು ಹೊರಡಿಸಲಾಯಿತು. ಸಂಪುಟ ವಿಸ್ತರಣೆಯ ಅಧಿಕೃತ ಪಟ್ಟಿ ಪ್ರಕಟವಾದ ಬೆನ್ನಲ್ಲೇ ಕಾಂಗ್ರೆಸ್ ಅಂಗಳದಲ್ಲಿ ಆಂತರಿಕ ಅಸಮಾಧಾನ ಮತ್ತು ಗೊಂದಲಗಳು ತೀವ್ರ ಸ್ವರೂಪ ಪಡೆದುಕೊಂಡಿದೆ.

## ಸಂಸದರ ಮನವಿ

ಸಂರಕ್ಷಣೆ, ಸುಸ್ಥಿರ ಪ್ರವಾಸೋದ್ಯಮಕ್ಕೆ ಉತ್ತೇಜನ ಹಾಗೂ ಸಾರ್ವಜನಿಕ ಮತ್ತು ಖಾಸಗಿ ಹೂಡಿಕೆಗಳನ್ನು ಆಕರ್ಷಿಸಲು ಹೆಚ್ಚಿನ ಅವಕಾಶಗಳು ದೊರೆಯಲಿವೆ ಎಂದು ತಿಳಿಸಿದರು.

### ಜಲಾಶಯಗಳ ನೀರಿನ ಮಟ್ಟ

| | |
|---|---|
| **ಕೆ ಆರ್ ಎಸ್** | |
| ಗರಿಷ್ಠ ಮಟ್ಟ | 124.80 ಅಡಿ |
| ಇಂದಿನ ಮಟ್ಟ | 102.09 ಅಡಿ |
| ಒಳಹರಿವು | 32149 ಕ್ಯುಸೆಕ್ |
| ಹೊರ ಹರಿವು | 1884 ಕ್ಯುಸೆಕ್ |
| **ಕಬಿನಿ ಜಲಾಶಯ** | |
| ಗರಿಷ್ಠ ಮಟ್ಟ | 2284 ಅಡಿ |
| ಇಂದಿನ ಮಟ್ಟ | 2281.71 ಅಡಿ |
| ಒಳಹರಿವು | 27115 ಕ್ಯುಸೆಕ್ |
| ಹೊರ ಹರಿವು | 25000 ಕ್ಯುಸೆಕ್ |
| **ಹಾರಂಗಿ ಜಲಾಶಯ** | |
| ಗರಿಷ್ಠ ಮಟ್ಟ | 2859 ಅಡಿ |
| ಇಂದಿನ ಮಟ್ಟ | 2856.92 ಅಡಿ |
| ಒಳಹರಿವು | 7000 ಕ್ಯುಸೆಕ್ |
| ಹೊರ ಹರಿವು | 7000 ಕ್ಯುಸೆಕ್ |
| **ಹೇಮಾವತಿ ಜಲಾಶಯ** | |
| ಗರಿಷ್ಠ ಮಟ್ಟ | 2922 ಅಡಿ |
| ಇಂದಿನ ಮಟ್ಟ. | 2911.75 ಅಡಿ |
| ಒಳಹರಿವು | 12859 ಕ್ಯುಸೆಕ್ |
| ಹೊರಹರಿವು | 500 ಕ್ಯುಸೆಕ್ |

## ವಿಶೇಷ ಚೇತನರಿಗೆ ಸಹನೆಯಿಂದ ಕಲಿಸಿ

**ಮೈಸೂರು:** ಅವಧೂತ ದತ್ತ ಪೀಠದ ಕಿರಿಯ ಶ್ರೀಗಳಾದ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿಯವರ 23ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ ಪ್ರಯುಕ್ತ ಅನೇಕ ಸಾಮಾಜಿಕ, ಧಾರ್ಮಿಕ ಕಾರ್ಯಕ್ರಮ ಆರಂಭಗೊಂಡಿತು.

ಶ್ರೀ ದತ್ತ ವಿಜಯಾನಂದ ತೀರ್ಥ ಶ್ರೀಗಳ ಸಮ್ಮುಖದಲ್ಲಿ ವಿಶೇಷಚೇತನ ಮಕ್ಕಳ ಕೈನಿಂದಲೇ ಅನಘವ್ರತವನ್ನು ಮಾಡಿಸಿ ದೇವರ ಕೃಪೆಗೆ ಪಾತ್ರರಾಗುವಂತೆ ಮಾಡಿದ್ದು ವಿಶೇಷವಾಗಿತ್ತು. ನಂತರ ವಿವಿಧ ಶಾಲೆಗಳ ವಿಶೇಷ ಚೇತನ ಮಕ್ಕಳಿಗೆ ಅವಧೂತ ದತ್ತ ಪೀಠದ ವತಿಯಿಂದ ಉಪಯುಕ್ತ ಸಾಧನಾ ಸಲಕರಣೆಗಳನ್ನು ವಿತರಿಸಿ ಮಕ್ಕಳ ಶ್ರೇಯೋಭಿವೃದ್ಧಿಗೆ ಪ್ರಾರ್ಥಿಸಲಾಯಿತು. ವಿಶೇಷ ಮಕ್ಕಳಿಗೆ ಆಶೀರ್ವಚನ ನೀಡಿ ಮಾತನಾಡಿದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಯವರು, ವಿಶೇಷ ಚೇತನ ಮಕ್ಕಳಿಗೆ ತಾಳ್ಮೆ, ಸಹನೆಯಿಂದ ಹೇಳಿಕೊಡಬೇಕು ಆಗ ಅವರು ಶ್ರದ್ಧೆಯಿಂದ ಕಲಿಯುತ್ತಾರೆ ಎಂದರು.



### ಡಾ. ಅಲೀಂಪಾಷ ಕರೆ

# ಸ್ವಯಂ ಪ್ರೇರಿತ ರಕ್ತದಾನದಿಂದ ಜೀವ ಉಳಿಸಿ

ಗುಂಡ್ಲುಪೇಟೆ: ಸಾರ್ವಜನಿಕರು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುವ ಮೂಲಕ ಮತ್ತೊಬ್ಬರ ಅಮೂಲ್ಯ ಜೀವ ಉಳಿಸಲು ಮುಂದಾಗಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ಅಲೀಂಪಾಷ ಕರೆ ನೀಡಿದರು.

ಪಟ್ಟಣದ ಜಾರಕಿಹೊಳಿ ಬ್ರಿಗೇಡ್ ಕಚೇರಿಯಲ್ಲಿ ಜಾರಕಿಹೊಳಿ ಬ್ರಿಗೇಡ್ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಯ ರಕ್ತ ಶೇಖರಣಾ ಘಟಕದ ಸಹಯೋಗದಲ್ಲಿ ಆಯೋಜಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಕ್ತದಾನವು ಮನುಷ್ಯನ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಮೇಲೂ ಸಕಾರಾತ್ಮಕ ಪರಿಣಾಮ ಬೀರುತ್ತದೆ. ದೇಶದಲ್ಲಿ ಪ್ರತಿವರ್ಷ ಸುಮಾರು 41 ದಶಲಕ್ಷ ಯುನಿಟ್ ರಕ್ತದ ಕೊರತೆ ಎದುರಾಗುತ್ತಿದ್ದು, ಸಮಯಕ್ಕೆ ಸರಿಯಾಗಿ ರಕ್ತ ದೊರೆಯದ ಕಾರಣ ಅಪಘಾತಗಳಲ್ಲಿ ಗಾಯಗೊಂಡವರು ಹಾಗೂ ಗಂಭೀರ ಕಾಯಿಲೆಗಳಿಂದ ಬಳಲುತ್ತಿರುವ ಅನೇಕ ರೋಗಿಗಳು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಪ್ರತಿಯೊಬ್ಬ ಆರೋಗ್ಯವಂತ ನಾಗರಿಕರು ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡುವ ಮೂಲಕ ಜೀವ ಉಳಿಸುವ ಮಹತ್ತರ ಕಾರ್ಯದಲ್ಲಿ ಭಾಗಿಯಾಗಬೇಕು ಎಂದು ತಿಳಿಸಿದರು.





ಜಾರಕಿಹೊಳಿ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ಗೋವಿನಾಯಕ್ ಮಾತನಾಡಿ, ಒಬ್ಬ ವ್ಯಕ್ತಿಯ ರಕ್ತದಾನದಿಂದ ಮೂವರು ಜೀವ ಉಳಿಯುವ ಸಾಧ್ಯತೆ ಇದೆ. ರಕ್ತವನ್ನು ಕೃತಕವಾಗಿ ಉತ್ಪಾದಿಸಲು ಸಾಧ್ಯವಿಲ್ಲ. ಜನಸಾಮಾನ್ಯರಲ್ಲಿ ರಕ್ತದಾನದ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ದೂರ ಮಾಡಬೇಕಿದ್ದು, ವಿಶೇಷವಾಗಿ ಯುವಜನತೆ ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡುವ ಮೂಲಕ ಸಮಾಜಮುಖಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಜಾರಕಿಹೊಳಿ ಬ್ರಿಗೇಡ್ ವತಿಯಿಂದ ಎರಡನೇ ಬಾರಿಗೆ ಈ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿದ್ದು, ಒಟ್ಟು 30 ಮಂದಿ ಹೆಸರು ನೋಂದಾಯಿಸಿಕೊಂಡಿದ್ದರು. ಅವರಲ್ಲಿ ಈಗಾಗಲೇ 25 ಮಂದಿ ಯಶಸ್ವಿಯಾಗಿ ರಕ್ತದಾನ ಮಾಡಿರುವುದಾಗಿ ಗೋವಿನಾಯಕ್ ತಿಳಿಸಿದರು.

ಶಿಬಿರದಲ್ಲಿ ಹಿರಿಯ ಪ್ರಯೋಗಶಾಲಾ ತಂತ್ರಜ್ಞ ಸತ್ಯ, ಡಾ. ಸೌಮ್ಯ, ಮಹದೇವಸ್ವಾಮಿ, ಚಿತ್ರ, ಸಾರ್ವಜನಿಕ ಆಸ್ಪತ್ರೆಯ ಲ್ಯಾಬ್ ಟೆಕ್ನಿಷಿಯನ್ ನೇತ್ರಾ ಹಾಗೂ ಮುಖಂಡರಾದ ನಾಗೇಂದ್ರ, ಕ್ರೇಜಿ ನಾಗರಾಜು, ರಾಜೇಂದ್ರ ವಿ. ನಾಯಕ್, ರಮೇಶ್, ಮೋನಿಷ್, ವಿನುನಾಯಕ್, ಗಿರೀಶ್, ರವಿ, ಧನುಷ್, ಮನು, ಹರ್ಷ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# 3 ವರ್ಷಗಳಲ್ಲಿ 1433 ಕೋಟಿ ರೂ ವೆಚ್ಚದ ಅಭಿವೃದ್ಧಿ

## ರಾಮನಗರ ಕ್ಷೇತ್ರದಲ್ಲಿ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರಿಗೆ ಅಭಿವೃದ್ಧಿಯೇ ರಾಜಕೀಯದ ನಿಜವಾದ ಮಾನದಂಡ

## ಭರವಸೆ ಮೂಡಿಸಿದ ಶಾಸಕ – ಜನಾಭಿಪ್ರಾಯ

## ಸತತ ನಾಲ್ಕನೇ ಬಾರಿಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕರಗ ಮಹೋತ್ಸವದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ರಾಮನಗರ: ಜನಪ್ರತಿನಿಧಿಯ ಯಶಸ್ಸನ್ನು ಅಳೆಯುವುದು ಕೇವಲ ಚುನಾವಣಾ ಗೆಲುವಿನಿಂದಲ್ಲ; ಜನರ ಬದುಕಿನಲ್ಲಿ ಮೂಡಿಸುವ ಸಕಾರಾತ್ಮಕ ಬದಲಾವಣೆಗಳಿಂದ. ಅಭಿವೃದ್ಧಿಯೇ ರಾಜಕೀಯದ ನಿಜವಾದ ಮಾನದಂಡ ಎಂಬುದನ್ನು ಕಾರ್ಯರೂಪದಲ್ಲಿ ತೋರಿಸಲು ಶ್ರಮಿಸುವ ಜನಪ್ರತಿನಿಧಿಗಳಲ್ಲಿ ರಾಮನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಚ್. ಎ. ಇಕ್ಬಾಲ್ ಹುಸೇನ್ ಅವರ ಹೆಸರು ಪ್ರಮುಖವಾಗಿ ಕೇಳಿಬರುತ್ತಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಸರ್ಕಾರದ ವಿವಿಧ ಯೋಜನೆಗಳು ಮತ್ತು ಅನುದಾನಗಳನ್ನು ಸಮರ್ಪಕವಾಗಿ ಬಳಸಿಕೊಂಡು ರಸ್ತೆ, ಕುಡಿಯುವ ನೀರು, ಶಿಕ್ಷಣ, ಆರೋಗ್ಯ, ಮೂಲಸೌಕರ್ಯ ಹಾಗೂ ಗ್ರಾಮೀಣ ಅಭಿವೃದ್ಧಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಗಮನಾರ್ಹ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿ ಕ್ಷೇತ್ರದ ಸರ್ವಾಂಗೀಣ ಪ್ರಗತಿಗೆ ಒತ್ತು ನೀಡಿದ್ದಾರೆ. ಅಭಿವೃದ್ಧಿಯ ಮೂಲಕ ಜನರ ವಿಶ್ವಾಸವನ್ನು ಮತ್ತಷ್ಟು ಗಟ್ಟಿಗೊಳಿಸುವ ಪ್ರಯತ್ನ ಅವರ ಕಾರ್ಯಶೈಲಿಯಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

### ಭರವಸೆ ಮೂಡಿಸಿದ ಶಾಸಕ

ಜಿಲ್ಲಾ ಪಂಚಾಯ್ತಿ ಸದಸ್ಯರಾಗಿದ್ದ ವೇಳೆಯಿಂದಲೇ ಇಕ್ಬಾಲ್ ಹುಸೇನ್ ಅವರು ರಾಮನಗರ ಕ್ಷೇತ್ರದಲ್ಲಿಯೂ ಪರಿಚಿತರು. ಇದೀಗ ರಾಮನಗರ ಕ್ಷೇತ್ರವನ್ನು ವಿಧಾನಸಭೆಯಲ್ಲಿ ಪ್ರತಿನಿಧಿಸುತ್ತಿದ್ದಾರೆ. ರಾಮನಗರ ಕ್ಷೇತ್ರಕ್ಕೆ ಹೊಸತನಕ್ಕೆ ಮುನ್ನುಡಿ ಬರೆದ ಅವರು ಜನರ ಪ್ರೀತಿ , ವಿಶ್ವಾಸ ಗಳಿಸಿದ್ದಾರೆ. ಇಷ್ಟೇ ಅಲ್ಲದೆ, ತಾವೊಬ್ಬ ಭರವಸೆ ನೀಡುವ ನಾಯಕ ಎಂಬುದನ್ನೂ ತೋರಿಸಿಕೊಟ್ಟಿದ್ದಾರೆ. ಜನ ಸೇವೆ ಮಾಡಲು ಸಿಕ್ಕ ಅವಕಾಶವನ್ನು ಸಮರ್ಥವಾಗಿ ಸದ್ಬಳಕೆ ಮಾಡಿಕೊಳ್ಳುವಲ್ಲಿ ಯಶಸ್ವಿಯಾಗಿರುವ ಶಾಸಕ ಇಕ್ಬಾಲ್ ಹುಸೇನ್ ರಾಮನಗರ ಕ್ಷೇತ್ರವನ್ನು ಸಮಗ್ರ ಅಭಿವೃದ್ಧಿಯ ಪಥದಲ್ಲಿ ನಡೆಸುತ್ತಿದ್ದಾರೆ.




### ಶ್ರೀ ಚಾಮುಂಡಿ ಕೃಪೆಯಿಂದ ಜನ ಸೇವಕನಾಗಿದ್ದೇನೆ

ಆರೋಗ್ಯದಲ್ಲಿ ಏರುಪೇರಾಗಿ ಇದೀಗ ಚೇತರಿಸಿಕೊಂಡಿರುವ ಶಾಸಕ ಇಕ್ಬಾಲ್ ಹುಸೇನ್ ಶ್ರೀ ಚಾಮುಂಡೇಶ್ವರಿ ಅಮ್ಮನವರ ಕೃಪೆಯಿಂದ ತಮ್ಮ ಆರೋಗ್ಯ ಸುಧಾರಿಸಿದೆ ಎಂದಿದ್ದಾರೆ. ಇದೇ ತಾಯಿಯ ಆಶೀರ್ವಾದದಿಂದಲೇ ತಾವು ಜನ ಸೇವಕನಾಗಿರುವುದಾಗಿ ಹಲವಾರು ಬಾರಿ ಹೇಳಿದ್ದಾರೆ. ಸದಾ ಜನಪರ ಕಾಳಜಿಯನ್ನು ತೋರುತ್ತಾ, ಕ್ಷೇತ್ರದ ಅಭಿವೃದ್ಧಿಗೆ ತಮ್ಮನ್ನು ತೊಡಗಿಸಿಕೊಂಡಿರುವ ಶಾಸಕ ಇಕ್ಬಾಲ್ ಅವರ ಅಭಿವೃದ್ಧಿಯನ್ನು ಜನಸಾಮಾನ್ಯರು ಮೆಚ್ಚಿಕೊಂಡಿದ್ದಾರೆ. ಶಾಸಕರಾಗಿ ಇಕ್ಬಾಲ್ ಅವರನ್ನು ಆಯ್ಕೆ ಮಾಡಿಕೊಂಡಿದ್ದಕ್ಕಾಗಿ ಸಾರ್ಥಕವಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ. ಕ್ಷೇತ್ರವನ್ನು ಅಭಿವೃದ್ಧಿ ಪಥದಲ್ಲಿ ಮುನ್ನೆಡುಸುತ್ತಿರುವ ಶಾಸಕ ಇಕ್ಬಾಲ್ ಹುಸೇನ್ ಅವರ ಸಾಧನೆಯನ್ನು ಇಲ್ಲಿ ಕಟ್ಟಿಕೊಡುವ ಪ್ರಯತ್ನವನ್ನು ಪತ್ರಿಕೆ ಮಾಡಿದೆ.

### ಅಭಿವೃದ್ಧಿ ನಿರಂತರ ಪ್ರಕ್ರಿಯೆ

ಅಭಿವೃದ್ಧಿಯ ಪಯಣ ಎಂದಿಗೂ ಅಂತ್ಯಗೊಳ್ಳುವುದಿಲ್ಲ; ಅದು ನಿರಂತರ ಪ್ರಕ್ರಿಯೆ. ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳು ರಾಮನಗರದ ಭವಿಷ್ಯಕ್ಕೆ ಬಲವಾದ ಅಡಿಪಾಯ ಹಾಕುವ ಪ್ರಯತ್ನಗಳಾಗಿವೆ. ಜನರ ಅಗತ್ಯಗಳನ್ನು ಅರಿತು ಸರ್ಕಾರದ ಯೋಜನೆಗಳನ್ನು ಪರಿಣಾಮಕಾರಿಯಾಗಿ ಕ್ಷೇತ್ರಕ್ಕೆ ತರುವಲ್ಲಿ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರು ತೋರಿದ ಬದ್ಧತೆ ಗಮನಾರ್ಹವಾಗಿದೆ. ಈ ಅಭಿವೃದ್ಧಿಯ ವೇಗ ಮುಂದುವರಿದು ರಾಮನಗರವು ರಾಜ್ಯದ ಮಾದರಿ ಕ್ಷೇತ್ರವಾಗಿ ಬೆಳೆಯಲಿ ಎಂಬುದು ಕ್ಷೇತ್ರದ ಜನರ ಆಶಯ. ಅಭಿವೃದ್ಧಿಯ ಸಂಕಲ್ಪ, ಜನಸೇವೆಯ ಬದ್ಧತೆ ಮತ್ತು ದೂರದೃಷ್ಟಿಯ ನಾಯಕತ್ವ ಮುಂದಿನ ದಿನಗಳಲ್ಲಿಯೂ ರಾಮ ನಗರದ ಪ್ರಗತಿಗೆ ಹೊಸ ಅಧ್ಯಾಯಗಳನ್ನು ಬರೆಯಲಿ ಎಂಬ ಹಾರೈಕೆಯೊಂದಿಗೆ ಈ ಲೇಖನವನ್ನು ಮುಕ್ತಾಯಗೊಳಿ



### 2023–24ನೇ ಸಾಲಿನಿಂದ 2025–26ನೇ ಸಾಲಿನವರೆಗೆ 1433 ಕೋಟಿ ರೂ ಅನುದಾನ:

ಸರ್ಕಾರ ವಿವಿಧ ಇಲಾಖೆಗಳ ಮೂಲಕ ನೀಡುತ್ತಿರುವ ಅನುದಾನವನ್ನು ಸದ್ಬಳಕೆ ಮಾಡುವುದರಲ್ಲಿ ಇಕ್ಬಾಲ್ ಹುಸೇನ್ ಎಂದೂ ಮುತ್ತವರ್ಜಿವಹಿಸುತ್ತಾರೆ. ಸರ್ಕಾರದ ವಿವಿಧ ಇಲಾಖೆಗಳ ಸಚಿವರಿಗೆ ಒತ್ತಡ ಹೇರಿ ಹೆಚ್ಚುವರಿ ಅನುದಾನವನ್ನು ಮಂಜೂರು ಮಾಡಿಸಿಕೊಂಡಿದ್ದುಂಟು. ನೆನೆಗುದಿಗೆ ಬಿದ್ದಿದ್ದ ಮಂಚನಬೆಲೆ ಜಲಾಶಯದ ಎಡ ಮತ್ತು ಬಲ ನಾಲೆಗಳನ್ನು ದುರಸ್ತಿಗೊಳಿಸಿ ನೀರು ಹರಿಸಿದ್ದು ಮಹತ್ತರ ಸಾಧನೆಗಳ ಪೈಕಿ ಒಂದು. ಧಣಿವರಿಯದೆ ಕ್ಷೇತ್ರದ ಅಭಿವೃದ್ಧಿಗಾಗಿ ಅಧಿಕಾರಿಗಳನ್ನು ಪ್ರೋತ್ಸಾಹಿಸುತ್ತ, ಕೆಲವೊಮ್ಮೆ ತರಾಟೆಗೂ ತೆಗೆದುಕೊಳ್ಳುತ್ತಾ ಜನಮನ್ನಣೆ ಪಡೆದುಕೊಂಡಿದ್ದಾರೆ. 2023–24ನೇ ಸಾಲಿನಲ್ಲಿ 36 ಕೋಟಿ 29 ಲಕ್ಷ ರೂ, 2024–25ನೇ ಸಾಲಿ ನಲ್ಲಿ 870 ಕೋಟಿ ರೂ, 2025–26ನೇ ಸಾಲಿನಲ್ಲಿ 527 ಕೋಟಿ. ಇವರು ಶಾಸಕರಾದ ನಂತರ ಕ್ಷೇತ್ರದಲ್ಲಿ ಒಟ್ಟು 1433 ಕೋಟಿ 87 ಲಕ್ಷ ರೂಗಳ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆದಿವೆ.

### ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ (ಪಿಆರ್ ಇಡಿ) :

ಫ್ಲಡ್ ಅನುದಾನ – 7 ಕೋಟಿ, ರಾಮನಗರ ಮತ್ತು ಹಾರೋ ಹಳ್ಳಿ ತಾಲೂಕುಗಳಿಗೆ ಜಿಪಂ – ತಾಪಂ ಅನುದಾನ – 8 ಕೋಟಿ 50 ಲಕ್ಷ, ಶಾಲಾ ಕಟ್ಟಡ ದುರಸ್ಥಿ ಕಾಮಗಾರಿ (ಫ್ಲಡ್ ಅನುದಾನ) – 4 ಕೋಟಿ 8 ಲಕ್ಷ, ರಸ್ತೆ ಮತ್ತು ಚರಂಡಿ ಅಭಿವೃದ್ಧಿ (ಸಮಾಜ ಕಲ್ಯಾಣ ಇಲಾಖೆ) – 1 ಕೋಟಿ ರೂ, ಮಂಚನಬೆಲೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ–71 ಕೋಟಿ, ಹಾರೋಹಳ್ಳಿ – ಮರಳವಾಡಿ ಭಾಗದಲ್ಲಿ ಕುಡಿಯುವ ನೀರು ಯೋಜನೆಗೆ 110 ಕೋಟಿ ರೂಗಳ ಅನುದಾನ ಬಂದಿದೆ.

### ರಾಮನಗರ ನಗರಸಭೆ

ಯುಐಡಿಎಫ್ ಯೋಜನೆ ಅಡಿಯಲ್ಲಿ ರಾಮನಗರ ಟೌನ್ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ – 82 ಕೋಟಿ , ಅಲ್ಪಸಂಖ್ಯಾತರ ಅನುದಾನ – 12 ಕೋಟಿ 50 ಲಕ್ಷ, ನಗರೋತ್ಥಾನ ಯೋಜನೆ ಅಡಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ – 12 ಕೋಟಿ 30 ಲಕ್ಷ, ಉಳಿಕೆ ಅನುದಾನ – 82 ಲಕ್ಷ, 15ನೇ ಹಣಕಾಸು ಮೂಲಸೌಕರ್ಯ ಕಾಮಗಾರಿ – 4 ಕೋಟಿ 74 ಲಕ್ಷ ರು., ಅರ್ಕಾವತಿ ನದಿ ಪಂಪ್ ಹೌಸ್ ಬಳಿ ತಡೆಗೋಡೆ ನಿರ್ಮಾಣಕ್ಕೆ 20 ಕೋಟಿ, ಎಸ್ ಟಿಡಿ ಉನ್ನತೀಕರಣಕ್ಕೆ 13 ಕೋಟಿ ರೂಗಳು ಬಿಡುಗಡೆಯಾಗಿದೆ.

### ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ (ಕೆಆರ್ ಐಡಿಎಲ್)

ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ ಮುಖ್ಯಮಂತ್ರಿಗಳ ವಿಶೇಷ ಅನುದಾನ 21 ಕೋಟಿ 15 ಲಕ್ಷ, ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ (ಸಮಾಜ ಕಲ್ಯಾಣ ಇಲಾಖೆ ) 4 ಕೋಟಿ 75 ಲಕ್ಷ, ಮುಖ್ಯಮಂತ್ರಿಗಳ ವಿಶೇಷ ಅನುದಾನ (ಶಾಸಕರ ಅನುದಾನ)– 60 ಕೋಟಿ, ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ (ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ) 25 ಕೋಟಿ, ಬಿಡದಿ – ಕಂಚುಗಾರನಹಳ್ಳಿ – ಹಾರೋಹಳ್ಳಿ ರಸ್ತೆ ಅಭಿವೃದ್ಧಿಗೆ 20 ಕೋಟಿ., ಹರೀಸಂದ್ರ ಸೇತುವೆ – 10 ಕೋಟಿ, ಎಸ್ಸಿಪಿ ಅನುದಾನ – 3 ಕೋಟಿ, ರಾಮನಗರ – ಚನ್ನಪಟ್ಟಣ ಅಬಕಾರಿ ಕಟ್ಟಡ ನಿರ್ಮಾಣಕ್ಕೆ 4 ಕೋಟಿ 95 ಲಕ್ಷ ರೂ, ರಾಮನಗರ – ಚನ್ನಪಟ್ಟಣ ಅಬಕಾರಿ ಕಟ್ಟಡ ನಿರ್ಮಾಣಕ್ಕೆ 4ಕೋಟಿ 95ಲಕ್ಷ ರೂ ವಿನಿಯೋಗಿಸಲಾಗುತ್ತಿದೆ.

### ಕಾವೇರಿ ನೀರಾವರಿ ನಿಗಮ

ಅರ್ಕಾವತಿ ರಿವರ್ ಫ್ರಂಟ್ ಡೆವಲಪ್ ಮೆಂಟ್ ಯೋಜನೆ ಅಡಿಯಲ್ಲಿ ಅರ್ಕಾವತಿ ನದಿ ದಂಡೆ ಪ್ರವಾಸೋದ್ಯಮ ಅಭಿವೃದ್ಧಿ ಮತ್ತು ಸೌಂದರ್ಯೀಕರಣಕ್ಕಾಗಿ 156 ಕೋಟಿ, ಮಂಚನಬೆಲೆ ಜಲಾಶಯದ ಎಡ ಮತ್ತು ಬಲ ದಂಡೆ ನಾಲೆಗಳ ದುರಸ್ಥಿ ಕಾರ್ಯಕ್ಕೆ 1 ಕೋಟಿ 50 ಲಕ್ಷ, ಹೊಸದಾಗಿ ನಾಲೆಗಳ ನಿರ್ಮಾಣಕ್ಕೆ 60 ಕೋಟಿ, ಕಸಬಾ ಮತ್ತು ಕೈಲಾಂಚ ಹೋಬಳಿ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ರಸ್ತೆ, ಚರಂಡಿ, ಸೇತುವೆ ನಿರ್ಮಾಣಕ್ಕಾಗಿ 30 ಕೋಟಿ, ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ 45 ಕೋಟಿ, ಗಾಣಾಳು ಸಮೀಪದ ಅರ್ಕಾವತಿ ನದಿಯಿಂದ ರಾಮನಗರ ಮತ್ತು ಹಾರೋಹಳ್ಳಿ ತಾಲೂಕಿನ 46 ಕೆರೆಗಳನ್ನು ತುಂಬಿಸುವ ಕಾಮಗಾರಿ – 100 ಕೋಟಿ 10 ಲಕ್ಷ, ಗದಗಯ್ಯನದೊಡ್ಡಿ ಸೇತುವೆ ನಿರ್ಮಾಣಕ್ಕೆ 3 ಕೋಟಿ ರೂ ಬಿಡುಗಡೆಯಾಗಿದೆ.

### ಸಣ್ಣ ನೀರಾವರಿ

ಕಾಳೇಗೌಡನದೊಡ್ಡಿ ಏತನೀರಾವರಿ ಯೋಜನೆ – 28 ಕೋಟಿ ರು., ಮೊಟ್ಟೆ ದೊಡ್ಡಿ ಏತ ನೀರಾವರಿ ಯೋಜನೆಗೆ ಪುನಶ್ಚೇತನ, ಕೆರೆಗಳಿಗೆ ನೀರು ತುಂಬಿಸಲು ಬಿಎಂಆರ್ ಡಿಎ ಅನುದಾನ – 6 ಕೋಟಿ ಮಂಜೂರಾಗಿದೆ.

### ಹಾರೋಹಳ್ಳಿ ಪುರಸಭೆ :

ನಗರೋತ್ಥಾನ ಎಸ್ ಎಸ್ ಟಿ , 15ನೇ ಹಣಕಾಸು ಯೋಜನೆ ಅಡಿಯಲ್ಲಿ ರಸ್ತೆ – ಚರಂಡಿ ಕಾಮಗಾರಿ – 15 ಕೋಟಿ, ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟಿನ್ ಕಟ್ಟಡ ಕಾಮಗಾರಿಗೆ 60 ಲಕ್ಷ ರುಪಾಯಿ, ತಾಲೂಕು ಆಡಳಿತ ಕೇಂದ್ರ ನಿರ್ಮಾಣ ಕಾಮಗಾರಿ – 8 ಕೋಟಿ 60 ಲಕ್ಷ, ಪುರಸಭೆ ಆಡಳಿತ ಕೇಂದ್ರ ನಿರ್ಮಾಣ – 5 ಕೋಟಿ, ಪಟ್ಟಣ ಪಂಚಾಯಿತಿಯಲ್ಲಿ ಸ್ವಂತ ನಿಧಿ ಅನುದಾನದಲ್ಲಿ ರಸ್ತೆ – ಚರಂಡಿ ಅಭಿವೃದ್ಧಿ ಕಾಮಗಾರಿಗೆ 4 ಕೋಟಿ 80 ಲಕ್ಷ, ಅಮೃತ ಯೋಜನೆ ಅಡಿಯಲ್ಲಿ ಕಾವೇರಿ ನೀರು ಸರಬರಾಜು

### ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಕೆಂಪೇಗೌಡನದೊಡ್ಡಿ ಬೈಪಾಸ್ ರಸ್ತೆಯಿಂದ ಪಾದರಹಳ್ಳಿವರೆಗೆ (5.50 ಕಿ.ಮೀ) ರಸ್ತೆ ಡಾಂಬರೀಕರಣ – 4 ಕೋಟಿ 50 ಲಕ್ಷ, ಬೆಂಗಳೂರು– ಮೈಸೂರು ರಸ್ತೆ ಮತ್ತು ರಾಮನಗರ – ಚನ್ನಪಟ್ಟಣ ರಸ್ತೆ (22ಕಿ.ಮೀ) ಮತ್ತು ಜಾಲಮಂಗಲ ರಸ್ತೆ, ಕನಕಪುರ ಸರ್ಕಲ್ ಸಂಪರ್ಕ ರಸ್ತೆ, ಅಂಕನಹಳ್ಳಿ – ಕವಣಪುರ ರಸ್ತೆ ಅಭಿವೃದ್ಧಿ ಕಾಮಗಾರಿಗೆ 32 ಕೋಟಿ ರುಪಾಯಿ ಅನುದಾನ ಬಂದಿದೆ.

### ಲೋಕೋಪಯೋಗಿ ಇಲಾಖೆ

ರಸ್ತೆ ಅಭಿವೃದ್ಧಿ ಮತ್ತು ಕಟ್ಟಡ ಅಭಿವೃದ್ಧಿ ಕಾಮಗಾರಿ – 63 ಕೋಟಿ 48 ಲಕ್ಷ, ಹಾರೋಹಳ್ಳಿ – ಮರಳವಾಡಿ ರಸ್ತೆ ಅಭಿವೃದ್ಧಿ 20 ಕೋಟಿ, ರಸ್ತೆ ಅಭಿವೃದ್ಧಿ ಕಾಮಗಾರಿಗೆ 9 ಕೋಟಿ 21 ಲಕ್ಷ, ರಾಮನಗರ ಟೌನಿನ ವೃತ್ತಗಳ ಸೌಂದರ್ಯೀಕರಣ – 10 ಕೋಟಿ, ಹಾರೋಹಳ್ಳಿ – ಮರಳವಾಡಿ ಭಾಗದಲ್ಲಿ ಸೇತುವೆ ಮರು ನಿರ್ಮಾಣಕ್ಕೆ 10ಕೋಟಿ ರುಪಾಯಿ, ರಸ್ತೆ ಡಾಂಬರೀಕರಣ – 10 ಕೋಟಿ ಬಿಡುಗಡೆಯಾಗಿದೆ.

### ನಿರ್ಮಿತಿ ಕೇಂದ್ರ

ರಾಮನಗರ ಜಿಲ್ಲಾ ಕ್ರೀಡಾಂಗಣ ಅಭಿವೃದ್ಧಿ ಕಾಮಗಾರಿ – 2 ಕೋಟಿ, ಸಮುದಾಯ ಭವನ ನಿರ್ಮಾಣ – 1 ಕೋಟಿ 50 ಲಕ್ಷ, ಭಕ್ಷಿ ಕೆರೆ ಅಭಿವೃದ್ಧಿ ಕಾಮಗಾರಿ – 2 ಕೋಟಿ, ಅಂಬೇಡ್ಕರ್ ಭವನ ನಿರ್ಮಾಣ – 2 ಕೋಟಿ, ಸ್ಥಳೀಯ ಶಾಸಕರ ಅನುದಾನ ಕಾಮಗಾರಿಗೆ – 2 ಕೋಟಿ, ಡಿ.ಕೆ.ಸುರೇಶ್ ಸಂಸದರಾಗಿದ್ದಾಗಿನ ಅನುದಾನ 10 ಕೋಟಿ ರೂ. ಸಿಕ್ಕಿದೆ.

ಕಾಮಗಾರಿ – 33 ಕೋಟಿ, ಕಸ ವಿಲೇವಾರಿ ಜಾಗದ ಅಭಿವೃದ್ಧಿಗಾಗಿ 2 ಕೋಟಿ ರೂಗಳು ಬಿಡುಗಡೆಯಾಗಿದೆ.

### ಪ್ರವಾಸೋದ್ಯಮ :

ಪ್ರವಾಸೋದ್ಯಮ ಇಲಾಖೆಗೆ 10 ಕೋಟಿ, ರಾಮದೇವರ ಬೆಟ್ಟ ಅಭಿವೃದ್ಧಿ ಕಾಮಗಾರಿಗೆ – 2ಕೋಟಿ ರೂ ಬಿಡುಗೆಯಾಗಿದೆ.

### ಕೆಪಿಎಸ್ ಶಾಲೆಗಳ ನಿರ್ಮಾಣ:

ಸಿಎಸ್ ಆರ್ ಅನುದಾನದ ಅಡಿಯಲ್ಲಿ ಸುಮಾರು 60 ಕೋಟಿ ರೂಗಳ ವೆಚ್ಚದಲ್ಲಿ ಕೆಪಿಎಸ್ ಶಾಲಾ ಕಟ್ಟಡಗಳ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.

### ರಾಜೀವ್ ಆರೋಗ್ಯ ವಿವಿ ನಿರ್ಮಾಣ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ ಆಡಳಿತಾತ್ಮಕ ಕಟ್ಟಡ, ಮೆಡಿಕಲ್ ಕಾಲೇಜು ಹಾಗೂ ಪೂರಕ ಕಟ್ಟಡಗಳ ನಿರ್ಮಾಣ ಕಾಮಗಾರಿ – 600 ಕೋಟಿ ರು.,ಸುಗ್ಗನಹಳ್ಳಿ ಆಸ್ಪತ್ರೆ ನಿರ್ಮಾಣಕ್ಕೆ 1 ಕೋಟಿ ರು.ಬಿಡುಗಡೆಯಾಗಿದೆ.

### ಇತರೆ

ಬಿಎಂಐಸಿಪಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ 3 ಕೋಟಿ, ಕೆರೆ ಅಭಿವೃದ್ಧಿಗೆ 2 ಕೋಟಿ, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೆರೆ ಅಭಿವೃದ್ಧಿಗೆ 1 ಕೋಟಿ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೆರೆ ಅಭಿವೃದ್ಧಿಗೆ 1 ಕೋಟಿ , ಸಿಎನ್ ಎನ್ ಎಲ್ ವತಿಯಿಂದ ಗದಗಯ್ಯನದೊಡ್ಡಿ ಸೇತುವೆ – 10 ಕೋಟಿ, ಸುಗ್ಗನಹಳ್ಳಿ ಸೇತುವೆ ನಿರ್ಮಾಣಕ್ಕಾಗಿ 10 ಕೋಟಿ , ಡಿಎಂಎಫ್ ಅನುದಾನ – 1 ಕೋಟಿ, ಹೌಸಿಂಗ್ ಕಾರ್ಪೋರೇಷನ್ ನಿಂದ ಅಗ್ನಿ ಶಾಮಕ ಠಾಣೆ ಸ್ಥಾಪನೆಗೆ 3 ಕೋಟಿ, ಬಿಎಂಆರ್ ಡಿಎ ಅನುದಾನ – 6 ಕೋಟಿ, ಮುಜರಾಯಿ ಇಲಾಖೆ ದೇವಸ್ಥಾನಗಳ ಅಭಿವೃದ್ಧಿ ಕಾಮಗಾರಿ – 1 ಕೋಟಿ, ವಕ್ಫ್ ಮಂಡಳಿಯಿಂದ ಈದ್ಗಾ, ಶಾದಿ ಮಹಲ್, ಖಬರಸ್ತಾನ್ ಅಭಿವೃದ್ಧಿ ಕಾಮಗಾರಿಗೆ 1 ಕೋಟಿ 78 ಲಕ್ಷ, ಸಾರ್ವಜನಿಕ ಗ್ರಂಥಾಲಯ ಪಬ್ಲಿಕ್ ಡೈರೆಕ್ಷನ್ ಅಂಡ್ ಆಡ್ಮನಿಸ್ಟೇಷನ್ ಅಡಿಯಲ್ಲಿ ನಿಗದಿ ಪಡಿಸಿರುವ ಅನುದಾನ 4 ಕೋಟಿ 95 ಲಕ್ಷ, ಅಂಗನವಾಡಿ ಕೇಂದ್ರ ನಿರ್ಮಾಣ ಕಾಮಗಾರಿ – 2ಕೋಟಿ, ವಸತಿ ನಿಲಯ ದುರಸ್ಥಿ ಕಾರ್ಯ – 1 ಕೋಟಿ 50 ಲಕ್ಷ, ವಕ್ಫ್ ಸಂಸ್ಥೆಗಳ ದುರಸ್ಥಿ ನವೀಕರಣ ಕಾಮಗಾರಿ – 1 ಕೋಟಿ 85 ಲಕ್ಷ ರು., ಡಿಎಂಎಫ್ – 1 ಕೋಟಿ, ಅಗ್ನಿಶಾಮಕ ಠಾಣೆ ಸ್ಥಾಪನೆಗೆ 3 ಕೋಟಿ, ಹೊಸ ಸಬ್ ರಿಜಿಸ್ಟ್ರಾರ್ ಕಚೇರಿ ಕಟ್ಟಡ ನಿರ್ಮಾಣ – 3 ಕೋಟಿ, ಎಪಿಎಂಸಿ ಮಾರುಕಟ್ಟೆ ದುರಸ್ಥಿಗೆ 5 ಕೋಟಿ, ರಾಮನಗರ ವಸತಿ ಬಡಾವಣೆಗಳ ಮರು ಅಭಿವೃದ್ಧಿಗೆ 36 ಕೋಟಿ 11 ಲಕ್ಷ, ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಾಣಕ್ಕೆ 76 ಕೋಟಿ ಮಂಜೂರು ಮಾಡಿಸಿದ್ದಾರೆ.




# ಕಾನೂನಿನ ಅಜ್ಞಾನ ಅಪರಾಧದಿಂದ ಮುಕ್ತಿ ನೀಡಲ್ಲ: ಹೆಚ್. ಶಶಿಧರ್ ಶೆಟ್ಟಿ

ಮೈಸೂರು: ಕಾನೂನಿನ ಬಗ್ಗೆ ಅರಿವಿಲ್ಲದಿರುವುದು ಅಥವಾ ಮಾಹಿತಿ ಇಲ್ಲದಿರುವುದು ಅಪರಾಧ ಅಥವಾ ತಪ್ಪಿನಿಂದ ಯಾವುದೇ ರೀತಿಯ ವಿನಾಯಿತಿ ನೀಡಲು ಸಾಧ್ಯವಿಲ್ಲ. ಆದ್ದರಿಂದ ಪ್ರತಿಯೊಬ್ಬ ನಾಗರಿಕರು ಹಾಗೂ ವಿದ್ಯಾರ್ಥಿಗಳು ದೇಶದ ಕಾನೂನುಗಳನ್ನು ತಿಳಿದುಕೊಳ್ಳುವುದು ಅತ್ಯಗತ್ಯ ಎಂದು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶಶಿಧರ್ ಶೆಟ್ಟಿ ಅವರು ಹೇಳಿದರು.

ನಗರದ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ಪದವಿ ಪೂರ್ವ ಕಾಲೇಜಿನಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮೈಸೂರು ಹಾಗೂ ವಕೀಲರ ಸಂಘದ ಜಂಟಿ ಆಶ್ರಯದಲ್ಲಿ ಆಯೋಜಿಸಲಾಗಿದ್ದ ಪೋಕ್ಸೋ ಕಾಯ್ದೆ ಮಾದಕ ದ್ರವ್ಯ ದುರ್ಬಳಕೆ ತಡೆಗಟ್ಟುವುದು ಮತ್ತು ಬಾಲ್ಯ ವಿವಾಹ ನಿಷೇಧ ಕಾಯ್ದೆ 2006 ಕುರಿತ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ನಮ್ಮ ದೇಶದಲ್ಲಿ ಸಾವಿರಾರು ಕಾನೂನುಗಳಿವೆ. ಪ್ರತಿಯೊಂದು ಕಾನೂನಿನ ಜ್ಞಾನ ಎಲ್ಲರಿಗೂ ಇರಲು ಸಾಧ್ಯವಿಲ್ಲದಿದ್ದರೂ, ದೈನಂದಿನ ಜೀವನಕ್ಕೆ ಹಾಗೂ ಸಮಾಜಕ್ಕೆ ಅಗತ್ಯವಿರುವ ಮೂಲಭೂತ ಕಾನೂನುಗಳ ಬಗ್ಗೆ ಪ್ರತಿಯೊಬ್ಬರೂ ಜಾಗೃತಿ ಹೊಂದಿರಬೇಕು. ಕಾನೂನಿನ



ಅರಿವು ಕೇವಲ ಅನಕ್ಷರಸ್ಥರಿಗೆ ಮಾತ್ರವಲ್ಲದೆ ಪ್ರತಿಯೊಬ್ಬರಿಗೂ ಅಗತ್ಯವಾಗಿದೆ ಎಂದರು.

ರಾಜ್ಯದಲ್ಲಿ ಪ್ರಸ್ತುತ 8,000ಕ್ಕೂ ಹೆಚ್ಚು ಪೋಕ್ಸೋ ಪ್ರಕರಣಗಳು ಬಾಕಿ ಇವೆ. ಪೋಕ್ಸೋ ವಿಶೇಷ ನ್ಯಾಯಾಲಯಗಳ ಸಂಖ್ಯೆ ಹೆಚ್ಚುತ್ತಿದ್ದರೂ, ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. 18 ವರ್ಷಕ್ಕಿಂತ ಕೆಳಗಿನ ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯವು ಜಾಮೀನು ರಹಿತ ಹಾಗೂ ಕಠಿಣ ಶಿಕ್ಷೆ (10, 20 ಅಥವಾ 30 ವರ್ಷಗಳ ಜೈಲು ಶಿಕ್ಷೆ ನೀಡುವ ಅಪರಾಧವಾಗಿದೆ ಎಂದು ಹೇಳಿದರು.

ಮೈಸೂರು ವಕೀಲರ ಸಂಘದ ಅಧ್ಯಕ್ಷರಾದ ಎಸ್.ಲೋಕೇಶ್ ಮಾತನಾಡಿ ಇಂದಿನ ಯುವಜನತೆ ಅಥವಾ ಉಜಟಿ ಜ ಪೀಳಿಗೆಯ ಯುವಜನರು ನಮಗಿಂತ ಹೆಚ್ಚು ಬುದ್ಧಿವಂತರಾಗಿರಬಹುದು. ಆದರೆ ಬುದ್ಧಿವಂತಿಕೆಗಿಂತ ಅನುಭವ ದೊಡ್ಡದು.ಹಿರಿಯರು ಅಥವಾ ಹೆತ್ತವರು ಹೇಳುವ ಮಾತುಗಳನ್ನು ನಿರ್ಲಕ್ಷಿಸದೆ, ಜೀವನದಲ್ಲಿ ಎಚ್ಚರಿಕೆಯಿಂದಿರಬೇಕು ಎಂದು ತಿಳಿಸಿದರು. ವಿಜಯ ವಿಠಲ ವಿದ್ಯಾಸಂಸ್ಥೆ ಅಧ್ಯಕ್ಷ ಆರ್.ವಾಸುದೇವ ಭಟ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಹಾಗೂ ಸದಸ್ಯ ಕಾರ್ಯದರ್ಶಿ ನಾಗರಾಜ ಸಿದ್ದಪ್ಪ ಅಂಕಸದೊಡ್ಡಿ, ಉಪ ಕಾರ್ಯದರ್ಶಿ ಎಂ. ಕೆ.ಶ್ರೀಧರ್, ಮಧುಸೂಧನ್ ಮತ್ತಿತರರು ಉಪಸ್ಥಿತರಿದ್ದರು.

# ಸೇತುವೆ ಕಾಮಗಾರಿಗೆ ಚಾಲನೆ



ಚಾಮರಾಜನಗರ, ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ರಸ್ತೆಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದು ಕ್ಷೇತ್ರದ ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಹೇಳಿದರು. ಬದನವಾಳುವಿನಿಂದ ಚಾಮರಾಜನಗರ ತಾಲೂಕಿನ ವೀರನಪುರ ಕ್ರಾಸ್ ಸೇರುವ ರಸ್ತೆ ಮತ್ತು ಸೇತುವೆ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಬದನವಾಳುವಿನಿಂದ ಚಾಮರಾಜನಗರ ತಾಲೂಕಿನ ವೀರನಪುರ ಕ್ರಾಸ್ ಸೇರುವ 9.10 ಕಿ.ಮೀ.ನಲ್ಲಿ ರಸ್ತೆ ಅಭಿವೃದ್ಧಿಗಾಗಿ ಲೆಕ್ಕ ಶೀರ್ಷಿಕೆ 5054?80?190?0–01–132 ವಿ ಯಡಿಯಲ್ಲಿ 2.5 ಕೋಟಿ ರೂ.ಮಂಜೂರಾಗಿದ್ದು, ರಸ್ತೆ ಮತ್ತು ಸೇತುವೆ ನಿರ್ಮಿಸಲಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಜಿ.ಪಂ.ಮಾಜಿ ಸದಸ್ಯ ಕೆರೆಹಳ್ಳಿ ನವೀನ್, ತಾ.ಪಂ.ಮಾಜಿ ಅಧ್ಯಕ್ಷ ಎಂ. ಬಿ.ರೇವಣ್ಣ, ಪಿಡಬ್ಲ್ಯೂಡಿ ಇಲಾಖೆಯ ಎಇಇ ಶಾಂತಮ್ಮ, ಗುತ್ತಿಗೆದಾರ ಮಂಜುನಾಥ್, ಹರೀಶ್, ಕೆರೆಹಳ್ಳಿರೇವಣ್ಣ, ಗುರುಸ್ವಾಮಿ ಹಿರೇಬೇಗೂರು, ನಾಗೇಶ್ ಚಿಕ್ಕಬೇಗೂರು, ಗ್ರಾ.ಪಂ.ಮಾಜಿ ಅಧ್ಯಕ್ಷ ಮಧು ಕುಲಗಾಣ, ಡಿ.ಕೆ.ಮಧು, ಸಿದ್ದಶೆಟ್ಟಿ, ಚೆಲುವರಾಜು, ಮಾದಪ್ಪಗೌಡಿಕೆ, ಕೆ.ಸಿ.ನಟರಾಜು ಕುಲಗಾಣ, ಆರ್.ಕೆಂಪರಾಜು ಇತರರು ಹಾಜರಿದ್ದರು

ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷರು,ಸಂಸ್ಕೃತಿ ಚಿಂತಕರಾದ ಸುರೇಶ್ ಎನ್ ಋಗ್ವೇದಿ ಅಭಿಮತ

# ಸಾಹಿತ್ಯ, ಸಂಸ್ಕೃತಿ ಬಗ್ಗೆ ಆರ್.ಧ್ರುವನಾರಾಯಣ್‌ಗೆ ಗೌರವ

ಚಾಮರಾಜನಗರ: ಮಾಜಿ ಸಂಸದರಾಗಿದ್ದ ಆರ್ ಧ್ರುವನಾರಾಯಣ್ ರವರು ಕನ್ನಡ ಸಾಹಿತ್ಯ, ಸಂಸ್ಕೃತಿ, ಪರಂಪರೆಯ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದು,ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಸರಳತೆ ಹಾಗೂ ಸರ್ವರನ್ನು ಸಮಭಾವದಿಂದ, ಅಹಂಕಾರವಿಲ್ಲದೆ ಸೇವೆ ಸಲ್ಲಿಸಿದ ಸಜ್ಜನರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಅಧ್ಯಕ್ಷರು,ಸಂಸ್ಕೃತಿ ಚಿಂತಕರಾದ ಸುರೇಶ್ ಎನ್ ಋಗ್ವೇದಿ ತಿಳಿಸಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಆರ್ ಧ್ರುವನಾರಾಯಣ್ ರವರ ಕೊಡುಗೆಗಳು ಹಾಗೂ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪುಷ್ಪ ಅರ್ಪಿಸಿ ಮಾತನಾಡುತ್ತ ದೂರ ದೃಷ್ಟಿ ಹಾಗೂ ಅಭಿವೃದ್ಧಿಯ ಮಾನದಂಡದ ಮೂಲಕ ಕ್ಷೇತ್ರವನ್ನು ಅಭಿವೃದ್ಧಿ ಪಥಕ್ಕೆ ತೆಗೆದುಕೊಂಡು ಹೋದ ವ್ಯಕ್ತಿ. ಶಿಕ್ಷಣ, ಆರೋಗ್ಯ, ನೀರಾವರಿ,ರೈಲ್ವೆ, ಕೈಗಾರಿಕೆ, ಶಾಲಾ–ಕಾಲೇಜುಗಳ ಅಭಿವೃದ್ಧಿ, ಉನ್ನತ



ಶಿಕ್ಷಣ,ಮಹಿಳಾ ಸಬಲೀಕರಣ 10 ಹಲವು ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿ ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸಿದವರು. ಎರಡು ಬಾರಿ ಸಂಸದರಾಗಿ, ಎರಡು ಬಾರಿ ಶಾಸಕರಾಗಿ ಸೇವೆ ಸಲ್ಲಿಸಿದ ಸರಳ ವ್ಯಕ್ತಿತ್ವ ಹೊಂದಿ ಎಲ್ಲ ಜನಾಂಗದ ಜನರನ್ನು ಪ್ರೀತಿ ಗೌರವದಿಂದ ಕಂಡವರು. ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರು ಆಗಿದ್ದವರು. ಕನ್ನಡದ ಸಂಸ್ಕೃತಿ, ಬೆಳವಣಿಗೆಗೆ ಮಾರ್ಗದರ್ಶನ ನೀಡಿದ ವ್ಯಕ್ತಿ.ಚಾಮರಾಜನಗರ ಜಿಲ್ಲೆಯ ಸೇತುವೆಗಳ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿ, ಕೆರೆಗಳಿಗೆ ನೀರು ತುಂಬಿಸುವುದು, ಕೈಗಾರಿಕೆಗಳ ಸ್ಥಾಪನೆ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ ದೃಷ್ಟಿಕೋನದ ಮೂಲಕ ಜನರಲ್ಲಿ ಉತ್ತಮ ಅಭಿಪ್ರಾಯ ಹೊಂದಿದ ವ್ಯಕ್ತಿಯಾಗಿದ್ದವರು ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ಪದ್ಮಾಪುರುಷೋತ್ತಮ್ ಹಾಗೂಎಲ್ ಸುರೇಶ್ ಮಾತನಾಡಿ ಸರಳ ವ್ಯಕ್ತಿತ್ವದ ಧ್ರುವನಾರಾಯಣ್ ರವರು ಯಾವುದೇ ವ್ಯಕ್ತಿ ಸಹಾಯ ಹಸ್ತ ಕೇಳಿದಾಗ ಅವರ ಸಮಸ್ಯೆಗಳನ್ನು ಬಗೆಹರಿಸುವ ದಿಕ್ಕಿನಲ್ಲಿ ಕಾರ್ಯಯೋಜನೆ ರೂಪಿಸಿದವರು. ಕ್ಷೇತ್ರದ ಬಗ್ಗೆ ಸದಾ ಕಾಲ ಕ್ರಿಯಾಶೀಲತೆಯಿಂದ ಸೇವೆ ಸಲ್ಲಿಸಿದ ವ್ಯಕ್ತಿ ಎಂದರು.

ಗಾಯಕರಾದ ಕಾಗಲವಾಡಿ ರಂಗಸ್ವಾಮಿ ಮಾತನಾಡಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ನೂರಾರು ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಎಲ್ಲಾ ಕ್ಷೇತ್ರದ ಮಹನೀಯರನ್ನು ಗೌರವಿಸುತ್ತಿರುವ ಅಧ್ಯಕ್ಷರಾದ ಋಗ್ವೇದಿ ಯವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಹಾಗೂ ಧ್ರುವನಾರಾಯಣ ಕುರಿತು ಗೀತೆಯನ್ನು ಹಾಡಿ ಮತ್ತಷ್ಟು ವರ್ಷಗಳು ಬದುಕಿದ್ದರೆ ಚಾಮರಾಜನಗರ ಜಿಲ್ಲೆ , ಸಮಗ್ರ ಅಭಿವೃದ್ಧಿ ಉಂಟಾಗುತ್ತಿತ್ತು. ಅವರ ಆಕಾಲಿಕ ಮರಣ ಕ್ಷೇತ್ರಕ್ಕೆ ಹಾಗೂ ನಾಡಿಗೆ ನಷ್ಟ ಎಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಎಲ್.ಶಿವಲಿಂಗ ಮೂರ್ತಿ,ಮಹಮ್ಮದ್ ಗೌಸ್, ಸರಸ್ವತಿ, , ಗೀತಾ, ಸುನೀತಾ,ಬಿಕೆ ಆರಾಧ್ಯ, ವೀರಶೆಟ್ಟಿ, ಗಾಯಕ ಯಡಿಯೂರು ನಾಗರಾಜು, ಹಿರಿಯರಾದ ಬಸವರಾಜ್,ಕಾರ್ ಕುಮಾರ್, ಸುರೇಶ್ ಗೌಡ, ಮುಂತಾದವರು ಹಾಜರಿದ್ದರು.

# ಇಂದು ಚಾಮುಂಡೇಶ್ವರಿ ವರ್ಧಂತಿ ಸಂಭ್ರಮ

ಮೈಸೂರು: ನಾಡ ಅಧಿದೇವತೆ ಶ್ರೀ ಚಾಮುಂ ಡೇಶ್ವರಿ ವರ್ಧಂತಿ ಮಹೋತ್ಸವದ ಅಂಗವಾಗಿ ಚಾಮುಂಡಿ ಬೆಟ್ಟದಲ್ಲಿ ವಿಶೇಷ ಪೂಜೆ ಆಯೋಜಿಸಲಾಗಿದೆ.



ಬೆ.5.30ಕ್ಕೆ ಮಹನ್ಯಾಸ ಪೂರ್ವಕ ರುದ್ರಾಭಿ ಷೇಕ, ಪಂಚಾಮೃತ ಅಭಿಷೇಖ, ಸಹಸ್ರನಾಮಾ ರ್ಚನೆ,, ಮಂಗ ಳಾರತಿ ಬೆಳಿಗ್ಗೆ 9.30ಕ್ಕೆ ಮಹಾ ಮಂಗಳಾರತಿ ನಂತರ ಬೆ.10. 30ಕ್ಕೆ ಚಿನ್ನದ ಪಲ್ಲಕ್ಕಿ ಉತ್ಸವ, ಮಂಟಪೋ ತ್ಸವ, ಪ್ರಸಾದ ವಿನಿಯೋಗ, ರಾತ್ರಿ 8.30ಕ್ಕೆ ಉತ್ಸವ ಫಲಪೂಜೆ, ದರ್ಬಾರ್ ಉತ್ಸವ, ಮಂಟಪೋ ತ್ಸವ, ರಾಷ್ಟ್ರಾಶೀರ್ವಾದ ಜರುಗಲಿದೆ. ಈ ಹಿನ್ನೆಲೆಯಲ್ಲಿ ಖಾಸಗಿ ವಾಹನಗಳಿಗೆ ಪ್ರವೇಶ ನಿಷೇಧ, ಶಶಿರಂಜನ್ ಮೈದಾನದಿಂದ ಬೆ.9 ರಿಂದ ರಾತ್ರಿ 8.30ರವರೆಗೆ ಕೆಎಸ್‌ಆರ್ ಟಿಸಿ ಬಸ್ ಮೂಲಕ ಉಚಿತ ಸಾರಿಗೆ ಸೌಲಭ್ಯ, ಬೆ. 7.30ರಿಂದ ಮೆಟ್ಟಲು ಹತ್ತಲು ಪ್ರವೇಶ ಕಲ್ಪಿಸ ಲಾಗಿದೆ ಎಂದು ಪ್ರಾಧಿಕಾರದಿಂದ ತಿಳಿಸಿದ್ದಾರೆ.

# ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ನೋಟಿಸ್


▶▶ ಶಿವಕುಮಾರ ತುಂಬಸೋಗೆ

ಎಚ್.ಡಿ.ಕೋಟೆ: ಇತ್ತೀಚೆಗೆ ತಾಲೂಕಿನಲ್ಲಿ ನಡೆದಿದ್ದ ಎರಡು ಪೋಕ್ಸೋ ಪ್ರಕರಣಗಳಲ್ಲಿ ತನ್ನ ಜವಾಬ್ದಾರಿ ಮರೆತಿದ್ದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ, ವರ್ತಮಾನ ದಿನಪತ್ರಿಕೆಯ ವರದಿ ಪರಿಣಾಮ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನೋಟಿಸ್ ನೀಡಿದ್ದಾರೆ.

ಅಪ್ರಾಪ್ತ ಬಾಲಕಿಯರ ಮೇಲಿನ ದೌರ್ಜನ್ಯ ಪ್ರಕರಣಗಳ ಮಾಹಿತಿ ದೊರತೆ ಕೂಡಲೇ ಜಿಲ್ಲಾ ಮಕ್ಕಳ ರಕ್ಷಣಾ ಘಟಕ(ಡಿಸ್ಟ್ರಿಕ್ಟ್ ಚೈಲ್ಡ್ ಪ್ರೊಟೆಕ್ಷನ್ ಯೂನಿಟ್) ಸ್ಥಳಕ್ಕೆ ಭೇಟಿ ನೀಡಿ, ಸಂತ್ರಸ್ತ ಮಗುವಿನ ಸುರಕ್ಷತೆ, ಸಮಾಲೋಚನೆ, ಪುನರ್ವಸತಿ ಹಾಗೂ ಕಾನೂನಿನ ಕ್ರಮ ಕೈಗೊಳ್ಳುವುದು ಕಡ್ಡಾಯವಾಗಿತ್ತು.

ಘಟನೆಯ ವಿಷಯ ತಿಳಿದ ನಂತರವೂ ಮಕ್ಕಳ ರಕ್ಷಣಾ ಘಟಕದ ಯಾವೊಬ್ಬ ಅಧಿಕಾರಿ, ನೌಕರರೂ ತಾಲೂಕಿಗೆ ಭೇಟಿ ನೀಡಿರಲಿಲ್ಲ. ಇತ್ತೀಚೆಗೆ ನಡೆದಿದ್ದ ಎರಡೂ ಪ್ರಕರಣಗಳಲ್ಲೂ ರಕ್ಷಣಾ ಘಟಕ ತನ್ನ ಜವಾಬ್ದಾರಿ ಮರೆತಿತ್ತು. ಸ್ಥಳೀಯ ಪೊಲೀಸರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆಗಳು ಕ್ರಮ ಕೈಗೊಂಡಿದ್ದವು. ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ತ್ವರಿತ ಸ್ಪಂದನೆ ಇಲ್ಲದರ ಬಗ್ಗೆ ಜು. 31ರಂದು ವರ್ತಮಾನ ದಿನಪತ್ರಿಕೆ, ಜವಾಬ್ದಾರಿ ಮರೆತ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಎಂಬ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು.

ವರದಿ ಗಮನಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾಗರಾಜು, ಸಂತ್ರಸ್ತ ಮಗುವಿನ ಮನೆಗೆ ಸೌಜನ್ಯಕ್ಕಾದರೂ ಭೇಟಿ ನೀಡಿ ಸಾಂತ್ವಾನ ಹೇಳಿಲ್ಲ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಇದು ನಿಮ್ಮ ನಿರ್ಲಕ್ಷ್ಯತನವನ್ನು ತೋರಿಸುತ್ತದೆ. ಸಂತ್ರಸ್ತರ ಮನೆಗೆ ಖುದ್ದು ಭೇಟಿ ನೀಡಿ ವರದಿ ನೀಡುವಂತೆ ಆ.1ರಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗೆ ನೋಟಿಸ್ ನೀಡಿದ್ದು, ಮಾಹಿತಿಗಾಗಿ ಜಿಲ್ಲಾಧಿಕಾರಿಗೂ ಪತ್ರ ರವಾನಿಸಿದ್ದಾರೆ.



ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮೈಸೂರು ಜಿಲ್ಲೆ

ಉಪನಿರ್ದೇಶಕರ ಕಛೇರಿ, ಸ್ತ್ರೀ ಶಕ್ತೀ ಭವನ, ಕೃಷ್ಣದೇವರಾಯ ವೃತ್ತ, 2ನೇ ಹಂತ ವಿಜಯನಗರ ಮೈಸೂರು

ದೂರವಾಣಿ ಸಂಖ್ಯೆ:0821-2495432/ 2498031 ಇ-ಮೇಲ್ ddwcdmysore@yahoo.com

ಸಂಖ್ಯೆ:ಉನಿಮೈ:ಜಿ.ಮ.ರ.ಘ:ತಿ.ನೋ:2026-27/668 ದಿನಾಂಕ:01.08.2026

"ತಿಳುವಳಿಕೆ ನೋಟಿಸ್"

ವಿಷಯ: "ಜವಾಬ್ದಾರಿ ಮರೆತ ಜಿಲ್ಲಾ ಮಕ್ಕಳ ರಕ್ಷಣಾ ಘಟಕ" ಎಂಬ ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾದ ಶೀರ್ಷಿಕೆಯಡಿ ಸಂತ್ರಸ್ಥೆ ಮನೆಗೆ ಭೇಟಿ ನೀಡದಿರುವ ಬಗ್ಗೆ.

ಉಲ್ಲೇಖ: ವರ್ತಮಾನ ಪತ್ರಿಕೆ ಪ್ರಕಟಣೆ ದಿನಾಂಕ:31.07.2026

************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಇತ್ತೀಚಿಗೆ ಬೆಳಕಿಗೆ ಬಂದಿರುವ ಪೋಕ್ಸೋ ಪ್ರಕರಣಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಖುದ್ದು ಭೇಟಿ ನೀಡದೆ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಕುಳಿತಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿ ಬಂದಿರುತ್ತದೆ ಎಂಬ ವರ್ತಮಾನ ದಿನ ಪತ್ರಿಕೆಯು ವರದಿಸಿರುತ್ತದೆ. ಅಪ್ರಾಪ್ತ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯದಡಿ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ತುರ್ತು ಕ್ರಮಕೈಗೊಳ್ಳಲು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜವಾಬ್ದಾರಿ ಹಾಗೂ ಕರ್ತವ್ಯವಾಗಿರುತ್ತದೆ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ತಮ್ಮಿಂದ ಈವರೆವಿಗೂ ಪ್ರಕರಣ ಸ್ಥಳಕ್ಕೆ ಭೇಟಿ ನೀಡಿರುವುದಿಲ್ಲ ಹಾಗೂ ಸಂತ್ರಸ್ಥ ಮಗುವಿಗೆ ಸೌಜನ್ಯಕ್ಕಾಗಿಯೂ ಸಹ ಭೇಟಿ ನೀಡಿ ಸಾಂತ್ವನ ನೀಡಿರುವುದಿಲ್ಲ. ಇದು ತಮ್ಮ ನಿರ್ಲಕ್ಷ್ಯತನ ಎದ್ದು ಕಾಣಿಸುತ್ತಿದ್ದು, ಈ ಬಗ್ಗೆ ಸೂಕ್ತ ಸಮಜಾಯಿಷಿಯನ್ನು ಈ ಸಂತ್ರಸ್ಥೆ ಬಾಲಕಿ ಖುದ್ದು ಭೇಟಿ ನೀಡಿ ಪ್ರಕರಣಕ್ಕೆ ಸಂಬಂಧಿಸಿದ ಛಾಯಾ ಚಿತ್ರದೊಂದಿಗೆ ವರದಿಯನ್ನು ನೀಡತಕ್ಕದ್ದು. ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.



## ಜವಾಬ್ದಾರಿ ಮರೆತ ಜಿಲ್ಲಾ ಮಕ್ಕಳ ರಕ್ಷಣಾ ಘಟಕ

ಎಚ್.ಡಿ.ಕೋಟೆ: ತಾಲೂಕಿನಲ್ಲಿ ಇತ್ತೀಚೆಗೆ ಬೆಳಕಿಗೆ ಬಂದಿರುವ ಪೋಸ್ಕೋ ಪ್ರಕರಣಗಳಲ್ಲಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಖುದ್ದು ಭೇಟಿ ನೀಡದೆ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಕುಳಿತಲ್ಲಿಯೇ ಕಾರ್ಯನಿರ್ವಹಿಸುತ್ತಿರುವ ಆರೋಪ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದ್ದು, ಇದೀಗ ಚರ್ಚೆಗೆ ಗ್ರಾಸವಾಗುತ್ತಿದೆ.

ಅಪ್ರಾಪ್ತ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಮಾಹಿತಿ ದೊರೆತ ತಕ್ಷಣ ಜಿಲ್ಲಾ ಮಕ್ಕಳ ರಕ್ಷಣಾ ಘಟಕ (ಡಿಸ್ಟ್ರಿಕ್ಟ್ ಚೈಲ್ಡ್ ಪ್ರೊಟೆಕ್ಷನ್ ಯೂನಿಟ್)ಸ್ಥಳಕ್ಕೆ ಭೇಟಿ ನೀಡಿ, ಸಂತ್ರಸ್ತ ಮಗುವಿನ ಸುರಕ್ಷತೆ, ಸಮಾಲೋಚನೆ, ಪುನರ್ವಸತಿ ಹಾಗೂ ಕಾನೂನು ನೆರವಿನ ಕ್ರಮಗಳನ್ನು ಕೈಗೊಳ್ಳುವುದು ಕಡ್ಡಾಯವಾಗಿದೆ. ಆದರೆ, ಘಟನೆಯ ವಿಷಯ ತಿಳಿದ ನಂತರವೂ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಅಧಿಕಾರಿಗಳು ಸ್ಥಳಕ್ಕೆ ಆಗಮಿಸಿಲ್ಲ.

ಸೌಜನ್ಯಕ್ಕಾದರೂ ತಮ್ಮ ಸಿಬ್ಬಂದಿಗಳನ್ನೂ ಸ್ಥಳಕ್ಕೆ ಕಳುಹಿಸದೇ ಮಕ್ಕಳ ಬಗ್ಗೆ ಬೇಜವಾಬ್ದಾರಿ ತೋರಿದ್ದಾರೆ. ತಾಲೂಕಿನ ಗ್ರಾಮವೊಂದರಲ್ಲಿ ಅಪ್ರಾಪ್ತ ಬಾಲಕಿಯನ್ನು ಅಪ್ರಾಪ್ತ ಬಾಲಕನೊಬ್ಬ ಗರ್ಭಿಣಿ ಮಾಡಿದ್ದರೆ, ಮತ್ತೊಂದು ಗ್ರಾಮದಲ್ಲಿ ತಂದೆಯೇ ಮಗಳನ್ನು ಅತ್ಯಾಚಾರ ಮಾಡಿದ್ದ ಎನ್ನಲಾದ ಎರಡು ಪ್ರಕರಣಗಳು ಬೆಳಕಿಗೆ ಬಂದಿದ್ದವು.

ತಾಲೂಕಿನಲ್ಲಿ ಇತ್ತೀಚೆಗೆ ನಡೆದ ಈ ಎರಡು ಪ್ರಕರಣಗಳಲ್ಲಿ ಪೊಲೀಸರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಆರೋಗ್ಯ ಇಲಾಖೆ ತಮ್ಮ ವ್ಯಾಪ್ತಿಯಲ್ಲಿ ಕ್ರಮ ಕೈಗೊಂಡಿದ್ದರೂ, ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಬೇಕಾದ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ತ್ವರಿತ ಸ್ಪಂದನೆ ಕಾಣದಿರುವುದು ಹಲವು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಪೋಕ್ಸೊ ಕಾಯ್ದೆಯಡಿ ದಾಖಲಾಗುವ ಪ್ರಕರಣಗಳಲ್ಲಿ ಸಂತ್ರಸ್ತ ಮಕ್ಕಳಿಗೆ ಮಾನಸಿಕ ಧೈರ್ಯ ತುಂಬುವುದು, ಅಗತ್ಯ ಸಮಾಲೋಚನೆ, ಪುನರ್ವಸತಿ ಮತ್ತು ಪರಿಹಾರ ಯೋಜನೆಗಳ ಬಗ್ಗೆ ಮಾರ್ಗದರ್ಶನ ನೀಡುವುದು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಪ್ರಮುಖ ಜವಾಬ್ದಾರಿಯಾಗಿದೆ. ಈ ಹಿನ್ನೆಲೆ, ಪ್ರಕರಣ ಬೆಳಕಿಗೆ ಬಂದ ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿತ್ತು ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗಿದೆ.

ವರ್ತಮಾನ ವರದಿ ಪರಿಣಾಮ

# ಕಟಾವು ಹಂತದಲ್ಲಿದ್ದ ಬೆಳ್ಳುಳ್ಳಿ ಕಳವು



ಗುಂಡ್ಲುಪೇಟೆ: ತಾಲೂಕಿನ ಭೀಮನಬೀಡು ಗ್ರಾಮದಲ್ಲಿ ಕಟಾವು ಹಂತದಲ್ಲಿದ್ದ ಬೆಳ್ಳುಳ್ಳಿ ಬೆಳೆ ಕಳ್ಳತನವಾಗಿರುವ ಘಟನೆ ಭಾನುವಾರ ರಾತ್ರಿ ನಡೆದಿದ್ದು, ರೈತನಿಗೆ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗಿದೆ.

ಗ್ರಾಮದ ರೈತ ಸಿದ್ದರಾಜು ಅವರಿಗೆ ಸೇರಿದ ಜಮೀನಿನಲ್ಲಿ ಬೆಳೆದಿದ್ದ ಸುಮಾರು 5 ಕ್ವಿಂಟಲ್ ಬೆಳ್ಳುಳ್ಳಿಯನ್ನು ಕಳ್ಳರು ಕಳವು ಮಾಡಿಕೊಂಡು ಹೋಗಿರುವುದಾಗಿ ತಿಳಿದುಬಂದಿದೆ. ಪ್ರಸ್ತುತ ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ಕ್ವಿಂಟಲ್‌ಗೆ ಸುಮಾರು ?45 ಸಾವಿರ ದರ ಇರುವುದರಿಂದ ಬೆಲೆ ಏರಿಕೆಯ ಹಿನ್ನೆಲೆ ಕಳ್ಳತನ ನಡೆದಿರಬಹುದೆಂದು ಶಂಕಿಸಲಾಗಿದೆ.

ರೈತ ಸಿದ್ದರಾಜು ಅವರು ಸುಮಾರು ಒಂದೂವರೆ ಎಕರೆ ಜಮೀನಿನಲ್ಲಿ ಬೆಳ್ಳುಳ್ಳಿ ಬೆಳೆದಿದ್ದು, ಉತ್ತಮ ಗುಣಮಟ್ಟದ ಬೆಳೆ ಉತ್ತಮ ಇಳುವರಿ ನೀಡುವ ನಿರೀಕ್ಷೆಯಲ್ಲಿತ್ತು. ಇನ್ನೇನು ಕಟಾವು ಮಾಡಬೇಕಿದ್ದ ಸಮಯದಲ್ಲೇ ಕಳ್ಳರು ಬೆಳೆ ಕದ್ದೊಯ್ದಿರುವುದು ರೈತನ ಸಂಕಷ್ಟವನ್ನು ಮತ್ತಷ್ಟು ಹೆಚ್ಚಿಸಿದೆ.

ಈ ಕುರಿತು ಮಾತನಾಡಿದ ರೈತ ಸಿದ್ದರಾಜು, "ಸಾಲ ಮಾಡಿ ಬೆಳೆ ಬೆಳೆದಿದ್ದೆ. ಕಟಾವು ಸಮಯದಲ್ಲಿ ಬೆಳೆ ಕಳ್ಳತನವಾಗಿರುವುದು ನನಗೆ ತುಂಬಲಾರದ ನಷ್ಟ ತಂದಿದೆ. ರೈತರ ಬೆವರಿನ ಫಲವನ್ನು ಕದಿಯುವ ಇಂತಹ ಕೃತ್ಯಗಳು ಖಂಡನೀಯ. ನನ್ನ ನೋವನ್ನು ಹೇಳಿಕೊಳ್ಳಲು ಮಾತುಗಳೇ ಬರುತ್ತಿಲ್ಲ," ಎಂದು ಅಳಲು ತೋಡಿಕೊಂಡರು. ಪೊಲೀಸ್ ರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಕಳ್ಳರನ್ನು ಶೀಘ್ರ ಬಂಧಿಸಿ ರೈತನಿಗೆ ನ್ಯಾಯ ಒದಗಿಸಬೇಕು ಎಂದರು

# ಮೇಕೆದಾಟು ಯೋಜನೆ ತಡೆಯೊಡ್ಡುವುದು ಸರಿಯಲ್ಲ



ಚಾಮರಾಜನಗರ ತಮಿಳುನಾಡಿನಿಂದ ಕರ್ನಾಟಕಕ್ಕೆ ಸಿಹಿ ನೀರು ಬಿಡಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘದ ಸೇವಕರು, ವಿಶ್ವರೈತ ಸಂಘಟನಾ ಸದಸ್ಯರು, ಪಾರಂಪರಿಕ ವೈದ್ಯ ಹೆಚ್.ಸಿ.ಮಹೇಶ್‌ಕುಮಾರ್ ಹೆಗ್ಗವಾಡಿಪುರ ಆಗ್ರಹಿಸಿದರು.ನಗರದಲ್ಲಿ ಸುದ್ದಿಗಾರರೊಂದಿ ಮಾತನಾಡಿದ ಅವರು ರಾಜ್ಯದಲ್ಲಿ ಕುಡಿಯುವ ನೀರಿನ ಅಭಾವ ಸೃಷ್ಟಿಯಾಗಿದೆ. ಆಗಾಗಿ ತಮಿಳುನಾಡು ಮುಖ್ಯಮಂತ್ರಿ ವಿಜಯ ಅವರು, ಕರ್ನಾಟಕದಿಂದ ಬಂದು ತಮಿಳುನಾಡಿನ ಸಮುದ್ರದಲ್ಲಿ ಸಂಗ್ರಹ ಆಗಿರುವ ಉಪ್ಪು ನೀರನ್ನು ಸಿಹಿ ನೀರು ಘಟಕ ಮಾಡಿ ಕರ್ನಾಟಕಕ್ಕೆ ನೀಡಬೇಕು ಎಂದು ಆಗ್ರಹಿಸಿದರು.

ತಮಿಳುನಾಡಿಗೆ ಕರ್ನಾಟಕ ನೀರು ಹರಿಸುತ್ತಾ ಬಂದಿರುವುದಕ್ಕೆ ಸಾವಿರಾರು ವರ್ಷಗಳ ಕಾಲ ಇತಿಹಾಸ ಇದೆ. ಆಗಾಗಿ ಎರಡು ರಾಜ್ಯಗಳು ಮುಖ್ಯಮಂತ್ರಿಗಳು ಎರಡು ರಾಜ್ಯಗಳ ಜಲಾಶಯಗಳನ್ನು ಪರಿಶೀಲಿಸಿ ಸತ್ಯಸತ್ಯತೆ ಹರಿಯಬೇಕು. ಸಿಹಿ ನೀರು ಘಟಕ ಸ್ಥಾಪಿಸಲು ಪ್ರಧಾನಿ ಚಿಂತಿಸಬೇಕು.ರಾಜ್ಯದ ಸಂಸದರು ಶಾಸಕರು ಹಾಗೂ ಎಲ್ಲ ಕನ್ನಡ ಪರ, ರೈತ ಪರ ಹೋರಾಟಗಾರರು ತಮಿಳುನಾಡಿನಿಂದ ಕರ್ನಾಟಕಕ್ಕೆ ಸಿಹಿ ನೀರು ನೀಡುವಂತೆ ಒತ್ತಾಯ ಮಾಡಬೇಕಿದೆ ಎಂದರು.

ಕಳೆದ ಬಾರಿ ಕರ್ನಾಟಕದಿಂದ ತಮಿಳುನಾಡಿಗೆ 380 ಟಿಎಂಸಿ ನೀರು ಹರಿದು ಹೋಗಿದೆ. . 205 ಟಿಸಿಎಂಗೆ 175 ಟಿಎಂಸಿ ಹೆಚ್ಚು ಬಿಡುಗಡೆ ಮಾಡಲಾಗಿದೆ. ಅಲ್ಪ ಋಣ ತೀರಿಸಲು ಮುಖ್ಯಮಂತ್ರಿ ವಿಜಯ ಋಣತೀರಿಸಬೇಕು ಎಂದು ಒತ್ತಾಯಿಸಿದರು., ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಪ್ರಧಾನಿ ನರೇಂದ್ರಮೋದಿ ಅವರಿಗೆ ಅರ್ಜಿ ಸಲ್ಲಿಸಿ ಮೇಕೆ ದಾಟು ಯೋಜನೆಗೆ ತಡೆಯೊಡ್ಡಿದ್ದಾರೆ. ಮಳೆಯಾಧಾರದಲ್ಲಿ ನ್ಯಾಯಾಲಯಕ್ಕೂ ನಾವು ಗೌರವ ಕೊಡುತ್ತಾ ತಮಿಳುನಾಡಿಗೆ ನೀರು ಕೊಟ್ಟಿದ್ದೇವೆ. ಈಗ ವಿಜಯ ಅವರು ತಮಿಳುನಾಡು ಮುಖ್ಯಮಂತ್ರಿಯಾಗಿದ್ದರೆ. ಮುಖ್ಯಮಂತ್ರಿಗಳು ಒಂದಾಗಿ ಸಮಸ್ಯೆ ಇರುವ ಕಡೆ ಪರಿಶೀಲಿಸಿ ಕ್ರಮಕೈಗೊಳ್ಳಬೇಕು ಎಂದು. ಒತ್ತಾಯಿಸಿದರು.

ಕರ್ನಾಟಕದಲ್ಲಿ ಭೀಕರ ಬರಗಾಲ ಆವರಿಸಿದ್ದು. . ಕರ್ನಾಟಕದಲ್ಲಿ ಮಳೆಯ ಅಭಾವದಿಂದ ಕೆರೆಕಟ್ಟೆಗಳು. ಅಂತರ್ಜಲ ಮೂಲಗಳು ಬತ್ತಿ ಹೋಗಿದ್ದು, ಕುಡಿಯುವ ನೀರಿಗಾಗಿ ಜನ, ಜಾನುವಾರು ಪರಿತಪಿಸುತ್ತಿರುವ ಸಂದರ್ಭದಲ್ಲಿ ಕಾವೇರಿ ನೀರು ನಿಯಂತ್ರಣ ಸಮಿತಿ 15 ದಿನಗಳ ಕಾಲ ಪ್ರತಿದಿನ 3.500 ಕ್ಯೂಸೆಕ್ ನೀರು ಬಿಡುಗಡೆ ಮಾಡುವಂತೆ ನಿರ್ದೇಶನ ನೀಡಿರುವುದು ಅತ್ಯಂತ ಖಂಡನೀಯ. ಮಳೆ ಕೊರತೆಯಿಂದ ಶೇ. 75 ಭಾಗ ಬೆಳೆ ಮಾಡಿಲ್ಲ. ರೈತರು ಬಹಳ ಸಂಕಷ್ಟದಲ್ಲಿ ರೈತರು ಇದ್ದಾರೆ.ತಮಿಳುನಾಡು ಮುಖ್ಯಮಂತ್ರಿ ಸಮುದ್ರದಲ್ಲಿ ಸಿಹಿನೀರು ಘಟಕ ಸ್ಥಾಪಿಸಿ ಕರ್ನಾಟಕಕ್ಕೆ ನೀರು ಹರಿಸುವ ಮೂಲಕ ಕರ್ನಾಟಕದ ಋಣತೀರಿಸುವ ಕೆಲಸ ಮಾಡಬೇಕು ಎಂದು ಹೆಗ್ಗವಾಡಿಪುರ ಮಹೇಶ್ ಕುಮಾರ್ ಒತ್ತಾಯಿಸಿದರು.

## ತನ್ವೀರ್ ಸೇಠ್ ಗೆ ತಪ್ಪಿದ ಸಚಿವ ಸ್ಥಾನ

# ಹೆದ್ದಾರಿ ಸಂಚಾರ ತಡೆದು ಆಕ್ರೋಶ

## ವಿಷ ಸೇವಿಸಿದ ಅಭಿಮಾನಿ, ಬೆಂಬಲಿಗರಿಂದ ರಾಜೀನಾಮೆ, ಪ್ರತಿಭಟನೆ

ಮೈಸೂರು: ರಾಜ್ಯ ಸಚಿವ ಸಂಪುಟ ವಿಸ್ತರಣೆಯಲ್ಲಿ ನರಸಿಂಹರಾಜ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಗೆ ಸಚಿವ ಸ್ಥಾನ ಕೈ ತಪ್ಪಿದ ಹಿನ್ನಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರೆ, ಅಭಿಮಾನಿಯೊಬ್ಬ ವಿಷ ಕುಡಿದು ಆತ್ಮಹತ್ಯೆಗೆ ಯತ್ನಿಸಿದ ಘಟನೆಯೂ ಕೂಡ ನಡೆಯಿತು.

ಕಾಂಗ್ರೆಸ್ ಹೈಕಮಾಂಡ್ ಸೋಮವಾರ ನೂತನ ಸಚಿವ ಸಂಪುಟದ ಹೆಸರು ಪ್ರಕಟ ಮಾಡುತ್ತಿದ್ದಂತೆ ಶಾಸಕ ತನ್ವೀರ್ ಸೇಠ್ ಹೆಸರು ಇಲ್ಲದಿರುವುದನ್ನು ಕಂಡ ಕಾರ್ಯಕರ್ತರು ಅಭಿಮಾನಿಗಳು ಉದಯಗಿರಿಯಲ್ಲಿರುವ ತನ್ವೀರ್ ಸೇಠ್ ನಿವಾಸದ ಎದರು ಜಮಾಯಿಸಿದರು. ಕಾಂಗ್ರೆಸ್ ಹೈಕಮಾಂಡ್ ಮತ್ತು ಕಾಂಗ್ರೆಸ್ ನಾಯಕರುಗಳ ವಿರುದ್ಧ ಘೋಷಣೆಗಳನ್ನು ಕೂಗಿ ತಮ್ಮ ಆಕ್ರೋಶ ಹೊರಹಾಕಿದರು. ಈ ವೇಳೆ ಶಾಸಕರ ನಿವಾಸದ ಎದುರೇ ತಬ್ರೇಜ್ ಖಾನ್ ಎಂಬ ಅಭಿಮಾನಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದನು. ಕೂಡಲೇ ಅಲ್ಲಿದ್ದವರು ಅವನ ಕೈಯಿಂದ ಬಾಟಲಿಯನ್ನು ಕಿತ್ತುಕೊಂಡರಾದರು. ಆತ ಅಸ್ವಸ್ಥಗೊಂಡ ಹಿನ್ನೆಲೆಯಲ್ಲಿ ಕಾರ್ಯಕರ್ತರು ಮತ್ತು ಪೊಲೀಸರು ತಕ್ಷಣ ಆತನನ್ನು ಚಿಕಿತ್ಸೆಗಾಗಿ ಖಾಸಗಿ ಆಸ್ಪತ್ರೆಗೆ ಕರೆದೊಯ್ದರು.








ಬಳಿಕ ಮನೆಯಿಂದ ಹೊರ ಬಂದ ಶಾಸಕ ತನ್ವೀರ್ ಸೇಠ್ ಅಭಿಮಾನಿಗಳು, ಕಾರ್ಯಕರ್ತರಲ್ಲಿ ಮನವಿ ಮಾಡಿ ಯಾರೂ ಆವೇಶಕ್ಕೆ ಒಳಗಾಗಬೇಡಿ, ನಿಮಗೆ ನೋವಾಗಿದೆ ಎಂಬುದು ನನಗೆ ಗೊತ್ತಿದೆ. ತಾಳ್ಮೆಯಿಂದ ವರ್ತಿಸುವಂತೆ ಮನವಿ ಮಾಡಿದರು. ಸಚಿವ ಸ್ಥಾನ ಸಿಗದ ಹಿನ್ನಲೆಯಲ್ಲಿ ಅಭಿಮಾನಿ ತಬ್ರೇಝ್ ಖಾನ್ ವಿಷ ಸೇವಿಸಿ ಆಸ್ಪತ್ರೆಗೆ ದಾಖಲಾಗಿರುವ ವಿಷಯ ತಿಳಿಯುತ್ತಿದ್ದಂತೆ ಬೇಸರದಲ್ಲೇ ಶಾಸಕ ತನ್ವೀರ್ ಸೇಠ್ ಆಸ್ಪತ್ರೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದರು. ಪ್ರಾಣಕ್ಕೆ ಅಪಾಯ ಇಲ್ಲದಿರುವುದನ್ನು ತಿಳಿದು ನಿಟ್ಟುಸಿರು ಬಿಟ್ಟರು. ಬಳಿಕ ರೋಗಿಯ ಬಳಿಗೆ ತೆರಳಿ ಕುಟುಂಬದವರಿಗೆ ಧೈರ್ಯ ಹೇಳಿದರು.

ಇನ್ನೂ ಕೆಲ ಕಾರ್ಯಕರ್ತರು ಸುಮ್ಮನಿರದೆ ಮೈಸೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಮಣಿಪಾಲ್ ಆಸ್ಪತ್ರೆ ವೃತ್ತಕ್ಕೆ ತೆರಳಿ ಹೆದ್ದಾರಿ ತಡೆದು ಪ್ರತಿಭಟನೆಗೆ ಮುಂದಾದರು. ಈ ವೇಳೆ ಅಭಿಮಾನಿಗಳು ನಾಲ್ಕು ಭಾಗದ ರಸ್ತೆಗಳಲ್ಲಿ ವಾಹನಗಳಿಗೆ ಅಡ್ಡಲಾಗಿ ಮಲಗಿದರು. ಇನ್ನು ಕೆಲವರು ರಸ್ತೆಯಲ್ಲೇ ಕುಳಿತು ಕಾಂಗ್ರೆಸ್ ಹೈಕಮಾಂಡ್, ಕೆ.ಸಿ.ವೇಣುಗೋಪಾಲ್, ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ಪೊಲೀಸರು ರಸ್ತೆ ತಡೆ ನಡೆಸದಂತೆ ಎಷ್ಟೇ ಮನವಿ ಮಾಡಿದರು ಪ್ರತಿಭಟನಾಕಾರರು ಬಗ್ಗಲಿಲ್ಲ. ನಂತರ ಒಬ್ಬೊಬ್ಬರನ್ನಾಗಿ ಎತ್ತೊಯ್ದು ಪೊಲೀಸ್ ವ್ಯಾನ್ ಒಳಗೆ ಬಿಟ್ಟರು. ಈ ವೇಳೆ ಪೊಲೀಸರು ಪ್ರತಿಭಟನಾಕಾರರ ನಡುವೆ ತಳ್ಳಾಟ ನೂಕಾಟ ಉಂಟಾಯಿತು. ಬಳಿಕ ಹೆಚ್ಚಿನ ಪೊಲೀಸರನ್ನು ಕರೆಸಿ ಪ್ರತಿಭಟನಾಕಾರರನ್ನೆಲ್ಲಾ ಬಂಧಿಸಿ ಕರೆದೊಯ್ದರು.

ರಸ್ತೆ ತಡೆದ ಹಿನ್ನೆಲೆಯಲ್ಲಿ ಕಿ.ಮೀಟರ್ ಗಟ್ಟಲೆ ವಾಹನಗಳ ಸಂಚಾರ ಸ್ಥಗಿತಗೊಂಡು ಸಂಚಾರ ಅಸ್ತವ್ಯಸ್ತಗೊಂಡಿತು.ಡಿಸಿಪಿಗಳಾದ ಪ್ರಿಯಂವದಾ, ಸುಂದರ್ ರಾಜ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಅಹಿತಕರ ಘಟನೆ ನಡೆಯದಂತೆ ಎಸಿಪಿಗಳಾದ ರವಿಪ್ರಸಾದ್, ಶಿವಶಂಕರ್, ಮಾಥ್ಯೂ ಥಾಮಸ್ ಸಂಪೂರ್ಣ ಉಸ್ತುವಾರಿ ವಹಿಸಿ ಪರಿಸ್ಥಿತಿ ನಿಯಂತ್ರಿಸಿದರು.

### ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ

**ನಗರಪಾಲಿಕೆ ಮಾಜಿ ಸದಸ್ಯ ಪ್ರದೀಶ್ ಈಶ್ವರ್ ಆರು ಬಾರಿ ಶಾಸಕರಾದ ತನ್ವೀರ್ ಸೇಠ್ ಗೆ ಸಚಿವ ಸ್ಥಾನ ನೀಡದೇ ವಂಚಿಸಲಾಗಿದೆ. ಮೈಸೂರು ಅಭಿವೃದ್ಧಿ ಅವರಿಂದ ಆಗುತ್ತದೆ ಎಂದು ತಡೆಯಲಾಗಿದೆ. ಇದರಿಂದ ಮನನೊಂದು ನನ್ನ ಸದಸ್ಯತ್ವ ಸ್ಥಾನಕ್ಕೆ ರಾಜೀನಾಮೆ ನೀಡುತ್ತಿದ್ದೇನೆಂದು ರಾಜೀನಾಮೆ ಹಿಡಿದು ರಸ್ತೆಯಲ್ಲೇ ಪ್ರತಿಭಟಿಸಿದರು.**

‘ ಶಾಸಕ ತನ್ವೀರ್ ಸೇಠ್ ಗೆ ಸಚಿವ ಸ್ಥಾನ ನೀಡದೆ ಅನ್ಯಾಯ ಮಾಡಲಾಗಿದೆ. ಅಲ್ಪಸಂಖ್ಯಾತ ಮಾತ್ರವಲ್ಲದೆ ಎಲ್ಲಾ ಸಮುದಾಯದವರೂ ಅವರೊಟ್ಟಿಗೆ ಇದ್ದಾರೆ. ಮೈಸೂರು ಭಾಗದಲ್ಲಿ ಕಾಂಗ್ರೆಸ್ ನೆಲೆ ಕೊಟ್ಟಿರುವುದೇ ಇವರ ಕುಟುಂಬ ಅಂತಹವರ ಕಡೆಗಣನೆ ಸರಿಯಲ್ಲ. ಇದು ಬರಿ ಅಲ್ಪಸಂಖ್ಯಾತರಿಗೆ ಮಾಡಿದ ಮೋಸ ಅಲ್ಲ, ಇಡೀ ಮೂಲ ಕಾಂಗ್ರೆಸ್‌ಗೆ ಮಾಡಿದ ಮೋಸ.

▶▶ –**ಮಾದೇಗೌಡ** ಉಪಾಧ್ಯಕ್ಷ ಡಿಸಿಸಿ

‘ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾದ ಶಾಸಕ ತನ್ವೀರ್ ಸೇಠ್ ಹಿರಿತನಕ್ಕೆ ಸರ್ಕಾರ ಮನ್ನಣೆ ನೀಡಿಲ್ಲ. ಇದು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಗೆ ತಕ್ಕ ಪಾಠ ಕಲಿಸಲಿದೆ. ಅವರಿಗೆ ಸಚಿವ ಸ್ಥಾನ ನೀಡದಿರುವುದು ನಮ್ಮೆಲ್ಲರಿಗೂ ನೋವು ತರಿಸಿದೆ. ಈ ಹಿನ್ನೆಲೆಯಲ್ಲಿ ಮತ್ತಷ್ಟು ರೀತಿಯ ಹೋರಾಟಗಳನ್ನು ಅವರಿಗೆ ಸ್ಥಾನ ನೀಡುವವರೆಗೂ ಮುಂದುವರೆಸಲಾಗುವುದು.

▶▶ – **ಇಕ್ಬಾಲ್** ಕಾಂಗ್ರೆಸ್ ಮುಖಂಡ

# ಆ.5ರಿಂದ ಇನ್‌ಕ್ಯುಬೇಷನ್ ಕಾರ್ಯಕ್ರಮ




ಮೈಸೂರು: ಜಿಎಸ್‌ಎಸ್‌ಎಸ್ ಟಿಬಿಐಎಫ್ ಕೇಂದ್ರದ ವತಿಯಿಂದ ನವೋದ್ಯಮ ಆರಂಭಕ್ಕೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಆ.5 ರಿಂದ 6 ವಾರಗಳ ಅವಧಿಯ ಪೂರ್ವ ಇನ್‌ಕ್ಯುಬೇಷನ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಿಇಓ ಯಶಸ್ವಿ ನಾಗ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕೇಂದ್ರ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಸಹಯೋಗದಲ್ಲಿ ಈ ಕೇಂದ್ರ ಸ್ಥಾಪಿತವಾಗಿದೆ. ಅಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮಕ್ಕೆ ಚಾಲನೆ ದೊರೆಯಲಿದೆ. ಆನ್‌ಲೈನ್ ಮತ್ತು ಆಫ್‌ಲೈನ್ ಮಾದರಿಯಲ್ಲಿ ತಜ್ಞರು ತರಬೇತಿ ನೀಡಲಿದ್ದಾರೆ. ಉದ್ಯಮ ಆರಂಭಿಸಲು ಆಸಕ್ತಿ ಹೊಂದಿರುವ ಯುವಜನರು, ನವೋದ್ಯಮಿಗಳು, ವಿದ್ಯಾರ್ಥಿಗಳು, ಸಂಶೋಧಕರು, ಆರಂಭಿಕ ಹಂತದ ಸ್ಟಾರ್ಟ್‌ಅಪ್ ಸಂಸ್ಥಾಪಕರಿಗೆ ಅಗತ್ಯ ಜ್ಞಾನ, ಮಾರ್ಗದರ್ಶನ ಮತ್ತು ಉದ್ಯಮಶೀಲತಾ ಬೆಂಬಲ ಒದಗಿಸಲಾಗುವುದೆಂದರು. ಸಾಮಾನ್ಯರಿಗೆ 2500 ರೂ., ಮಹಿಳೆಯರಿಗೆ 2000 ರೂ., ಶುಲ್ಕವಿದೆ. ಜೊತೆಗೆ ಆಯ್ಕೆಯಾದವರಿಗೆ ಅವರ ಉತ್ಪನ್ನ ತಯಾರಿಕೆ ಹಂತದವರೆಗೆ ಅಗತ್ಯವಾದಂತೆ ಸುಮಾರು 10 ಲಕ್ಷ ರೂ., ನೆರವು ನೀಡಲಾಗುವುದೆಂದರು. ವಾಣಿಜ್ಯೋದ್ಯಮ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು ಮಾತನಾಡಿ, ಮೈಸೂರು ಭಾಗದಲ್ಲಿ ಉದ್ಯಮ ಸ್ಥಾಪನೆ, ನವೀದ್ಯಮಿಗಳಿಗೆ ಅವಕಾಶ, ಸ್ಟಾರ್ಟಪ್‌ಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ನೆರವಾಗಲಿದೆ. ಇದರಿಂದಾಗಿ ಇಲ್ಲಿ ಉತ್ಪಾದನೆಯಿಂದ ಹಿಡಿದು, ಪ್ಯಾಕಿಂಗ್, ರಫ್ತಿನವರೆಗೂ ಮಾರ್ಗದರ್ಶನ ದೊರಕಲಿದೆ ಎಂದು ವಿವರಿಸಿದರು. ಡಾ. ಪ್ರವೀಣ್, ಅಶೋಕ್ ಆನಂದ್, ಕಲೀಮುಲ್ಲಾ ಷರೀಫ್ ಹಾಜರಿದ್ದರು.



### ಎರಡೂ ಹೆಸರಿನವಳು ನಾನೆ

ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ತಾಲೂಕು ಸರಗೂರು ಟೌನಿನ ಎರಡನೇ ಮುಖ್ಯ ರಸ್ತೆಯ ಬಸವೇಶ್ವರ ದೇವಸ್ಥಾನದ ಹತ್ತಿರದ ನಿವಾಸದಲ್ಲಿ ವಾಸವಾಗಿರುವ ಎಸ್ ಆದೀಶ್ ಕುಮಾರ್ ಅವರ ಪತ್ನಿ ಶ್ರೀಮತಿ ಎಸ್ ಎ ರಜಿನಿ ಆದ ನಾನು ನೋಟರಿ ಅವರ ಸಮ್ಮುಖದಲ್ಲಿ ನನಗೆ ಇರುವ ಎಸ್ ಎ ರಜಿನಿ ಮತ್ತು ಎಂ ಪಿ ರಜಿನಿ ಎಂಬ ಎರಡು ಹೆಸರುಗಳು ನನ್ನದೇ ಎಂದ ಈ ಮೂಲಕ ಪ್ರಮಾಣೀಕರಿಸುತ್ತೇನೆ

ಸಹಿ/- ಎಸ್ ಎ ರಜಿನಿ


# ಗಣಪತಿ ಶ್ರೀಗಳ ಶ್ರೀಮದ್ಭಗವದ್ಗೀತಾ ಪಾರಾಯಣ



**ಮೈಸೂರು:** ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿಯವರ ಅಮೆರಿಕದ 50 ವರ್ಷಗಳ ಸುವರ್ಣ ಆಧ್ಯಾತ್ಮಿಕ ಯಾತ್ರೆಯ ಸುಸಂದರ್ಭದಲ್ಲಿ ಬೃಹತ್ ಸಾಮೂಹಿಕ ಸಂಪೂರ್ಣ ಶ್ರೀಮದ್ಭಗವದ್ಗೀತಾ ಪಾರಾಯಣ ಮಹೋತ್ಸವ ಶ್ರದ್ಧಾ-ಭಕ್ತಿಗಳಿಂದ ನೆರವೇರಿಸಿದರು.

ಅಮೆರಿಕದ ಟೆಕ್ಸಾಸ್ ರಾಜ್ಯದ ಡಲ್ಲಾಸ್‌ನಲ್ಲಿರುವ 'ಕ್ಯೂಟೆಕ್ಸ್' ಆಡಿಟೋರಿಯಂನಲ್ಲಿ ಜರುಗಿದ ಈ ಐತಿಹಾಸಿಕ ಸಮಾವೇಶದಲ್ಲಿ ವಿಶ್ವದ 18 ದೇಶಗಳ ಸಾವಿರಾರು ಭಕ್ತರು, ವಿದ್ಯಾರ್ಥಿಗಳು ಹಾಗೂ ಸ್ಥಳೀಯ ಗಣ್ಯರು ಭಾಗವಹಿಸಿದ್ದರು. ವಿಶ್ವಕಲ್ಯಾಣ ಮತ್ತು ಜಾಗತಿಕ ಶಾಂತಿಯ ಮಹತ್ ಸಂಕಲ್ಪ ದೊಂದಿಗೆ ಈ ಭಗವದ್ಗೀತಾ ಪಾರಾಯಣವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ಭಾಗವಾಗಿ ಶ್ರೀ ಸ್ವಾಮೀಜಿಯವರು "ವಿಶ್ವ ಶಾಂತಿಗಾಗಿ ಪ್ರಾರ್ಥನೆ" ಯನ್ನು ನೆರವೇರಿಸಿ, ಭಾಗವಹಿಸಿದ್ದ ಎಲ್ಲಾ ಭಕ್ತರಿಗೂ ಭಗವಾನ್ ಶ್ರೀ ಕೃಷ್ಣನ ಅನುಗ್ರಹ ಸಿಗಲಿ ಎಂದು ಆಶೀರ್ವದಿಸಿದರು.

# ನಾಲ್ವಡಿ ಕೊಡುಗೆ ಇಂದು ವಿಶ್ವ ವಿಖ್ಯಾತ



**ಮೈಸೂರು:** ನಾಲ್ವಡಿ ಕೃಷ್ಣರಾಜ ಒಡೆಯರು ಕೊಡುಗೆಯಾಗಿ ನೀಡಿದ ಮೈಸೂರಿನ ಮೈಸೂರು ಪಾಕ ಇಂದು ವಿಶ್ವದ ಖ್ಯಾತಿಯನ್ನು ಗಳಿಸಿದೆ ಎಂದು ಹೋಟೆಲ್ ಮಾಲೀಕರ ಸಂಗದ ಅಧ್ಯಕ್ಷ ಸಿ.ನಾರಾಯಣಗೌಡ ಅಭಿಪ್ರಾಯ ಪಟ್ಟರು.

ನಗರದ ಅಪೂರ್ವ ಸ್ನೇಹ ಬಳಗದ ವತಿ ಯಿಂದ ಆಷಾಢ ಮಾಸದ ಅಂಗವಾಗಿ ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ದೇವಸ್ಥಾನದ ಮುಂಭಾಗ ದೇಶ ವಿದೇಶದಿಂದ ಆಗಮಿಸಿದ ಭಕ್ತಾದಿಗಳಿಗೆ ಮೈಸೂರು ಪಾಕ್ ವಿತರಿಸಿ ಮಾತನಾಡಿದರು. ಸಂತೋ ಷದ ಸಂಕೇತ ಸಿಹಿ. ಆದರೆ, ಇದು ಕೆಲವರು ಆರೋಗ್ಯಕ್ಕೆ ಹಾನಿಕರ ಎಂದು ಭಾವಿಸಲಾಗುತ್ತಿದೆ. ಮೈಸೂರು ಪಾಕ್ ತಿಂದರೆ ಆರೋಗ್ಯ ವೃದ್ಧಿಸುತ್ತದೆ. ಕಡ್ಲೆ ಹಿಟ್ಟು ಚರ್ಮದ ಕಾಯಿಲೆ ಗುಣಪಡಿಸುತ್ತದೆ. ಸಕ್ಕರೆಯಲ್ಲಿ ಆಮ್ಲಜನಕ ಹೆಚ್ಚಾಗಿದ್ದು, ದೇಹದ ಶಕ್ತಿಯನ್ನು ಹೆಚ್ಚಿಸುತ್ತದೆ. ತುಪ್ಪದ ಅಂಶದಿಂದ ಮೂಳೆ ಸವೆತ ನಿವಾರಣೆಯಾಗುತ್ತದೆ. ಅದಕ್ಕಾ ಗಿಯೇ ಚಿಕ್ಕ ಮಕ್ಕಳಿಂದ ಹಿರಿಯ ನಾಗರಿಕರವರೆಗೆ ಮೈಸೂರು ಪಾಕ್ ತಿನ್ನಲು ಅಚ್ಚುಮೆಚ್ಚು ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆಯಾಗಿದೆ ಎಂದರು. ಪ್ರವಾಸೋದ್ಯಮ ಇಲಾಖೆ ಮೈಸೂರು ಪಾಕ್ ತಯಾರಿಸುವ ಅಡುಗೆ ಉದ್ಯಮವನ್ನು ಸೃಷ್ಟಿಸಲು ಮುಂದಾಗಬೇಕು ಎಂದು ಸಲಹೆ ನೀಡಿದರು. ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್ ಮಾತನಾಡಿದರು. ಜೀವದಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಜಿ.ರಾಘವೇಂದ್ರ, ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್, ಮಿರ್ಲೆ ಪನೀಷ ಇನ್ನಿತರರು ಹಾಜರಿದ್ದರು.

## ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷ ಪ್ರೊ.ಶಿವಕುಮಾರ್

# ಯುವನಿಧಿ ನಿರುದ್ಯೋಗಿ ಯುವಜನತೆಗೆ ಆಸರೆ

ಮೈಸೂರು: ನಮ್ಮ ರಾಜ್ಯ ಸರ್ಕಾರವು ಬಡವರ, ಶ್ರಮಿಕರ ಮತ್ತು ಮಧ್ಯಮ ವರ್ಗದ ಜನರ ಆರ್ಥಿಕ ಸ್ವಾವಲಂಬನೆಗಾಗಿ ಐದು ಮಹತ್ವಾಕಾಂಕ್ಷೆಯ ಯೋಜನೆಗಳನ್ನು ಜಾರಿಗೆ ತಂದಿದೆ. ಪ್ರತಿಯೊಂದು ಕುಟುಂಬದ ದೈನಂದಿನ ಜೀವನೋಪಾಯಕ್ಕೆ ನೆರವಾಗುವುದು ಈ ಯೋಜನೆಗಳ ಮುಖ್ಯ ಉದ್ದೇಶವಾಗಿದ್ದು, ನಿರುದ್ಯೋಗಿ ಯುವಜನತೆಗೆ ಆಸರೆಯಾಗಿರುವುದು ಸರ್ಕಾರದ 5 ನೇ ಗ್ಯಾರಂಟಿ ಯುವನಿಧಿ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷ ಪ್ರೊ.ಶಿವಕುಮಾರ್ ಹೇಳಿದರು.



ಸಿದ್ಧಾರ್ಥ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಪಂಚ ಗ್ಯಾರಂಟಿ ಯೋಜನೆಯಲ್ಲಿ ಒಂದಾದ ಯುವನಿಧಿ ಕಾರ್ಯಕ್ರಮದ ಪ್ರಚಾರ ಮತ್ತು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ನಮ್ಮ ದೇಶದ ನಿಜವಾದ ಶಕ್ತಿ ಎಂದರೆ ಅದು ನಮ್ಮ ಯುವ ಜನತೆ. ಆದರೆ, ಇಂದಿನ ದಿನಗಳಲ್ಲಿ ಪದವಿ ಮುಗಿಸಿದ ತಕ್ಷಣವೇ ಪ್ರತಿಯೊಬ್ಬರಿಗೂ ಉದ್ಯೋಗ ಸಿಗುವುದು ಸುಲಭವಲ್ಲ. ಶಿಕ್ಷಣ ಮುಗಿದು ಕೆಲಸ ಸಿಗುವವರೆಗಿನ ಈ ಮಧ್ಯಂತರ ಅವಧಿಯಲ್ಲಿ ಯುವಕರು ಆರ್ಥಿಕ ಸಂಕಷ್ಟ ಅನುಭವಿಸಬಾರದು ಮತ್ತು ಅವರಲ್ಲಿ ಆತ್ಮವಿಶ್ವಾಸ ಕುಗ್ಗಬಾರದು ಎಂಬ ಉದ್ದೇಶದಿಂದ ರಾಜ್ಯ ಸರ್ಕಾರವು ಈ ಯುವನಿಧಿ ಯೋಜನೆಯನ್ನು ಜಾರಿಗೆ ತಂದಿದ್ದು, ಯುವನಿಧಿ ಯೋಜನೆ ಪದವಿ ಹಾಗೂ ಡಿಪ್ಲೊಮಾ ಮುಗಿಸಿ ಕೆಲಸದ ಹುಡುಕಾಟದಲ್ಲಿರುವ ನಿರುದ್ಯೋಗಿ ಯುವಕ-ಯುವತಿಯರಿಗೆ ಮಾಸಿಕ ಭತ್ಯೆ ನೀಡಿ ಅವರ ಭವಿಷ್ಯದ ದಾರಿಗೆ ಆಸರೆಯಾಗಿದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಉಪಾಧ್ಯಕ್ಷರಾದ ಹುಣಸೂರು ಬಸವಣ್ಣ ಮಾತನಾಡಿ ಯುವನಿಧಿ ಯೋಜನೆಯಡಿಯಲ್ಲಿ ಪದವಿ ಪೂರ್ಣಗೊಳಿಸಿ ನಿರುದ್ಯೋಗಿಗಳಾಗಿರುವ ಯುವಕ-ಯುವತಿಯರಿಗೆ ಪ್ರತಿ ತಿಂಗಳು ?3,000 ಹಾಗೂ ಡಿಪ್ಲೊಮಾ ಪೂರ್ಣಗೊಳಿಸಿದವರಿಗೆ ಪ್ರತಿ ತಿಂಗಳು ?1,500 ನಿರುದ್ಯೋಗ ಭತ್ಯೆಯನ್ನು ನೀಡಲಾಗುತ್ತದೆ. ಈ ಸಹಾಯಧನವನ್ನು ಉದ್ಯೋಗ ಸಿಗುವವರೆಗೆ ಅಥವಾ ಗರಿಷ್ಠ 2 ವರ್ಷಗಳ ಅವಧಿಯವರೆಗೆ ನೇರವಾಗಿ ಅವರ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುತ್ತದೆ ಎಂದು ಹೇಳಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯ ಸಾ.ಮಾ.ಯೋಗೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕ ಕೆ.ಡಿ.ಮಂಜುನಾಥ, ಸಿದ್ಧಾರ್ಥ ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ನರಸಿಂಹಮೂರ್ತಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಸದಸ್ಯರಾದ ಅಬ್ದುಲ್ ಖಾದರ್, ಲಲಿತಾ, ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ವಿರೇಂದ್ರ ಉರುಫ್, ನವೀನ್ ಉಪಸ್ಥಿತರಿದ್ದರು.

## ಹಿರಿಯ ನಾಗರಿಕರಿಗೆ ಕಾನೂನು ಅರಿವು ಕಾರ್ಯಕ್ರಮ, ವಿವಿಧ ಸಹಾಯಕ ಸಲಕರಣೆಗಳ ವಿತರಣೆ

# ಹಿರಿಯರ ಗೌರವಯುತ ಬದುಕಿಗೆ ಕಾನೂನು ರಕ್ಷಣೆ ಅಗತ್ಯ: ನ್ಯಾ. ಆರ್. ಗುರುರಾಜನ್






**ಮಂಡ್ಯ:** ಉದ್ಯೋಗದಿಂದ ನಿವೃತ್ತಿಯಾದ ನಂತರವೂ ಹಿರಿಯ ನಾಗರಿಕರ ಹಕ್ಕುಗಳ ರಕ್ಷಣೆ ಹಾಗೂ ಅವರ ಮೇಲಿನ ದೌರ್ಜನ್ಯ ತಡೆಗಟ್ಟುವ ಉದ್ದೇಶದಿಂದ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ (ನಾಲ್ಸಾ) ಅಧ್ಯಕ್ಷರಾಗಿ ಸೇವೆಯನ್ನು ಮುಂದುವರಿಸಿ ನ್ಯಾಯ ಒದಗಿಸುವ ಕಾರ್ಯದಲ್ಲಿ ತೊಡಗಿದ್ದೇನೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳು ಹಾಗೂ ನಾಲ್ಸಾ (ಹಿರಿಯ ನಾಗರಿಕರಿಗೆ ಕಾನೂನು ಸೇವೆಗಳು) ಯೋಜನೆಯ ಅಧ್ಯಕ್ಷ ನ್ಯಾಯಮೂರ್ತಿ ಆರ್. ಗುರುರಾಜನ್ ರವರು ತಿಳಿಸಿದರು.

ಮಂಡ್ಯ ನಗರದ ಜಿಲ್ಲಾ ಪಂಚಾಯತ್ ಕಾವೇರಿ ಭವನದಲ್ಲಿ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಕೀಲರ ಸಂಘ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಹಿರಿಯ ನಾಗರಿಕರಿಗೆ ಕಾನೂನು ಅರಿವು ಕಾರ್ಯಕ್ರಮ, ವಿವಿಧ ಸಹಾಯಕ ಸಲಕರಣೆಗಳ ವಿತರಣೆ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಿರಿಯ ನಾಗರಿಕರು ಸಮಾಜದ ಅಮೂಲ್ಯ ಅನುಭವದ ಸಂಪತ್ತಾಗಿದ್ದು, ಅವರ ಜೀವನವು ಗೌರವಯುತ ಹಾಗೂ ಸುರಕ್ಷಿತವಾಗಿರಬೇಕು. ಅವರ ಮೇಲೆ ನಡೆಯುವ ಯಾವುದೇ ರೀತಿಯ ದೌರ್ಜನ್ಯ, ನಿರ್ಲಕ್ಷ್ಯ ಅಥವಾ ಹಕ್ಕುಗಳ ಉಲ್ಲಂಘನೆಗೆ ಕಾನೂನು ಅವಕಾಶ ನೀಡುವುದಿಲ್ಲ. ಹಿರಿಯರು ತಮ್ಮ ಹಕ್ಕುಗಳ ಬಗ್ಗೆ ಅರಿವು ಹೊಂದಿ, ಅಗತ್ಯವಿದ್ದಲ್ಲಿ ಕಾನೂನು ಸೇವೆಗಳ ನೆರವನ್ನು ಪಡೆಯಬೇಕು ಎಂದು ಅವರು ತಿಳಿಸಿದರು.

ಸರ್ಕಾರದಿಂದ ಹಿರಿಯ ನಾಗರಿಕರಿಗೆ ನೀಡಲಾಗುತ್ತಿರುವ ವಾರ್ಷಿಕ ಪಿಂಚಣಿ ಮೊತ್ತವನ್ನು ?32 ಸಾವಿರದಿಂದ ಹೆಚ್ಚಿಸುವಂತೆ ಸರ್ಕಾರಕ್ಕೆ ಮನವಿ ಮಾಡಲಾಗಿದೆ. ಈ ಕುರಿತು ಸರ್ಕಾರವೂ ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಪಿಂಚಣಿ ಮೊತ್ತ ಹೆಚ್ಚಿಸುವ ಕುರಿತು ಪರಿಗಣಿಸುವ ಭರವಸೆ ನೀಡಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರಿಗೆ ವಿವಿಧ ಸಹಾಯಕ ಸಲಕರಣೆಗಳನ್ನು ವಿತರಿಸಲಾಯಿತು.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಸಿ. ಚಂದ್ರಶೇಖರ್ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಹಿರಿಯ ನಾಗರಿಕರ ಕಲ್ಯಾಣಕ್ಕಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿವಿಧ ಜನಪರ ಯೋಜನೆಗಳನ್ನು ಜಾರಿಗೊಳಿಸಿದ್ದು, ಪ್ರತಿಯೊಬ್ಬ ಅರ್ಹ ಹಿರಿಯ ನಾಗರಿಕರು ಅವುಗಳ ಬಗ್ಗೆ ಮಾಹಿತಿ ಪಡೆದು ಸದುಪಯೋಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಹಿರಿಯ ನಾಗರಿಕರು ನಿಯಮಿತ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವುದರ ಜೊತೆಗೆ ದೈನಂದಿನ ವ್ಯಾಯಾಮ, ಸಮತೋಲಿತ ಆಹಾರ ಸೇವನೆ ಹಾಗೂ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಮೂಲಕ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಹಿರಿಯರು ಕುಟುಂಬ ಹಾಗೂ ಸಮಾಜದ ಅಮೂಲ್ಯ ಆಸ್ತಿಯಾಗಿದ್ದು, ಅವರ ಜೀವನಾನುಭವ, ಜ್ಞಾನ ಮತ್ತು ಮೌಲ್ಯಗಳು ಮುಂದಿನ ಪೀಳಿಗೆಗೆ ದಾರಿದೀಪವಾಗಿವೆ. ಆದ್ದರಿಂದ ಹಿರಿಯ ನಾಗರಿಕರನ್ನು ಗೌರವದಿಂದ ಕಾಣುವುದು, ಅವರ ಅಭಿಪ್ರಾಯಗಳಿಗೆ ಮನ್ನಣೆ ನೀಡುವುದು ಮತ್ತು ಅವರ ಸುಖ–ಸಮೃದ್ಧಿಗೆ ಪ್ರತಿಯೊಬ್ಬರೂ ಕೈಜೋಡಿಸುವುದು ನಮ್ಮೆಲ್ಲರ ಸಾಮಾಜಿಕ ಹಾಗೂ ನೈತಿಕ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಹಿರಿಯ ನಾಗರಿಕರ ಹಕ್ಕುಗಳನ್ನು ರಕ್ಷಿಸುವುದು ಹಾಗೂ ಅವರಿಗೆ ಗೌರವಯುತ ಜೀವನವನ್ನು ಕಲ್ಪಿಸುವ ನಿಟ್ಟಿನಲ್ಲಿ ಸಮಾಜದ ಪ್ರತಿಯೊಬ್ಬರೂ ಜಾಗೃತಿಯಿಂದ ಕಾರ್ಯನಿರ್ವಹಿಸಬೇಕು. ಕುಟುಂಬದಲ್ಲಿ ಹಿರಿಯರಿಗೆ ಪ್ರೀತಿ, ಕಾಳಜಿ ಮತ್ತು ಸುರಕ್ಷಿತ ವಾತಾವರಣ ಒದಗಿಸಿದಾಗ ಮಾತ್ರ ಸದೃಢ ಹಾಗೂ ಮೌಲ್ಯಾಧಾರಿತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಅವರು ತಿಳಿಸಿದರು.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ನ್ಯಾಯಾಧೀಶರಾದ ಹೆಚ್. ಶಶಿಧರ ಶೆಟ್ಟಿ ರವರು ಮಾತನಾಡಿ ಹಿರಿಯ ನಾಗರಿಕರಿಗೆ ಕಾನೂನಿನಡಿ ದೊರೆಯಬೇಕಾದ ಎಲ್ಲಾ ಸೌಲಭ್ಯಗಳು ಮತ್ತು ಸಮಾಜದಲ್ಲಿ ಅವರಿಗೆ ಸಲ್ಲಬೇಕಾದ ಗೌರವವನ್ನು ಖಾತ್ರಿಪಡಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣಕ್ಕೆ ಸಂಬಂಧಿಸಿದಂತೆ ದಾಖಲಾದ ಒಟ್ಟು 183 ಪ್ರಕರಣಗಳ ಪೈಕಿ 160 ಪ್ರಕರಣಗಳನ್ನು ಯಶಸ್ವಿಯಾಗಿ ಇತ್ಯರ್ಥಗೊಳಿಸಲಾಗಿದ್ದು, ಉಳಿದ 23 ಪ್ರಕರಣಗಳ ವಿಚಾರಣೆ ಪ್ರಗತಿಯಲ್ಲಿದೆ ಎಂದು ತಿಳಿಸಿದರು.

ಹಿರಿಯ ನಾಗರಿಕರ ಹಕ್ಕುಗಳ ರಕ್ಷಣೆ, ಅವರ ಸಮಸ್ಯೆಗಳಿಗೆ ತ್ವರಿತ ಪರಿಹಾರ ಕಲ್ಪಿಸುವುದು ಹಾಗೂ ಕಾನೂನುಬದ್ಧ ಸೌಲಭ್ಯಗಳು ಸಮಯಕ್ಕೆ ಸರಿಯಾಗಿ ದೊರೆಯುವಂತೆ ನ್ಯಾಯಾಂಗ ಮತ್ತು ಕಾನೂನು ಸೇವಾ ಸಂಸ್ಥೆಗಳು ನಿರಂತರವಾಗಿ ಕಾರ್ಯನಿರ್ವಹಿಸುತ್ತಿವೆ. ಕುಟುಂಬ ಸದಸ್ಯರು ಹಿರಿಯರನ್ನು ಗೌರವ ಮತ್ತು ಪ್ರೀತಿಯಿಂದ ಕಾಣಬೇಕು. ಅವರ ಸುರಕ್ಷತೆ, ಆರೋಗ್ಯ, ಸ್ವಾಭಿಮಾನ ಹಾಗೂ ಮಾನವೀಯ ಮೌಲ್ಯಗಳ ಸಂರಕ್ಷಣೆಗೆ ಪ್ರತಿಯೊಬ್ಬರೂ ಆದ್ಯತೆ ನೀಡಬೇಕೆಂದು ಅವರು ಕರೆ ನೀಡಿದರು.

ರಾಜ್ಯದಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗೆ ಸಂಬಂಧಿಸಿದ ಪೋಕ್ಸೊ (POCSO) ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಮಕ್ಕಳಿಗೆ ಉತ್ತಮ ಸಂಸ್ಕಾರ, ನೈತಿಕ ಮೌಲ್ಯಗಳು ಮತ್ತು ಸಾಮಾಜಿಕ ಹೊಣೆಗಾರಿಕೆಯ ಅರಿವು ಮೂಡಿಸಿ ಅವರನ್ನು ಸನ್ಮಾರ್ಗದಲ್ಲಿ ಬೆಳೆಸುವುದು ಪೋಷಕರ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು.

ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಬಳಕೆಯ ಮೇಲೆ ಪೋಷಕರು ಅಗತ್ಯ ನಿಗಾ ವಹಿಸುವುದರೊಂದಿಗೆ ಮಕ್ಕಳೊಂದಿಗೆ ನಿರಂತರ ಸಂವಾದ ನಡೆಸಬೇಕು. ಉತ್ತಮ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರವನ್ನು ನೀಡಿದಾಗ ಮಾತ್ರ ಆರೋಗ್ಯಕರ, ಸುರಕ್ಷಿತ ಮತ್ತು ಮೌಲ್ಯಾಧಾರಿತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದು ಅವರು ಅಭಿಪ್ರಾಯಪಟ್ಟರು.

ಕುಟುಂಬ ವ್ಯವಸ್ಥೆಯನ್ನು ಸದೃಢಗೊಳಿಸುವ ಮೂಲಕ ಹಿರಿಯರಿಗೆ ಗೌರವಯುತ ಬದುಕು ಕಲ್ಪಿಸುವುದು ಪ್ರತಿಯೊಬ್ಬರ ಸಾಮಾಜಿಕ ಹಾಗೂ ನೈತಿಕ ಕರ್ತವ್ಯವಾಗಿದೆ. ಹಿರಿಯರ ಆಶೀರ್ವಾದ, ಮಾರ್ಗದರ್ಶನ ಮತ್ತು ಜೀವನಾನುಭವವೇ ಸಮಾಜದ ಅಮೂಲ್ಯ ಸಂಪತ್ತಾಗಿದ್ದು, ಅವರನ್ನು ಗೌರವಿಸುವ ಸಂಸ್ಕೃತಿಯನ್ನು ಪ್ರತಿಯೊಬ್ಬರೂ ಬೆಳೆಸಿಕೊಳ್ಳಬೇಕು ಎಂದರು.


ಜಿಲ್ಲಾಧಿಕಾರಿಗಳಾದ ಡಾ. ಕುಮಾರ ರವರು ಮಾತನಾಡಿ ಆಧುನಿಕ ಸಮಾಜದಲ್ಲಿ ಬಾಂಧವ್ಯ, ಸ್ನೇಹ ಹಾಗೂ ಮಮತೆಯಂತಹ ಮಾನವೀಯ ಮೌಲ್ಯಗಳು ಕ್ರಮೇಣ ಕ್ಷೀಣಿಸುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ತಂದೆ–ತಾಯಿಯರು ಹಾಗೂ ಹಿರಿಯ ನಾಗರಿಕರಿಗೆ ಸೂಕ್ತ ಗೌರವ, ಸ್ಥಾನಮಾನ ಮತ್ತು ಆರೈಕೆ ದೊರೆಯುವಂತೆ ಪ್ರತಿಯೊಬ್ಬ ಮಗುವೂ ಜವಾಬ್ದಾರಿಯಿಂದ ನಡೆದುಕೊಳ್ಳಬೇಕು. ಹಿರಿಯರು ಜೀವನದಲ್ಲಿ ಸಂಪಾದಿಸಿರುವ ಅಪಾರ ಜ್ಞಾನ, ಅನುಭವ ಹಾಗೂ ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ಧಾರೆ ಎರೆಯುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸಬೇಕು. ಅವರ ಅನುಭವದ ಸಂಪತ್ತನ್ನು ಯುವಜನತೆ ಸದುಪಯೋಗಪಡಿಸಿಕೊಂಡಾಗ ಮಾತ್ರ ಕುಟುಂಬ ಹಾಗೂ ಸಮಾಜದ ನೆಲೆಬಲ ಮತ್ತಷ್ಟು ಗಟ್ಟಿಯಾಗಲಿದೆ ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಹಿರಿಯ ನಾಗರಿಕರ ಉಪೇಕ್ಷೆಯ ಮನೋಭಾವ ಹೆಚ್ಚಾಗುತ್ತಿರುವುದು ಮತ್ತು ಮಾನವೀಯ ಮೌಲ್ಯಗಳು ಕುಸಿಯುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ವಿದ್ಯಾವಂತರ ಸಂಖ್ಯೆ ಹೆಚ್ಚುತ್ತಿರುವುದರೊಂದಿಗೆ ವೃದ್ಧಾಶ್ರಮಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚುತ್ತಿರುವುದು ಸಮಾಜದ ಮೌಲ್ಯ ವ್ಯವಸ್ಥೆಗೆ ಸವಾಲಾಗಿ ಪರಿಣಮಿಸಿರುವುದು ವಿಷಾದನೀಯ ಬೆಳವಣಿಗೆಯಾಗಿದೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ವೇದಿಕೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಆನಂದ ಎಂ., ಉಪವಿಭಾಗಧಿಕಾರಿಗಳಾದ ಶಿವಮೂರ್ತಿ, ಶ್ರೀನಿವಾಸ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕೆ.ಸಿ. ಬೆಟ್ಟಸ್ವಾಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಗೀತಾಲಕ್ಷ್ಮಿ ಸಿ., ವಕೀಲರ ಸಂಘದ ಅಧ್ಯಕ್ಷರಾದ ಸತ್ಯಾನಂದ ಟಿ.ಎಸ್. ರವರು ಉಪಸ್ಥಿತರಿದ್ದರು.

# ಸೇವಾನಿಕೇತನ ಸಂಸ್ಥೆಯಿಂದ ಗುರು ವಂದನಾ ಕಾರ್ಯಕ್ರಮ



**ಬೆಂಗಳೂರು:** ಹನುಮಂತನಗರದ ಮೌಂಟ್ ಜಾಯ್ ರಸ್ತೆಯಲ್ಲಿರುವ ಸೇವಾನಿಕೇತನ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದ್ದ ಗುರು ವಂದನಾ ಕಾರ್ಯಕ್ರಮವು ಬೆಂಗಳೂರಿನ ತ್ಯಾಗರಾಜನಗರದಲ್ಲಿರುವ ಶ್ರೀ ಪಾದ ಶ್ರೀ ವಲ್ಲಭ ಭವನದಲ್ಲಿ ಆಗಸ್ಟ್ 2ರಂದು ಭಾನುವಾರ ಅತ್ಯಂತ ವೈಭವ ಹಾಗೂ ಶ್ರದ್ಧಾಭಕ್ತಿಯಿಂದ ನೆರವೇರಿತು.

ಕಾರ್ಯಕ್ರಮವು ಬೆಳಿಗ್ಗೆ ಸಹಸ್ರ ಮೋದಕ ಹೋಮ, ಮಹಾಪೂರ್ಣಾಹುತಿ ಹಾಗೂ ವಿದ್ಯಾರ್ಥಿಗಳ ವೇದಘೋಷದೊಂದಿಗೆ ಆರಂಭವಾಯಿತು. ಹೊಳೆ ನರಸೀಪುರದ ಶ್ರೀ ಶ್ರೀ ಪ್ರಕಾಶಾನಂದೇಂದ್ರ ಸರಸ್ವತಿ ಸ್ವಾಮೀಜಿಗಳಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ಸಭಾ ಕಾರ್ಯಕ್ರಮದಲ್ಲಿ ಶ್ರೀ ಸ್ವಾಮೀಜಿಗಳು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು.


ಸಂಸ್ಥೆಯ ವೇದ ಗುರುಗಳಾದ ವೇದ ವೇದಾಂತ ವಿದ್ವಾನ್ ಶ್ರೀ ಪ್ರೀತಮ್ ಶರ್ಮ ಅವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ನಡೆಯಿತು. ಮುಖ್ಯ ಅತಿಥಿಗಳಾಗಿ ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಹಿರಿಯ ವೇದ ವಿದ್ವಾಂಸ ವೇದಬ್ರಹ್ಮ ಶ್ರೀ ಧಾಳಿ ಲಕ್ಷ್ಮೀನರಸಿಂಹ ಭಟ್ ಹಾಗೂ ಖ್ಯಾತ ಆಧ್ಯಾತ್ಮ ಚಿಂತಕ ಮತ್ತು ವೇದ ಶಾಸ್ತ್ರ ಪ್ರವೀಣ ಡಾ. ಎಂ. ವಸಂತ ಭಟ್ ಭಾಗವಹಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಶ್ರೀ ಪ್ರೀತಮ್ ಶರ್ಮ ಅವರು ಅಧ್ಯಕ್ಷೀಯ ಭಾಷಣ ಮಾಡಿದರು.

1995ರಲ್ಲಿ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಆಶೀರ್ವಾದದೊಂದಿಗೆ ಸ್ಥಾಪನೆಯಾದ ಸೇವಾನಿಕೇತನ ಸಂಸ್ಥೆಯು ಕಳೆದ 30 ವರ್ಷಗಳಿಂದ ವೇದ ಶಿಕ್ಷಣ ಹಾಗೂ ಪ್ರಸಾರ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಸಂಸ್ಥೆಯು 2018ರಿಂದ ವಾರಾಂತ್ಯ ತರಗತಿಗಳ ಮೂಲಕ ಇದುವರೆಗೆ 450ಕ್ಕೂ ಹೆಚ್ಚು ವೇದಾಸಕ್ತರಿಗೆ ವೇದಾಧ್ಯಯನ ತರಬೇತಿ ನೀಡಿದೆ.

ಕಾರ್ಯಕ್ರಮದಲ್ಲಿ ಗಣ್ಯರು ಹಾಗೂ ಸಂಸ್ಥೆಯ ಹಿರಿಯರಿಗೆ ಶ್ರೀಗಳವರಿಂದ ಆಶೀರ್ವಾದ ಮತ್ತು ಸಂಸ್ಥೆಯ ಪರವಾಗಿ ಫಲ ಸಮರ್ಪಣೆ ಮಾಡಲಾಯಿತು. ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಗುರು ವಂದನಾ ವೇದ ವಿದ್ಯಾರ್ಥಿ ಸೇವಾ ಸಮಿತಿಯ ಸದಸ್ಯರನ್ನು ಗೌರವಿಸಿ ಸನ್ಮಾನಿಸಲಾಯಿತು. ಕುಮಾರಿ ಪ್ರಣವಿ ಆರ್. ಭಟ್ ಅವರ ವೀಣಾ ವಾದನ, ಶ್ರೀಮತಿ ಚೈತ್ರ ಶ್ರೀಕಾಂತ್ ಅವರ ಸುಶ್ರಾವ್ಯ ಗಾಯನ ಹಾಗೂ ಪ್ರಾರ್ಥನೆ ಕಾರ್ಯಕ್ರಮಕ್ಕೆ ಮೆರುಗು ತಂದವು. ಶ್ರೀಮತಿ ಪೂರ್ಣಿಮಾ ಶರ್ಮ, ಕುಮಾರಿ ಯಶಸ್ವಿನಿ ಹಾಗೂ ಶ್ರೀಮತಿ ಚೈತ್ರ ಶ್ರೀಕಾಂತ್ ಅವರ ಕಂಠಸಿರಿಯಲ್ಲಿ ಪುರಂದರ ದಾಸರ ಕೀರ್ತನೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

ಶ್ರೀ ಶ್ರೀ ಪ್ರಕಾಶಾನಂದೇಂದ್ರ ಸರಸ್ವತಿ ಸ್ವಾಮೀಜಿಗಳು ಎಲ್ಲಾ ಗುರು ಭಕ್ತರಿಗೆ ಫಲ ಮಂತ್ರಾಕ್ಷತೆ ನೀಡಿ ಆಶೀರ್ವದಿಸಿದರು. ಆನಂದ್ ರಾವ್ ಅವರು ವಂದನಾರ್ಪಣೆ ಮಾಡಿದರು. ಮಹಾಪ್ರಸಾದದೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯವಾಯಿತು.

# ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ; ಆ.4ರಿಂದ 7ರವರೆಗೆ ಅಭಿಪ್ರಾಯ ಸಂಗ್ರಹ





**ಮಂಡ್ಯ:** ರಾಜ್ಯದಲ್ಲಿನ ಜಿಲ್ಲಾ ಅಧ್ಯಕ್ಷರ ಆಯ್ಕೆಗಾಗಿ ಎಐಸಿಸಿ ಕಾರ್ಯದರ್ಶಿ ಸೈಮನ್ ಅಲೆಕ್ಸ್ ಅವರು ಮಂಡ್ಯ ಜಿಲ್ಲೆಯಲ್ಲಿ ಆ.4ರಿಂದ 7ರವರೆಗೆ ಅವರು ಸಂಘಟನೆ, ಸೃಜನ್ ಅಭಿಯಾನ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಎಂ.ದ್ಯಾವಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾಧ್ಯಕ್ಷ ಸ್ಥಾನಕ್ಕೆ ನಾನೂ ಆಕಾಂಕ್ಷಿಯಾಗಿದ್ದು, ಪಕ್ಷದ ಕಾರ್ಯಕರ್ತರು ತಮ್ಮ ಪರವಾಗಿ ಅಭಿಪ್ರಾಯಗಳನ್ನು ತಿಳಿಸುವಂತೆ ಮನವಿ ಮಾಡಿದರು.

ಎಐಸಿಸಿ ಕಾರ್ಯದರ್ಶಿ ಸೈಮನ್ ಅಲೆಕ್ಸ್ ಅವರ ಸಹಾಯಕರಾಗಿ ಕೆಪಿಸಿಸಿಯ ಪ್ರಧಾನ ಕಾರ್ಯದರ್ಶಿಗಳಾದ ಎಂ.ಲಕ್ಷ ?ಮಣ, ಮಂಜುಳಾ ನಾಯ್ಡು, ಗೋಪಿಕೃಷ್ಣ, ನರೇಂದ್ರ ಉಪಸ್ಥಿತರಿರುವರು. ಇವರ ತಂಡವು ಅಧ್ಯಕ್ಷ ಹುದ್ದೆಗೆ ಸಾಮಾನ್ಯ ವರ್ಗದಿಂದ 2, ಎಸ್ಸಿ, ಅಲ್ಪಸಂಖ್ಯಾತ, ಒಬಿಸಿ ಹಾಗೂ ಮಹಿಳೆ ವಿಭಾಗದಿಂದ ತಲಾ 1 ಸೇರಿ ಒಟ್ಟು ಆರು ಮಂದಿಯ ಹೆಸರಿನ್ನು ಎಐಸಿಸಿಗೆ ಶಿಫಾರಸ್ಸು ಮಾಡುವರು. ಈ ಸಂಬಂಧ ಗ್ರಾಮಗಳ ಬೂತ್ ಮಟ್ಟದಿಂದಲೂ ಕಾರ್ಯಕರ್ತರು ಗೌಪ್ಯ ಅಭಿಪ್ರಾಯ ಸಂಗ್ರಹ ಮಾಡುವರು ಎಂದರು.

ತಂಡವು ಆ.4ರಂದು ಮಂಡ್ಯ ನಗರದ ಬ್ರಾಹ್ಮಣ ಸಮುದಾಯ ಭವನದಲ್ಲಿ ಬೆಳಗ್ಗೆ 9.30ಕ್ಕೆ, ಮಂಡ್ಯ ಗ್ರಾಮಾಂತರ ಭಾಗದಲ್ಲಿ ಮಧ್ಯಾಹ್ನ 1.30ಕ್ಕೆ ಅಭಿಪ್ರಾಯ ಸಂಗ್ರಹಿಸುವರು. ಆ.5ರಂದು ಶ್ರೀರಂಗಪಟ್ಟಣ, 6ರಂದು ಬೆಳಗ್ಗೆ 10ಕ್ಕೆ ನಾಮಗಂಗಲ, ಮಧ್ಯಾಹ್ನ 2ಕ್ಕೆ ಮದ್ದೂರಿನ ಕೊಪ್ಪದಲ್ಲಿ, 7ರಂದು ಬೆಳಗ್ಗೆ 10ಕ್ಕೆ ಪಾಂಡವಪುರ, ಮಧ್ಯಾಹ್ನ 2ಕ್ಕೆ ಮೇಲುಕೋಟೆ ಗ್ರಾಮಾಂತರ ಭಾಗದಿಂದ ಅಭಿಪ್ರಾಯ ಸಂಗ್ರಹ ಮಾಡಲಿದ್ದಾರೆ ಎಂದು ಮಾಹಿತಿ ನೀಡಿದರು. ಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಹಲ್ಲೇಗೆರೆ ಶಿವರಾಂ, ನಾಗರಾಜು, ವರಲಕ್ಷ್ಮಿ ಪ್ರಶಾಂತ್ ಇತರರಿದ್ದರು.

# ಇಲಾಖಾ ವಿಚಾರಣೆಗಳನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಿ, ವರದಿ ಸಲ್ಲಿಸಿ: ಸಿಇಒ ನಂದಿನಿ



**ಮಂಡ್ಯ:** ಜಿಲ್ಲಾ ಪಂಚಾಯಿತಿ ವ್ಯಾಪ್ತಿಯ ವಿವಿಧ ಶಿಸ್ತು ಪ್ರಕರಣಗಳಿಗೆ ಸಂಬಂಧಿಸಿದಂತೆ ನಡೆಸಲಾಗುತ್ತಿರುವ ಇಲಾಖಾ ವಿಚಾರಣೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕಾ ಅಧಿಕಾರಿಗಳಾದ ನಂದಿನಿ ಕೆ.ಆರ್. ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು.

ಪ್ರತಿಯೊಂದು ಪ್ರಕರಣದಲ್ಲೂ ಸತ್ಯಾಂಶವನ್ನು ಪತ್ತೆಹಚ್ಚುವ ಉದ್ದೇಶದಿಂದ ನ್ಯಾಯಸಮ್ಮತ ಹಾಗೂ ನಿಷ್ಪಕ್ಷಪಾತ ವಿಚಾರಣೆ ನಡೆಸುವಂತೆ ವಿಚಾರಣಾಧಿಕಾರಿಗಳಿಗೆ ಸೂಚಿಸಿದರು. ವಿಚಾರಣೆಗಳು ಅನಗತ್ಯವಾಗಿ ವಿಳಂಬವಾಗುವುದರಿಂದ ಆಡಳಿತದ ದೈನಂದಿನ ಕಾರ್ಯನಿರ್ವಹಣೆಗೆ ತೊಂದರೆಯಾಗುತ್ತದೆ. ಆದ್ದರಿಂದ, ನಿಗದಿತ ಅವಧಿಯೊಳಗೆ ಯಾವುದೇ ವಿಳಂಬಕ್ಕೆ ಆಸ್ಪದವಿಲ್ಲದಂತೆ ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಸೂಚಿಸಿದರು.

ಸರ್ಕಾರದ ನಿಯಮಾನುಸಾರ ಇಲಾಖಾ ವಿಚಾರಣೆಗಳನ್ನು ಒಂಬತ್ತು ತಿಂಗಳ ಅವಧಿಯೊಳಗೆ ಪೂರ್ಣಗೊಳಿಸಲು ಅವಕಾಶವಿರುವುದರಿಂದ, ಎಲ್ಲಾ ವಿಚಾರಣಾಧಿಕಾರಿಗಳು ಆ ಕಾಲಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸಿ ಅಂತಿಮ ವರದಿಯನ್ನು ಸಲ್ಲಿಸಬೇಕು ಎಂದು ನಿರ್ದೇಶನ ನೀಡಿದರು. ಹಲವು ಪ್ರಕರಣಗಳ ಮಾಹಿತಿಯನ್ನು ಲೋಕಾಯುಕ್ತ ಹಾಗೂ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಬೇಕಿರುವುದರಿಂದ, ಕಾಲಮಿತಿಯನ್ನು ಗಮನದಲ್ಲಿಟ್ಟುಕೊಂಡು ವಿಚಾರಣೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ವಿಚಾರಣೆಯ ವೇಳೆ ದೂರುದಾರರ ಆರೋಪಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಸಮರ್ಥನೆ ಎರಡನ್ನೂ ಸಮಗ್ರವಾಗಿ ಪರಿಶೀಲಿಸಿ ನ್ಯಾಯೋಚಿತ ವರದಿ ಸಲ್ಲಿಸಬೇಕು ಎಂದು ಹೇಳಿದರು. ವಿಚಾರಣಾಧಿಕಾರಿಗಳ ವರ್ಗಾವಣೆ ಯಾದಲ್ಲಿ ಹೊಸದಾಗಿ ನೇಮಕವಾಗುವ ವಿಚಾರಣಾಧಿಕಾರಿಗಳು ಪ್ರಕರಣದ ಸಂಪೂರ್ಣ ದಾಖಲೆಗಳನ್ನು ಪರಿಶೀಲಿಸಿ, ಅಗತ್ಯವಿದ್ದಲ್ಲಿ ಆರಂಭದಿಂದಲೇ ವಿಚಾರಣೆ ನಡೆಸಿ ಕಾನೂನುಬದ್ಧವಾಗಿ ಪ್ರಕ್ರಿಯೆಯನ್ನು ಮುಂದುವರಿಸಬೇಕು ಎಂದು ತಿಳಿಸಿದರು.

ಗಂಭೀರ ಸ್ವರೂಪದ (Serious Offence) ಪ್ರಕರಣಗಳಿಗೆ ಮೊದಲ ಆದ್ಯತೆ ನೀಡಿ, ಅವುಗಳ ವಿಚಾರಣೆಯನ್ನು ಶೀಘ್ರವಾಗಿ ಪೂರ್ಣಗೊಳಿಸಿ ವರದಿ ಸಲ್ಲಿಸಬೇಕು. ಪ್ರತಿಯೊಬ್ಬ ವಿಚಾರಣಾಧಿಕಾರಿಗೆ ಪ್ರಕರಣವಾರು ಗಡುವಿನ ದಿನಾಂಕ ನಿಗದಿಪಡಿಸಲಾಗಿದ್ದು, ನಿಗದಿತ ದಿನಾಂಕದೊಳಗೆ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ವಿಚಾರಣೆಗೆ ಅಗತ್ಯವಿರುವ ಎಲ್ಲಾ ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಇಲಾಖೆಗಳು ವಿಳಂಬವಿಲ್ಲದೆ ವಿಚಾರಣಾಧಿಕಾರಿಗಳಿಗೆ ಒದಗಿಸಬೇಕು. ವಿಚಾರಣೆಗೆ ನಿಗದಿಪಡಿಸಿದ ದಿನಾಂಕದಲ್ಲಿ ಸಂಬಂಧಪಟ್ಟವರು ಖುದ್ದಾಗಿ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ವಿಡಿಯೋ ಸಂವಾದದ ಮೂಲಕ ವಿಚಾರಣೆ ನಡೆಸಿ ವರದಿ ಪಡೆಯಬಹುದಾಗಿದೆ ಎಂದು ತಿಳಿಸಿದರು.

ಈಗಾಗಲೇ ವಿಳಂಬವಾಗಿರುವ ಪ್ರಕರಣಗಳ ಕುರಿತು ಸಂಬಂಧಪಟ್ಟ ವಿಚಾರಣಾಧಿಕಾರಿಗಳು ವಿಳಂಬಕ್ಕೆ ಕಾರಣವನ್ನು ಲಿಖಿತವಾಗಿ ಸಲ್ಲಿಸುವುದರೊಂದಿಗೆ ಅಂತಿಮ ವರದಿ ಸಲ್ಲಿಸುವ ದಿನಾಂಕವನ್ನು ತಿಳಿಸುವಂತೆ ಸೂಚಿಸಿದರು. ಸಭೆಯಲ್ಲಿ ಜಿ.ಪಂ. ಉಪಕಾರ್ಯದರ್ಶಿ(ಆಡಳಿತ)ಶಿವಲಿಂಗಯ್ಯ, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸ್ ನಾಯಕ್, ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕುಮಟ್ಟದ ವಿಚಾರಣಾಧಿಕಾರಿಗಳು ಮತ್ತು ಮಂಡನಾಧಿಕಾರಿಗಳು ಉಪಸ್ಥಿತರಿದ್ದರು

# "ಭಾರತ ಜೋಡೋ ಯುವ ಸಂಘ" ನೋಂದಣಿ ಆರಂಭ: ಪ್ರತಿ ಸಂಘಕ್ಕೆ 10 ಲಕ್ಷ ಅನುದಾನ



**ಹನೂರು :** ಯುವಜನರಲ್ಲಿ ಕ್ರೀಡೆ, ಸಂಸ್ಕೃತಿ, ವೈಜ್ಞಾನಿಕ ಮನೋಭಾವ ಹಾಗೂ ಸಾಮಾಜಿಕ ಸಾಮರಸ್ಯವನ್ನು ಉತ್ತೇಜಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೆ ತಂದಿರುವ "ಭಾರತ ಜೋಡೋ ಯುವ ಸಂಘ" ಯೋಜನೆಯಡಿ ಹನೂರು ಪಟ್ಟಣ ಪಂಚಾಯತಿ ವ್ಯಾಪ್ತಿಯ ಯುವ ಸಂಘಟನೆಗಳ ನೋಂದಣಿ ಪ್ರಕ್ರಿಯೆ ಆ 6 ರಿಂದ ಆರಂಭವಾಗಲಿದೆ ಎಂದು ಮುಖ್ಯಾಧಿಕಾರಿ ರೇಖಾ ತಿಳಿಸಿದರು.

ಯೋಜನೆಯಡಿ ನೋಂದಣಿ ಯಾಗುವ ಪ್ರತಿ ಯುವ ಸಂಘಕ್ಕೆ ವರ್ಷಕ್ಕೆ 10 ಲಕ್ಷ ರೂ. ಧನಸಹಾಯ ನೀಡಲಾಗುತ್ತದೆ.

ಹನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಅರ್ಹ ಯುವಕ–ಯುವತಿಯರ ಸಂಘಟನೆಗಳು ಪಟ್ಟಣ ಪಂಚಾಯಿತಿ ಕಚೇರಿಯಲ್ಲಿ ತಮ್ಮ ಸಂಘವನ್ನು ನೋಂದಾಯಿಸಿಕೊಳ್ಳಬಹುದು.

**ಅರ್ಹತೆ:** ಪ್ರತಿ ಸಂಘದಲ್ಲಿ 16 ರಿಂದ 35 ವರ್ಷದೊಳಗಿನ ಕನಿಷ್ಠ 100 ಸದಸ್ಯರು ಇರಬೇಕು. ಸದಸ್ಯರ ಆಧಾರ್ ಕಾರ್ಡ್ ಹಾಗೂ ಮತದಾರರ ಗುರುತಿನ ಚೀಟಿ ಕಡ್ಡಾಯ ದಾಖಲಾತಿಗಳಾಗಿವೆ.

ಪಟ್ಟಣ ವ್ಯಾಪ್ತಿಯ ಎಲ್ಲಾ ಅರ್ಹ ಯುವ ಸಂಘಟನೆಗಳು ಅಗತ್ಯ ದಾಖಲೆಗಳೊಂದಿಗೆ ಬಿ ಜೆ ವೈ ಎಸ್ ಪೋರ್ಟಲ್ ಅಥವಾ ಮೊಬೈಲ್ ಆಪ್ ಮೂಲಕ, ಗ್ರಾಮ ಒನ್ ಕರ್ನಾಟಕ ಒನ್, ಬೆಂಗಳೂರು ಒನ್ ನಾಗರಿಕ ಸೇವಾ ಕೇಂದ್ರಗಳ ಸಹಾಯದಿಂದ ಅರ್ಜಿ ಸಲ್ಲಿಕೆ ಮಾಡಬಹುದು ಎಂದು ಮುಖ್ಯಾಧಿಕಾರಿ ರೇಖಾ ಮನವಿ ಮಾಡಿದ್ದಾರೆ.

# ರಕ್ತದಾನ, ಗಿಡಗಳ ವಿತರಣೆ, ಸಾಧಕರಿಗೆ ಸನ್ಮಾನ




**ಮಂಡ್ಯ:** ಡಾ.ಮಹಮ್ಮದ್ ಜಫ್ರುಲ್ಲಾ ಖಾನ್ ಹಿತೈಷಿಗಳ ಬಳಗ ಹಾಗೂ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮಿಗಳ ಭಕ್ತ ವೃಂದದ ವತಿಯಿಂದ ಜನ್ಮದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ 'ಬೃಹತ್ ರಕ್ತದಾನ ಶಿಬಿರ, ಗಿಡಗಳ ವಿತರಣೆ ಹಾಗೂ ಸಾಧಕರಿಗೆ ಸನ್ಮಾನ' ಸಮಾರಂಭವು ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಸೋಮವಾರ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ, ಉದ್ಘಾಟನೆ ನೆರವೇರಿಸಿದ ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಅವರು ಆಶೀರ್ವಚನ ನೀಡಿ, ಮನುಷ್ಯನಿಗೆ ಎಲ್ಲಕ್ಕಿಂತ ಮುಖ್ಯವಾದದ್ದು ಮಾನವ ಧರ್ಮ. ಶುದ್ಧವಾದ ಮನಸ್ಸಿದ್ದರೆ ಮೋಕ್ಷ ಪ್ರಾಪ್ತಿಯಾಗುತ್ತದೆ. ಪ್ರಕೃತಿ ಉಳಿವಿಗಾಗಿ ಹಾಗೂ ಆಮ್ಲಜನಕಕ್ಕಾಗಿ ಪ್ರತಿಯೊಬ್ಬರೂ ಗಿಡಗಳನ್ನು ಬೆಳೆಸಬೇಕು. ಜಫ್ರುಲ್ಲಾ ಖಾನ್ ಅವರು ಸಮಾಜಕ್ಕೆ ನೀಡುತ್ತಿರುವ ಕೊಡುಗೆ ಶ್ಲಾಘನೀಯ. ಇಂತಹ ಸಮಾಜಮುಖಿ ಕಾರ್ಯಕ್ರಮಗಳು ಎಲ್ಲರಿಗೂ ಮಾದರಿ ಎಂದರು.

ಮಿಮ್ಸ್‌ನಿರ್ದೇಶಕಡಾ.ನರಸಿಂಹಸ್ವಾಮಿ ಮಾತನಾಡಿ, ರಕ್ತದಾನದ ಅಗತ್ಯತೆಯನ್ನು ವಿವರಿಸಿದರು. ಮಾನವನ ದೇಹದಲ್ಲಿ ಸುಮಾರು 5 ಲೀಟರ್ ರಕ್ತವಿರುತ್ತದೆ ಮತ್ತು ಪ್ರತಿ 120 ದಿನಗಳಿಗೊಮ್ಮೆ ಅದು ಬದಲಾಗುತ್ತಿರುತ್ತದೆ. ದಾನಿಗಳು ನೀಡುವ ಒಂದು ಯೂನಿಟ್ ರಕ್ತವು ಕ್ಯಾನ್ಸರ್ ರೋಗಿಗಳಿಗೆ, ಅಪಘಾತಕ್ಕೊಳಗಾದವರಿಗೆ ಹಾಗೂ ಗರ್ಭಿಣಿಯರಿಗೆ ಜೀವದಾನ ನೀಡುತ್ತದೆ. ರಕ್ತದಾನದ ಬಗ್ಗೆ ಇರುವ ಮೂಢನಂಬಿಕೆಗಳನ್ನು ತೊಡೆದುಹಾಕಿ, ಹೆಚ್ಚಿನ ಸಂಖ್ಯೆಯಲ್ಲಿ ಯುವಕರು ರಕ್ತದಾನಕ್ಕೆ ಮುಂದಾಗಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷರಾದ ಮತ್ತಿಕೆರೆ ಜಯರಾಮ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಜನ್ಮದಿನಾಚರಣೆ ಎಂದರೆ ಕೇವಲ ಆಡಂಬರಕ್ಕೆ ಸೀಮಿತವಾಗುತ್ತಿದೆ. ಆದರೆ, ಈ ಅಭಿಮಾನಿ ಬಳಗವು ರಕ್ತದಾನ, ಸಸಿ ವಿತರಣೆಯಂತಹ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಅಭಿನಂದನಾರ್ಹ. ಜಫ್ರುಲ್ಲಾ ಖಾನ್ ಅವರು ದುಬೈನಲ್ಲಿದ್ದರೂ, ಮಂಡ್ಯದ ಮೇಲಿನ ಅವರ ಪ್ರೀತಿ ಮತ್ತು ಮಾನವೀಯ ಮೌಲ್ಯಗಳು ಅನುಕರಣೀಯ ಎಂದು ಶ್ಲಾಘಿಸಿದರು.

# ಲಿಂಗನಿಷ್ಠ ಅಮುಗೆ ದೇವಯ್ಯ



| ವೀಣಾ ಹೇಮಂತ್‌ಗೌಡ ಪಾಟೀಲ್

ಇಂದಿನ ಮಹಾರಾಷ್ಟ್ರ ರಾಜ್ಯದ ಸೊಲ್ಲಾಪುರ, ಅಂದಿನ ಸೊನ್ನಲಿಗೆಯಲ್ಲಿ ಶಿವಯೋಗಿ ಸಿದ್ಧರಾಮರು ಕ್ಷೇತ್ರ ಪೂಜೆಯನ್ನು ಮಾಡುವ ಸಲುವಾಗಿ ಪ್ರತಿ ಮನೆಯ ಮುಂದೆ ಕೊಟ್ಟಣವನ್ನು ಹಾಕಿಸಿದ್ದರು. ಇಂದಿಗೂ ಕೂಡ ಚಾಲ್ತಿಯಲ್ಲಿರುವ ಈ ಸಾಮಾಜಿಕ ಕ್ರಿಯೆಯನ್ನು ಆ ಶರಣರು ಒಪ್ಪಲಿಲ್ಲ. ನಾವು ಭವಿಗಳ ಸೇವೆ ಮಾಡುವುದಿಲ್ಲ ಎಂದು ಆ ಶಿವಶರಣರು ಉತ್ತರಿಸಿದರಲ್ಲದೇ ತನ್ನ ಮನೆಯ ಮುಂದೆ ಹಾಕಿರುವ ಭತ್ತದ ಕೊಟ್ಟಣವನ್ನು ಮರಳಿ ಕೊಂಡೊಯ್ಯಲು ಶಿವಯೋಗಿ ಸಿದ್ಧರಾಮರ ಹಿಂಬಾಲಕರಿಗೆ ಹೇಳಿದರು. ಅದೆಷ್ಟೇ ಪರಿಪರಿಯಾಗಿ ವಿನಂತಿಸಿಕೊಂಡರೂ ಕೂಡ ಆ ಶರಣ ದಂಪತಿಗಳು ತಮ್ಮ ಅಚಲ ಮನಸ್ಥಿತಿಯಿಂದ ಹಿಂತೆಗೆಯದೆ ಅತ್ಯಂತ ನಮ್ರವಾಗಿ ಭವಿಗಳ ಸೇವೆ ಮಾಡಲು ತಾವು ಸಿದ್ಧವಿಲ್ಲ ಎಂದು ಸಾರಿ ಹೇಳಿದರು....ಹಾಗಾದರೆ ಗ್ರಾಮವನ್ನೇ ತೊರೆದು ಹೋಗಬೇಕಾಗುತ್ತದೆ ಎಂದು ಶಿವಯೋಗಿಗಳ ಶಿಷ್ಯರು ಬೆದರಿಕೆ ಒಡ್ಡಿದಾಗ ಆಯ್ತು ಎಂದು ಗ್ರಾಮವನ್ನೇ ತೊರೆದರು ಎಂದು ಹೇಳುವ ಈ ಕಥೆಯ ಲಿಂಗ ಪೂಜಾ ನಿಷ್ಠ ಶರಣರೇ ಅಮುಗೆ ದೇವಯ್ಯ

ಮುಂದೆ ನಡೆದದ್ದು ಬೇರೆಯದೆ ಕಥೆ. ಅಂತಿಮವಾಗಿ ಶಿವಯೋಗಿ ಸಿದ್ಧರಾಮ ಶರಣರು ಅಮುಗಿ ದೇವಯ್ಯ ಮತ್ತು ವರದಾನಿ ದಂಪತಿಗಳ ಲಿಂಗ ನಿಷ್ಠೆಯನ್ನು ಮೆಚ್ಚಿ ಪುರಸ್ಕರಿಸಿದರು ಎಂಬುದನ್ನು ನಾವು ಹಲವಾರು ಪುರಾಣಗಳಲ್ಲಿ ಕೇಳಿದ್ದೇವೆ.

ಬಸವಾದಿ ಶಿವ ಶರಣರ ಕಾಲದಲ್ಲಿ ಜಾತಿ, ವರ್ಗ, ವರ್ಣ ಭೇದವಿಲ್ಲದ ನೂರಾರು,ಸಾವಿರಾರು ಸಂಖ್ಯೆಯಲ್ಲಿ ಶರಣರು ತಮ್ಮ ಅಸ್ಮಿತೆಯನ್ನು



ತೋರಿದರು. ಅಂತಹ ಅಗ್ರ ಶರಣರಲ್ಲಿ ಒಬ್ಬರು ಲಿಂಗಪೂಜಾ ನಿಷ್ಠರಾದ ಅಮುಗೆ ದೇವಯ್ಯ. ಕಾವ್ಯಾತ್ಮಕ ಅಂಶಗಳನ್ನು ಹೊಂದಿರುವ ಇವರ ವಚನಗಳಲ್ಲಿ ಶರಣರ ಕುರಿತು ಬರೆಯುವಾಗ ಅದರಲ್ಲಿ ಕಾವ್ಯದ ಅಭಿವ್ಯಕ್ತಿಯನ್ನು ನೋಡಿದರೆ ಇವರೊಬ್ಬ ಸುಸಂಸ್ಕತ ವಿದ್ಯಾವಂತ ವ್ಯಕ್ತಿ ಎಂದು ಭಾಸವಾಗುತ್ತದೆ. ತನ್ನ ನೆಚ್ಚಿನ ದೈವ ಸೋಮನಾಥ ಲಿಂಗವು ಗ್ರಾಹಿ ಮತ್ತು ಅಗ್ರಾಹಿ ಎರಡೂ ಆಗಿರುವನು ಎಂದು ಹೇಳುವುದು ಇವರ ಸತ್ಯ ಪರತೆಯನ್ನು ತೋರುತ್ತದೆ. ವರದೇವಿ ಇವರ ಪತ್ನಿಯಾಗಿದ್ದು ದಾಂಪತ್ಯದ ಸಮರಸ ಭಾವವನ್ನು ಹೊಂದಿದ್ದ ಈ ದಂಪತಿಗಳ ಬದುಕೇ ಇರಬಹುದು ಎಂಬಂತಹ ಸತಿಪತಿ ಭಾವವನ್ನು ಆತ ತನ್ನ ವಚನದಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ. ಇಂದಿನ ಮಹಾರಾಷ್ಟ್ರದ ಪಂಡರಾಪುರದ ಬಳಿಯ ಪುರುಂಜ(ಪುಳೂಜ) ಎಂಬ ಗ್ರಾಮದಲ್ಲಿ ವಾಸವಾಗಿದ್ದ ಅಮುಗೆ ದೇವಯ್ಯ ಹಾಗೂ ವರದಾನಿ ದಂಪತಿಗಳು ಕೆಲಕಾಲ ಕಲ್ಯಾಣದಲ್ಲಿಯೂ ನೆಲೆಸಿದ್ದರು. ಅಮುಗೆ ದೇವಯ್ಯನವರ ವಚನಗಳ ಅಂಕಿತನಾಮಸಿದ್ಧ ಸೋಮನಾಥ.

12ನೇ ಶತಮಾನದಲ್ಲಿ ಅಮುಗೆದೇವಯ್ಯ ಎಂಬ ಹೆಸರಿನ ಮೂರು ನಾಲ್ಕು ಜನ ಶರಣರು ಆಗಿ ಹೋಗಿದ್ದರು. ಒಬ್ಬರು ಕ್ಷೌರಿಕ ವೃತ್ತಿಯನ್ನು ಅನುಸರಿಸಿದರೆ ಮತ್ತೊಬ್ಬರು ನೇಯ್ಗೆ ಕಾಯಕವನ್ನು ಮಾಡುತ್ತಿದ್ದರು. ಇವರಿಬ್ಬರಲ್ಲವೇ ಇನ್ನೊಬ್ಬ ಅಮುಗೆ ದೇವಯ್ಯ ಇದ್ದನು ಎಂದು ಚರಿತ್ರಕಾರರು ಹೇಳುತ್ತಾರೆ  ಆದರೆ ಅದು ಅಮುಗೆ ರಾಯಮ್ಮನವರ ವಚನಗಳ ಅಂಕಿತ ಎಂದು ಸಿದ್ಧವಾಗಿದೆ. ಕ್ಷೌರ ಇಲ್ಲವೇ ಕನ್ನಡಿ ಕಾಯಕದ ಅಮುಗೆ ದೇವ ಕಮಳೇಶ್ವರ ಲಿಂಗ ಎಂಬ ಅಂಕಿತದಿಂದ ವಚನಗಳನ್ನು ರಚಿಸಿದ್ದರು. ನಮ್ಮ ಉಪೇಕ್ಷಿತ ವಚನಕಾರರ ಸರಣಿಯ ಇಂದಿನ ಲೇಖನದ ಶರಣ ಅಮುಗೆ ದೇವಯ್ಯ ನೇಯ್ಗೆ ಕಾಯಕವನ್ನು ತನ್ನ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ತನ್ನೂರಿನ ಸೋಮನಾಥ ಈತನ ಇಷ್ಟ ದೈವವಾಗಿದ್ದು ಅದನ್ನೇ ತನ್ನ ವಚನಗಳ ಅಂಕಿತನಾಮವನ್ನಾಗಿಸಿಕೊಂಡಿದ್ದನು. ಸೋಮನಾಥೇಶ್ವರ ದೇಗುಲದಲ್ಲಿ ದೊರೆತಿರುವ 12ನೇ ಶತಮಾನದ ಒಂದು ಶಾಸನವು ಯಾದವ ಸಿಂಘಣನು ಅಮುಗಿ ದೇವನಿಗೆ ದಾನ ಕೊಟ್ಟದ್ದನ್ನು ಉಲ್ಲೇಖಿಸಿದೆ. ರಾಘವಾಂಕ ಚರಿತ್ರದಲ್ಲಿ ಸಿದ್ಧ ನಂಜೇಶನು ಅಮುಗಿ ದೇವಯ್ಯನವರ ಕುರಿತು ಒಂದು ಕಥೆಯನ್ನು ಸಂಗ್ರಹಿಸಿಕೊಟ್ಟಿದ್ದರೆ, ಶಂಕರಲಿಂಗ ಕವಿಯು ಆತನ ಮೇಲೆ ಒಂದು ರಗಳೆಯನ್ನು ಬರೆದಿದ್ದಾನೆ. ಶಿವಲಿಂಗ ಕವಿಯು ಅಮುಗಿ ದೇವಯ್ಯಗಳ ಸಾಂಗತ್ಯ ಎಂಬ ಒಂದು ಸ್ವತಂತ್ರ ಕೃತಿಯನ್ನು ರಚಿಸಿದ್ದಾನೆ.

ಮುಂದೆ ಕೆಲಕಾಲ ಕಲ್ಯಾಣದಲ್ಲಿ ಅಮುಗೆ ದೇವಯ್ಯ ಮತ್ತು ವರದಾನಿಯರು ನೆಲೆಸಿದ್ದರು.

**ಉಪೇಕ್ಷಿತ ವಚನಕಾರರು**

ಶರಣರ ಧಾರ್ಮಿಕ ಮತ್ತು ಸಾಮಾಜಿಕ ಸಮಸ್ಯೆಯ ಮಹಾಸಾಧನೆಯಲ್ಲಿ ದಂಪತಿಗಳು ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು.

ಕಲ್ಯಾಣ ಕ್ರಾಂತಿಯ ನಂತರ ಮತ್ತೆ ತನ್ನೂರಿಗೆ ಮರಳಿ ಅಲ್ಲಿಯೇ ಜನ ಜಾಗೃತಿಯನ್ನು ಉಂಟು ಮಾಡುವ ಮೂಲಕ ತಮ್ಮ ಬದುಕನ್ನು ಸಾರ್ಥಕ ಗೊಳಿಸಿಕೊಂಡಿರಬಹುದು ಎಂಬುದಕ್ಕೆ ಪುರಾವೆಗಳು ದೊರೆಯುತ್ತವೆ.

ಬಹುದೀರ್ಘಕಾಲ ಬದುಕಿರುವ ದಂಪತಿಗಳು ವಿಜಯಪುರದ ಸುತ್ತಮುತ್ತಲಿನ ಭಾಗಗಳಲ್ಲಿ ಹಾಗೂ ಮುಧೋಳ ಸಂಸ್ಥಾನಗಳಲ್ಲಿ ಅಮುಗಿ ದೇವನ ಉಲ್ಲೇಖವಿರುವ ದೇಗುಲಗಳು ಇವೆ.... ಅವರಿಗೆ ಅಮಾಕ ಸಿದ್ಧ ಎಂಬ ಹೆಸರಿನಿಂದ ಕರೆಯಲಾಗಿತ್ತು.

ಸಿದ್ಧ ಕುಲಾರ್ಣವ ಪ್ರವರ್ಧನ ಸುಧಾಕರ ಎಂಬ ವಿಶೇಷಣ ಕೂಡ ಇವರಿಗೆ ಇದ್ದು ಹಾಲುಮತದ ಕುರುಬರ ಮೇಲೆ ಅವರು ವಿಶೇಷ ಪ್ರಭಾವವನ್ನು ಬೀರಿ ಅವರನ್ನು ಲಿಂಗವಂತರನ್ನಾಗಿಸಿದ್ದಾರೆ



ಎಂಬುದನ್ನು ಕೂಡ ನಾವು ನೋಡಬಹುದು.

ಸಾವಯನಲ್ಲ ಸ್ವರೂಪ ಕುರುಹಿಡಿಯಲಾಗಿ
ನಿರವಯನಲ್ಲ ನಿರೂಪ ಭಾವಿಸಲಾಗಿ
ದ್ವೈತಿಯಲ್ಲ ಸೇವ್ಯಸೇವಕನೆಂಬ
ಉಭಯವಳಿದುಳಿದವನಾಗಿ
ಅದ್ವೈತಿಯಲ್ಲ ನಾಹಂ ಕೋಹಂ ಸೋಹಂ ವೆಂಬ
ಭ್ರಮೆಯಳಿದುಳಿದನಾಗಿ
ಇಂತಿ ಸಕಲ ಭ್ರಮೆಯ ಅಳಿದು ಮಹಾಗಣದಲ್ಲಿ
ನಿಷ್ಪತಿಯಾಗಿಪ್ಪ ಸಿದ್ಧ ಸೋಮನಾಥ ಲಿಂಗ, ನಿಮ್ಮ
ಶರಣ

ಎಂಬ ಅವರ ವಚನವು ಎಲ್ಲ ಭ್ರಮೆಯು ಅಳಿದುಳಿದಾಗ ಅಂಗ ನಿರಂಗ ವೆಂಬ ವ್ಯತ್ಯಾಸವು ದೇವನಲ್ಲಿ ಕಾಣುವುದಿಲ್ಲ ಎಂಬುದನ್ನು ಅತ್ಯಂತ ಕಾವ್ಯಾತ್ಮಕವಾಗಿ ಅವರು ವಿಶ್ಲೇಷಿಸಿದ್ದಾರೆ.

ಲಿಂಗ ಪೂಜಾ ನಿಷ್ಠ ಅಮುಗೆ ದೇವಯ್ಯನವರಿಗೆ ಶರಣು ಶರಣಾರ್ಥಿ

# ಭಾಷೆಯ ನೆರಳಲ್ಲಿ ಬೆಂಗಳೂರು

## ಕನ್ನಡದ ಕಳವಳ, ಸಹಬಾಳ್ವೆಯ ಅಗತ್ಯ



| ಶಿವಬಸಪ್ಪ ಗು ಜಂಗಾಲಿ

ಒಂದು ನಗರದ ನಿಜವಾದ ಗುರುತು ಅದರ ಕಟ್ಟಡಗಳಲ್ಲಿ ಇರುವುದಿಲ್ಲ; ಅದರ ಭಾಷೆ, ಸಂಸ್ಕೃತಿ ಮತ್ತು ಜನರ ಮನಸ್ಸಿನಲ್ಲಿ ಇರುತ್ತದೆ. ಈ ಮಾತು ಬೆಂಗಳೂರಿಗೆ ಅಕ್ಷರಶಃ ಅನ್ವಯಿಸುತ್ತದೆ. ಒಂದು ಕಾಲದಲ್ಲಿ "ಗಾರ್ಡನ್ ಸಿಟಿ" ಎಂದು ಕರೆಯಲ್ಪಟ್ಟ ಬೆಂಗಳೂರು ಇಂದು ವಿಶ್ವದ ಗಮನ ಸೆಳೆದಿರುವ ತಂತ್ರಜ್ಞಾನ ನಗರ. ದೇಶ–ವಿದೇಶಗಳಿಂದ ಲಕ್ಷಾಂತರ ಜನರು ಉದ್ಯೋಗ, ಶಿಕ್ಷಣ, ಉದ್ಯಮ ಮತ್ತು ಉತ್ತಮ ಬದುಕಿನ ಕನಸು ಹೊತ್ತು ಇಲ್ಲಿಗೆ ಬರುತ್ತಿದ್ದಾರೆ. ಈ ವೈವಿಧ್ಯವೇ ಬೆಂಗಳೂರಿನ ಶಕ್ತಿ. ಆದರೆ ಈ ಬೆಳವಣಿಗೆಯ ನಡುವೆಯೇ ಒಂದು ಪ್ರಶ್ನೆ ಕನ್ನಡಿಗರ ಮನಸ್ಸನ್ನು ಕಾಡುತ್ತಿದೆ ಈ ನಗರದ ಆತ್ಮವಾದ ಕನ್ನಡ ತನ್ನದೇ ನೆಲದಲ್ಲಿ ಎಷ್ಟು ಗಟ್ಟಿಯಾಗಿ ಕೇಳಿಸುತ್ತಿದೆ .

ಬೆಂಗಳೂರು ಎಲ್ಲರ ನಗರ. ಇಲ್ಲಿ ಯಾರಿಗೂ ಸ್ವಾಗತದ ಬಾಗಿಲು ಮುಚ್ಚಿಲ್ಲ. ಈ ನಗರ ಪರಿಶ್ರಮಕ್ಕೆ ಬೆಲೆ ಕೊಡುತ್ತದೆ, ಪ್ರತಿಭೆಗೆ ಅವಕಾಶ ನೀಡುತ್ತದೆ. ಆದ್ದರಿಂದ ವಿವಿಧ ಭಾಷೆಗಳ ಜನರು ಇಲ್ಲಿ ನೆಲೆಸುವುದು ಸಹಜ. ಆದರೆ ಒಂದು ನಗರವನ್ನು ಪ್ರೀತಿಸುವುದು ಎಂದರೆ ಅದರ ಸೌಲಭ್ಯಗಳನ್ನು ಮಾತ್ರ ಬಳಸುವುದಲ್ಲ; ಅದರ ಭಾಷೆ, ಸಂಸ್ಕೃತಿ ಮತ್ತು ಪರಂಪರೆಯನ್ನೂ ಗೌರವಿಸುವುದಾಗಿದೆ.

ಕನ್ನಡವು ಕೇವಲ ಸಂವಹನದ ಸಾಧನವಲ್ಲ. ಅದು ಸಾವಿರಾರು ವರ್ಷಗಳ ಇತಿಹಾಸವನ್ನು ಹೊತ್ತಿರುವ ಭಾಷೆ. ಬಸವಣ್ಣನ ವಚನಗಳ ತಾತ್ವಿಕತೆ, ಕುವೆಂಪು ಅವರ ವಿಶ್ವಮಾನವ ಸಂದೇಶ, ಬೇಂದ್ರೆಯ ಕಾವ್ಯ, ಮಾಸ್ತಿ, ಕಾರಂತ, ಅನಂತಮೂರ್ತಿ ಅವರ ಸಾಹಿತ್ಯ ಇವೆಲ್ಲವೂ ಕನ್ನಡದ ಶ್ರೀಮಂತಿಕೆಯನ್ನು ಜಗತ್ತಿಗೆ ಪರಿಚಯಿಸಿವೆ. ಇಂತಹ ಭಾಷೆ ತನ್ನ ರಾಜಧಾನಿಯಲ್ಲೇ ಹಿಂದೆ ಸರಿಯುತ್ತಿರುವ ಭಾವನೆ ಮೂಡಿದಾಗ, ಅದು ಕನ್ನಡಿಗರಲ್ಲಿ ಕಳವಳ ಹುಟ್ಟಿಸುವುದು ಸಹಜ.

ನಗರದ ಅನೇಕ ವ್ಯಾಪಾರ ಮಳಿಗೆಗಳಲ್ಲಿ, ಕಚೇರಿಗಳಲ್ಲಿ, ಖಾಸಗಿ ಸಂಸ್ಥೆಗಳಲ್ಲಿ ಮತ್ತು ವಸತಿ ಸಮುಚ್ಚಯಗಳಲ್ಲಿ ಕನ್ನಡಕ್ಕಿಂತ ಬೇರೆ ಭಾಷೆಗಳೇ ಹೆಚ್ಚಾಗಿ ಕೇಳಿಸುತ್ತವೆ ಎನ್ನುವ ಅನುಭವ ಅನೇಕರದ್ದು. ಕೆಲವೊಮ್ಮೆ ಕನ್ನಡದಲ್ಲಿ ಮಾತನಾಡಿದರೂ ಉತ್ತರ ಬೇರೆ ಭಾಷೆಯಲ್ಲಿ




ಬರುತ್ತದೆ. ಇದು ಯಾರನ್ನೂ ದೂರ ಮಾಡುವ ವಿಚಾರವಲ್ಲ; ಕನ್ನಡಕ್ಕೂ ಅದರ ಸಹಜ ಸ್ಥಾನ ದೊರೆಯಬೇಕು ಎಂಬ ಆಶಯ.

ಇದೇ ವೇಳೆ ಕನ್ನಡಿಗರೂ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಕೆಲವರು ಕನ್ನಡ ಮಾತನಾಡಲು ಹಿಂಜರಿಯುತ್ತಾರೆ. ಇಂಗ್ಲಿಷ್‌ನಲ್ಲಿ ಮಾತನಾಡಿದರೆ ಮಾತ್ರ ಗೌರವ ಸಿಗುತ್ತದೆ ಎಂಬ ತಪ್ಪು ಕಲ್ಪನೆ ಬೆಳೆಸಿಕೊಳ್ಳುತ್ತಾರೆ. ಜಾಗತಿಕ ಭಾಷೆಗಳನ್ನು ಕಲಿಯುವುದು ಅತ್ಯಂತ ಅಗತ್ಯ. ಆದರೆ ಮಾತೃಭಾಷೆಯನ್ನು ಕಡೆಗಣಿಸುವುದು ಪ್ರಗತಿಯ ಸಂಕೇತವಲ್ಲ. ಹಲವು ಭಾಷೆಗಳನ್ನು ಕಲಿಯಬಹುದು; ಆದರೆ ತನ್ನ ಬೇರುಗಳನ್ನು ಮರೆಯಬಾರದು.

ಮನೆಯಲ್ಲೇ ಮಕ್ಕಳೊಂದಿಗೆ ಕನ್ನಡ ಮಾತನಾಡುವ ಅಭ್ಯಾಸ ಕಡಿಮೆಯಾಗುತ್ತಿರುವುದು ಮತ್ತೊಂದು ಕಳವಳ. ಕೆಲವು ಮಕ್ಕಳು ಕರ್ನಾಟಕದಲ್ಲೇ ಹುಟ್ಟಿ ಬೆಳೆದರೂ ಕನ್ನಡ ಓದಲು ಅಥವಾ ಬರೆಯಲು ಕಷ್ಟಪಡುತ್ತಾರೆ. ಭಾಷೆ ಶಾಲೆಯ ಪಾಠಪುಸ್ತಕದಿಂದ ಮಾತ್ರ ಉಳಿಯುವುದಿಲ್ಲ; ಮನೆಯ ಮಾತಿನಿಂದ, ಕಥೆಗಳಿಂದ, ಹಾಡುಗಳಿಂದ ಮತ್ತು ಸಂಸ್ಕೃತಿಯಿಂದ ಉಳಿಯುತ್ತದೆ.

ಈ ನೆಲದಲ್ಲಿ ಬದುಕುವ ಪ್ರತಿಯೊಬ್ಬರೂ ಕನ್ನಡ ಕಲಿಯಬೇಕು ಎಂದು ಹೇಳುವುದು ಬಲವಂತವಲ್ಲ; ಅದು ಪರಸ್ಪರ ಗೌರವದ ಮನವಿ. ತಮಿಳುನಾಡಿನಲ್ಲಿ ತಮಿಳು, ಕೇರಳದಲ್ಲಿ ಮಲಯಾಳಂ, ಮಹಾರಾಷ್ಟ್ರದಲ್ಲಿ ಮರಾಠಿಗೆ ಇರುವ ಗೌರವದಂತೆಯೇ ಕರ್ನಾಟಕದಲ್ಲೂ ಕನ್ನಡಕ್ಕೆ ಸಹಜ ಗೌರವ ದೊರೆಯಬೇಕು. ಸ್ಥಳೀಯ ಭಾಷೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡಿದರೆ ಜನರ ನಡುವೆ ಆತ್ಮೀಯತೆಯೂ ಹೆಚ್ಚುತ್ತದೆ.

ಕನ್ನಡವನ್ನು ಉಳಿಸುವ ಜವಾಬ್ದಾರಿ ಸರ್ಕಾರದಷ್ಟೇ ಅಲ್ಲ. ಪ್ರತಿಯೊಬ್ಬ ನಾಗರಿಕನದು. ಸರ್ಕಾರಿ ಕಚೇರಿಗಳಲ್ಲಿ ಕನ್ನಡದ ಬಳಕೆ ಹೆಚ್ಚಾಗಬೇಕು. ಸಾರ್ವಜನಿಕ ಫಲಕಗಳಲ್ಲಿ ಕನ್ನಡಕ್ಕೆ ಆದ್ಯತೆ ಸಿಗಬೇಕು. ಶಾಲೆಗಳಲ್ಲಿ ಕನ್ನಡದ ಬಗ್ಗೆ ಹೆಮ್ಮೆ ಮೂಡಿಸುವ ಶಿಕ್ಷಣ ನೀಡಬೇಕು. ಖಾಸಗಿ ಸಂಸ್ಥೆಗಳು ಸ್ಥಳೀಯ ಭಾಷೆಯ ಮಹತ್ವವನ್ನು ಅರ್ಥಮಾಡಿಕೊಳ್ಳಬೇಕು. ಜೊತೆಗೆ ಕನ್ನಡಿಗರೂ ಕನ್ನಡದಲ್ಲೇ ಆತ್ಮವಿಶ್ವಾಸದಿಂದ ಮಾತನಾಡಬೇಕು.

ಸಹಬಾಳ್ವೆಯೇ ಬೆಂಗಳೂರಿನ ನಿಜವಾದ ಶಕ್ತಿ. ಇಲ್ಲಿ ನೆಲೆಸಿರುವ ಪ್ರತಿಯೊಂದು ಭಾಷೆಯೂ, ಪ್ರತಿಯೊಂದು ಸಂಸ್ಕೃತಿಯೂ ಈ ನಗರವನ್ನು ಶ್ರೀಮಂತಗೊಳಿಸಿವೆ. ಆದ್ದರಿಂದ ಯಾವುದೇ ಭಾಷೆಯ ಬಗ್ಗೆ ದ್ವೇಷ ಅಥವಾ ತಿರಸ್ಕಾರಕ್ಕೆ ಇಲ್ಲಿ ಜಾಗವಿರಬಾರದು. ಕನ್ನಡವನ್ನು ಪ್ರೀತಿಸುವುದು ಎಂದರೆ ಬೇರೆ ಭಾಷೆಗಳನ್ನು ವಿರೋಧಿಸುವುದಲ್ಲ. ತನ್ನ ತಾಯಿಯನ್ನು ಪ್ರೀತಿಸಿದರೆ ಬೇರೆ ತಾಯಂದಿರನ್ನು ಅವಮಾನಿಸಿದಂತಾಗುವುದಿಲ್ಲ; ಅದೇ ರೀತಿ ತನ್ನ ಮಾತೃಭಾಷೆಯನ್ನು ಗೌರವಿಸುವುದು ಇತರ ಭಾಷೆಗಳ ಗೌರವವನ್ನೂ ಹೆಚ್ಚಿಸುತ್ತದೆ.

ಬೆಂಗಳೂರು ವಿಶ್ವನಗರವಾಗಿರಲಿ. ಆದರೆ ಅದರ ಹೃದಯದಲ್ಲಿ ಕನ್ನಡದ ಸ್ಪಂದನೆ ಎಂದಿಗೂ ಮಂಕಾಗಬಾರದು. ಇಲ್ಲಿ ಬರುವ ಪ್ರತಿಯೊಬ್ಬರೂ "ನಮಸ್ಕಾರ", "ಧನ್ಯವಾದ", "ಹೇಗಿದ್ದೀರಾ " ಎಂಬ ಕೆಲವು ಕನ್ನಡ ಪದಗಳನ್ನಾದರೂ ಕಲಿಯಲಿ. ಅದು ಕೇವಲ ಭಾಷೆಯ ಕಲಿಕೆ ಅಲ್ಲ; ಈ ನೆಲದ ಸಂಸ್ಕೃತಿಗೆ ಸಲ್ಲಿಸುವ ಗೌರವ.

ನಾವು ಕೇಳುತ್ತಿರುವುದು ಯಾರನ್ನೂ ಹೊರಗಿಡುವ ಬೇಡಿಕೆಯಲ್ಲ; ಕನ್ನಡವನ್ನು ಒಳಗೊಳ್ಳುವ ಮನವಿ. ನಮ್ಮ ಆಶಯ ದ್ವೇಷವಲ್ಲ, ಸಹಬಾಳ್ವೆ. ನಮ್ಮ ಧ್ಯೇಯ ಸಂಘರ್ಷವಲ್ಲ, ಪರಸ್ಪರ ಗೌರವ. ಕನ್ನಡ ಬೆಳೆದರೆ ಕರ್ನಾಟಕದ ಆತ್ಮ ಬೆಳೆಯುತ್ತದೆ. ಕನ್ನಡ ಉಳಿದರೆ ಬೆಂಗಳೂರಿನ ವೈಶಿಷ್ಟ್ಯ ಉಳಿಯುತ್ತದೆ.

ಬೆಂಗಳೂರು ಎಲ್ಲರ ಕನಸಿನ ನಗರವಾಗಿರಬಹುದು; ಆದರೆ ಕನ್ನಡವೇ ಅದರ ಆತ್ಮ. ಆ ಆತ್ಮವನ್ನು ಉಳಿಸುವುದು ಕನ್ನಡಿಗರ ಜವಾಬ್ದಾರಿಯಷ್ಟೇ ಅಲ್ಲ, ಈ ನೆಲವನ್ನು ತನ್ನ ಮನೆಯೆಂದು ಕರೆಯುವ ಪ್ರತಿಯೊಬ್ಬರ ಕರ್ತವ್ಯವೂ ಆಗಿದೆ. ಭಾಷೆಗಳು ಹಲವು ಇರಲಿ, ಹೃದಯ ಒಂದಾಗಿರಲಿ. ಕನ್ನಡಕ್ಕೆ ಗೌರವ, ಎಲ್ಲ ಭಾಷೆಗಳಿಗೆ ಆದರ ಇದೇ ನಿಜವಾದ ಬೆಂಗಳೂರಿನ ಸಂಸ್ಕೃತಿ.

# ಕಾಮನ್‌ವೆಲ್ತ್‌ನ ಮೊದಲ ಕುಸ್ತಿ ವೀರ



| ಡಾ.ಸುಧಾಕರ.ಜಿ.ಲಕ್ಕವಳ್ಳಿ


ಚರ್ಖಿ ದಾದ್ರಿಯ ಕೆಂಪು ಮಣ್ಣಲ್ಲಿ ಅರಳಿದ ಕನಸದು. ಹರಿಯಾಣದ ಆ ಪುಟ್ಟ ಊರಿನ ರೈತನ ಮಗ ಲೀಲಾ ರಾಮ್ ಸಂಗ್ವಾನ್.ತಂದೆ ಅಖಾಡದ ಪೈಲ್ವಾನ್. ಮನೆಯಂಗಳವೇ ಇವರಿಗೆ ಮೊದಲ ಗುರುಕುಲ. ರಕ್ತದಲ್ಲಿ ಕುಸ್ತಿ ಇದೆ ಎಂಬುದು ಊರವರ ಮಾತಾಗಿತ್ತು. ಎಳವೆಯಲ್ಲೇ ಮೈಗೆ ಮಣ್ಣು ಮೆತ್ತಿಕೊಂಡು ಪಟ್ಟು ಕಲಿತ ಬಾಲಕ. ಕೂರಿಗೆ ತುತ್ತು ಕಡಿಮೆಯಿದ್ದರೂ ಕಣ್ಣಲ್ಲಿ ದೊಡ್ಡ ಕನಸಿತ್ತು. ಬಡತನದ ಬೇಗೆಗೆ ಬೆಂದು, ಛಲದ ಕಿಡಿಯನ್ನೇ ಉಸಿರಾಗಿಸಿಕೊಂಡಿದ್ದರು.

1958ರ ಕಾಮನ್‌ವೆಲ್ತ್ ಕ್ರೀಡಾಕೂಟ. ಭಾರತದ ಪಾಲಿಗೆ ಕುಸ್ತಿಯ ಚಿನ್ನ ಇನ್ನೂ ನಿಲುಕದ ನಕ್ಷತ್ರ. ಆಗ ಅಖಾಡಕ್ಕಿಳಿದ ಸಂಗ್ವಾನ್ ಎದುರಾಳಿಗಳ ಎದೆಯಲ್ಲಿ ನಡುಕ ಹುಟ್ಟಿಸಿದರು.ಮಿಂಚಿನ ವೇಗ, ಸಿಡಿಲಿನ ಬಲ.ಒಬ್ಬೊಬ್ಬರನ್ನೇ ಮಣ್ಣುಮುಕ್ಕಿಸಿ ಭಾರತದ ಬಾವುಟವನ್ನು ವಿದೇಶದ ನೆಲದಲ್ಲಿ ಹೆಮ್ಮೆಯಿಂದ ಹಾರಿಸಿದರು.


**ಸ್ಫೂರ್ತಿ ಸುಧೆ - 86**

ಕಾಮನ್‌ವೆಲ್ತ್‌ನಲ್ಲಿ ಕುಸ್ತಿಯ ಮೊದಲ ಚಿನ್ನ ತಂದ ವೀರರಾದರು. ಆ ಗೆಲುವು ಕೇವಲ ಪದಕವಾಗಿರಲಿಲ್ಲ. ಕೋಟಿ ಕನಸುಗಳಿಗೆ ಹಚ್ಚಿದ ಕಿಡಿಯಾಗಿತ್ತು. ಮಣ್ಣಿನ ಮಗ ಚಿನ್ನದ ಹುಡುಗ ಎಂದು ದೇಶ ಕೊಂಡಾಡಿತು.

ಗೆಲುವಿನೊಂದಿಗೆ ನಿಲ್ಲಲಿಲ್ಲ ಅವರ ಪಯಣ. ರಾಷ್ಟ್ರೀಯ ತಂಡದ ಸಾರಥಿಯಾಗಿ ನೂರಾರು ಶಿಷ್ಯರ ಬದುಕಿಗೆ ಬೆಳಕಾದರು. ತಮ್ಮ ಅನುಭವದ ಅಮೃತವನ್ನು ಯುವ ಪೀಳಿಗೆಗೆ ಧಾರೆಯೆರೆದರು. ಅವರ ಶಿಸ್ತಿನ ಪಾಠದಿಂದಲೇ ಇಂದು ಭಾರತದ ಕುಸ್ತಿ ಜಗದಗಲ ಖ್ಯಾತವಾಗಿದೆ. ಜೀವಮಾನದ ಈ ತಪಸ್ಸಿಗೆ 1998ರಲ್ಲಿ ಪದ್ಮಶ್ರೀ ಮುಡಿಗೇರಿತು. ಚರ್ಖಿ ದಾದ್ರಿಯಿಂದ ದಿಲ್ಲಿಗ, ಅಖಾಡದಿಂದ ಅಮರತ್ವಕ್ಕೆ ಸಾಗಿದ ಆ ಬದುಕು ಪರಿಶ್ರಮಕ್ಕೆ ಸೋಲಿಲ್ಲ ಎಂಬುದಕ್ಕೆ ಅಜರಾಮರ ಸಾಕ್ಷಿ.



# ಜಾಲತಾಣಗಳ ಲೋಕದೊಳಗೊಂದು ವಿಕೃತ ಮನಸ್ಸಿದೆ ಎಚ್ಚರಿಕೆ!!!!



| ಪುಷ್ಪ ಪ್ರಸಾದ್

ಅದೊಂದು ದಿನ ಸುಮಾರು ಮಧ್ಯರಾತ್ರಿ 2:00ಗಂಟೆಗೆ ನಾನು ನೀರು ಕುಡಿಯಲು ಎದ್ದು ಕುಳಿತೆ, ಆ ದಿನ ನನ್ನ ಮೊಬೈಲಿನಲ್ಲಿ ಇಂಟರ್ನೆಟ್ ಆನ್ ಇದ್ದದು ಗಮನಿಸುವಾಗ 4–5 ಮೆಸೇಜ್ ಗಳು ಬಂದವು, ನಮ್ಮೊಳಗೇ ಓರ್ವ ವ್ಯಕ್ತಿ ಹೆಣ್ಣಿನ ಹೆಸರನ್ನಿಟ್ಟುಕೊಂಡು ಓರ್ವ ಟೀನೇಜ್ ಹುಡುಗಿ/ಹುಡುಗ ಹೇಗೆ ಅನುಭಾವಿಸುತ್ತಾಳೋ/ನೋ ಅದೇ ರೀತಿಯಂತೇ ಯೋಚಿಸುತ್ತಾ/ವರ್ತಿಸುತ್ತಾ ಅದನ್ನೇ ತನ್ನ ಫೇಸ್ಬುಕ್ ಹಾಗೂ ಇನ್ಸ್ಟಾಗ್ರಾಮ್ (ಹುಡುಗಿ ಹೆಸರಿನಲ್ಲಿ) ಹಾಕುತ್ತಿದ್ದ. ಈ ಸಾಮಾಜಿಕ ಜಾಲತಾಣಗಳು ಎಷ್ಟೋ ಜನರಿಗೆ ಗೊತ್ತು. ಅದರೊಳಗಿನ ಬರಹಗಳೆಲ್ಲವೂ ಸುಪರಿಚಿತ. ಕೆಲವೊಂದು ಚೆನ್ನಾಗಿಯೂ ಇದ್ದವು ಸಹ. ಹಾಗಾಗಿಯೇ ಬಹಳಷ್ಟು ಜನ ಓದಿದ್ದರು, ಮೆಚ್ಚುಗೆ ಸೂಚಿಸಿ ಕಮೆಂಟಿಸಿದ್ದರು. ಆದರೆ ಅಸಲಿಗೆ ಅದು ಹುಡುಗಿಯಲ್ಲ, ನಮ್ಮೊಳಗೇ ಸುಪರಿಚಿತನಾಗಿರುವ ಓರ್ವ ಹುಡುಗ/ಗಂಡಸಿನ ಕೆಲಸ ಎಂದು ತಿಳಿಯಿತು. ಇತ್ತೀಚೆಗೆ ನನ್ನ ಗೆಳತಿಯೊಬ್ಬಳು ಹೇಳಿದ್ದಳು ಕೂಡ, ನಾನದನ್ನ ಅಷ್ಟಾಗಿ ತಲೆಗೆ ಹಾಕಿಕೊಂಡಿರಲಿಲ್ಲ.

ಬೇನಾಮಿ ಹೆಸರನಡಿ ಹೆಂಗಸರಿಗೆ, ಹುಡುಗಿಯರೊಂದಿಗೆ ಚಾಟ್ ಮಾಡಿ, ಭಾವನೆಗಳ ಜೊತೆ, ಸೂಕ್ಷ್ಮ ಸಂವೇದನೆಗಳ ಜೊತೆ ಆಟವಾಡಿ ಸಂತೋಷ ಪಡೆಯುವ ಮನಃಸ್ಥಿತಿ ಖಂಡಿತ ಆರೋಗ್ಯಕರವಾದದ್ದಲ್ಲ. ಇದು ವಿಕೃತವೇ ಸರಿ. ಹುಡುಗಿಯ ಹೆಸರಿನಡಿ ಜಾಲತಾಣದಲ್ಲಿ ಹರಿಬಿಡುತ್ತಿದ್ದ ಬರಹ ಅಥವಾ ಪೋಸ್ಟರ್ ಹಾಕುತ್ತಿದ್ದ  ಆ ವ್ಯಕ್ತಿ ಅದೇ ಹೆಸರಿನೊಂದಿಗೆ ನನ್ನೊಡನೆ ಮೆಸ್ಸೆಂಜರ್ ಮೂಲಕ ಸಂದೇಶ ಕಳಿಸಿದ. ಹುಡುಗಿ ಹೆಸರಿನಡಿಯಲ್ಲಿ ಓದಿರುವ ಬರಹಗಳಿಂದ ಸುಪರಿಚಿತ ಹುಡುಗಿ, ಎಂದು ಎಣಿಸಿ ನಾನೂ ಉತ್ತರಿಸುತ್ತಾ ಹೋದೆ. ಆಕೆ/ಆತ ಎನ್ನುವ ಯಾವ ಸೂಚನೆಯೂ ತಿಳಿಯಲಿಲ್ಲ. ಅಷ್ಟೊಂದು ಬರಹಗಳೂ ಹುಡುಗಿಯಂತೇ ವ್ಯಕ್ತವಾಗುತಿತ್ತು ಆ ಮಹಾಶಯನದ್ದು. ನಿನ್ನೆ ಓರ್ವ ಹಿರಿಯ ವ್ಯಕ್ತಿಯ ಮೂಲಕ ಆ ಹೆಸರು ಓರ್ವ ಗಂಡಸಿನದು, ಆತನಿಗೆ ಮದುವೆಯಾಗಿ ಮಗುವಿದೆಯೆಂದೂ ನಮ್ಮೊಳಗೇ ತನ್ನ ನಿಜ ನಾಮಧೇಯದಲ್ಲೇ ಮತ್ತೊಂದು ವಾಟ್ಸಪ್ ಗುಂಪು ನಡೆಸುತ್ತಿದ್ದಾನೆಂದೂ, ಸುಪರಿಚಿತವಾಗಿರುವ ಬರಹಗಾರನೆಂದೂ ತಿಳಿಯಿತು. ಸುದ್ದಿ ಕೇಳಿ ಅರೆಕ್ಷಣ ಮಾತೇ ಹೊರಡಲಿಲ್ಲ ನನಗೆ. ಆತನ ಸಂದೇಶಗಳಲ್ಲಿ ಆತನೇ ಹೇಳಿಕೊಂಡಿರುವಂತೆ ಇರುವ ಖಿನ್ನತೆಗೆ ಜೀವನದ ಕಷ್ಟಗಳನ್ನು, ಹೋರಾಟವನ್ನು, ನೋವುಗಳನ್ನು ಹೇಗೆ ಎದುರಿಸಿ ಬಂದೆ, ಯಾವ ರೀತಿ ಬದುಕನ್ನು ಸ್ವೀಕರಿಸಬೇಕು ಎಂದೆಲ್ಲಾ ಧೈರ್ಯತುಂಬಿದ್ದೆ. ಇದೇ ರೀತಿ ಸಂದೇಶಗಳ ಮೂಲಕ ಹೆಂಗಸರ/ಹುಡುಗಿಯರ ಭಾವನೆಗಳನ್ನು, ಸೂಕ್ಷ್ಮತೆಗಳನ್ನು ಓರ್ವ ಹುಡುಗಿಯ ರೂಪದಲ್ಲಿ ಬಂದು ಜಗ್ಗಾಡಿ, ಮಾತನಾಡಿ, ಮಾತನಾಡ ಬಾರದ್ದನ್ನೇಲ್ಲಾ ಮಾತನಾಡಿ, ಫೋಟೊಗಳನ್ನು ಎಐ ಮೂಲಕ ಬಟ್ಟೆ ಬದಲಿಸಿ ಬೇಕಾಬಿಟ್ಟಿ ಆ ಫೋಟೋಗಳನ್ನು ಶೇರ್ ಮಾಡಿ ಖುಷಿಪಡುವ ಆತನ ವಿಕೃತ ಮನಸಿಗೆ ನನ್ನ ಧಿಕ್ಕಾರವಿದೆ. ನಿಜಕ್ಕೂ ಮಾನಸಿಕತೆಯಿಂದ ಬಳಲುತ್ತಿರುವಂತೆ ಕಾಣುವ ಆ ಮನಃಸ್ಥಿತಿಗೆ ಸಹಾನುಭೂತಿಯೂ ಇದೆ, ಅನುಕಂಪವೂ ಇದೆ. ಕೇವಲ ಒಬ್ಬರ ಮಾತು ಕೇಳಿ ನಾನು ಈ ಪೋಸ್ಟ್ ಹಾಕುತ್ತಿಲ್ಲ, ಅಥವಾ ಈ ಲೇಖನ ಬರೆಯುತ್ತಿಲ್ಲ, ಅಥವಾ ತೀರ್ಮಾನಕ್ಕೆ ಬಂದಿಲ್ಲ. ಮತ್ತಷ್ಟು ಜನರನ್ನು ವಿಚಾರಿಸಿಯೇ ಇದನ್ನು ಬರೆದಿದ್ದೇನೆ.

ನನ್ನೆಲ್ಲಾ ಅಕ್ಕ ತಂಗಿಯರೇ, ಗೆಳತಿಯರೇ, ಆತ್ಮಿಯರೇ, ಪರಿಚಿತ ಅಥವಾ ಅಪರಿಚಿತ ಮಹಿಳೆಯರೇ ನೀವೂ ಇದೇ ರೀತಿಯ ಮೋಸಕ್ಕೆ ಒಳಗಾಗಿರಬಹುದು. ಒಳಗಾಗಲೂ ಬಹುದು ಎಚ್ಚರಿಕೆ! ಈ ರೀತಿ ಆ ವ್ಯಕ್ತಿ ನನ್ನೊಂದಿಗೆ ಮಾತ್ರ ಅಲ್ಲ, ಅನೇಕ ಮಹಿಳೆಯರೊಡನೆಯೂ ಸಂದೇಶ ಕಳುಹಿಸಿ ಮಾತನಾಡಿದ್ದು ತಿಳಿದು ಬಂತು. ಆದರೆ ಅವರೆಲ್ಲಾ




ಬಾಯಿ ಮುಚ್ಚಿ ಕುಳಿತರು. ಆತನ ಖ್ಯಾತಿಗೋ ಅಥವಾ ನಮಗೇನಕೆ ಸುಮ್ಮನೆ ಎಂದೋ  ಇದೇ ರೀತಿ ಮೋಸಹೋದ ಒಂದಿಬ್ಬರಿಂದ ಆತನ ನಿಜ ಹೊರಬೀಳುತ್ತಿದ್ದಂತೇ ಆ ವ್ಯಕ್ತಿ ಬಹುಶಃ ಹುಡುಗಿ ಹೆಸರಿನಲ್ಲಿರುವ ಬರವಣಿಗೆಯನ್ನೂ ನಿಲ್ಲಿಸಿದ. ಅಂತೆಯೇ ನನಗೂ ಸಂದೇಶ ಕಳಿಸುವುದನ್ನು ನಿಲ್ಲಿಸಿದ, ಮತ್ತಷ್ಟು ಜನರಿಗೂ ಮೆಸ್ಸ ಜ್ ಮಾಡುವುದನ್ನು ನಿಲ್ಲಿಸಿದ, ಆದರೆ ಆಗ ನಾನು ಯಾವುದೋ ಸಮಸ್ಯೆಯಿಂದ ಆಕೆ ನನಗೆ ಮೆಸೇಜ್ ಕಳಿಸುತ್ತಿಲ್ಲ, ಏನೂ ಬರೆಯುತ್ತಿಲ್ಲ ಎಂದು ಸುಮ್ಮನಾಗಿದ್ದೆ.

ಆದರೆ...... ಇಂದು ಸತ್ಯ ತಿಳಿದಿದೆ. ಆತನ ಹೆಸರನ್ನು ಹಾಕದೇ ನಾನು ಈ ಘಟನೆಯನ್ನು ಮುಂದಿಟ್ಟಿದ್ದೇನೆ. ಆ ವ್ಯಕ್ತಿಗೆ ಇನ್ನಾದರೂ ತನ್ನ ತಪ್ಪಿನ ಅರಿವಾದರೆ ದೇವರಲ್ಲಿ  ಕ್ಷಮೆ ಕೇಳಲಿ. ದೇವರು ಆತನಿಗೆ ಮುಂದೆ ಈ ರೀತಿ ಯಾರೊಂದಿಗೂ ಅವರ ಭಾವನೆಗಳ ಜೊತೆ ಆಡದಂತಹ ಬುದ್ಧಿಕೊಡಲೆಂದು ಪ್ರಾರ್ಥಿಸುವೆ. ಕೇವಲ ಇಂತವುಗಳೆಲ್ಲಾ ಒಬ್ಬ ಇಬ್ಬರದಲ್ಲ, ನಿತ್ಯವೂ ಕಾಣಸಿಗುವಂತ ಜಾಯಮಾನ ಇದು. ಅಕ್ಕ, ತಂಗಿ, ನೀನು ನನ್ನ ಕ್ಲೋಸ್ ಗೆಳತಿ ಅಂತ ಹೇಳಿಕೊಂಡು ಸಂದೇಶ ಕಳಿಸುವ ಜನರಿದ್ದಾರೆ, ಅದರ ಅರಿವೆ ಇಲ್ಲದ ಕೆಲವು ಮಹಿಳೆಯರೂ ಕೂಡ ಅಂತವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿರುವುದನ್ನು ನಾವು ನಿತ್ಯವೂ ಕಾಣುತ್ತೇವೆ. ತಮ್ಮ ತೆವಲಿಗೋಸ್ಕರ, ಇನ್ನೊಬ್ಬರನ್ನು ಬಲಿಪಶುಮಾಡಿಕೊಂಡು ಈ ರೀತಿ ಸಂತೋಷಪಡುವವರನ್ನು ಏನೆನ್ನೋಣ ನೀವೆ ಹೇಳಿ! ಆ ವ್ಯಕ್ತಿ ಇದನ್ನೆಲ್ಲಾ ಕೇವಲ ತನ್ನ ಕ್ಷಣಿಕ ಸಂತೋಷಕ್ಕಾಗಿ ಹುಡುಗಿಯಂತೆಯೇ ನಟಿಸುತ್ತಾ, ಮಹಿಳೆಯರಿಗೆಲ್ಲಾ ಮೆಸೇಜ್ ಕಳಿಸುತ್ತಾ ಇದ್ದನೆಂದಾದಲ್ಲಿ ಆತನಿಗೆ ಮೆಡಿಕಲ್ ಟ್ರೀಟ್‌ಮೆಂಟಿನ ಅಗತ್ಯ ತುಂಬಾನೆ ಇದೆ. He may be suffering from personality disorder. ಕೇವಲ ಹುಡುಗಿ ಹೆಸರಿನಲ್ಲಿ ಸಂದೇಶ ಕಳಿಸಿದ್ದಕ್ಕೆ ಇಷ್ಟು ಗಲಾಟೆನಾ ಎಂದೂ ಕೆಲವರಿಗೆ ಅನಿಸಬಹುದು. ಆದರೆ ಇಲ್ಲಿ ಬಲಿಯಾಗಿರುವುದು ಭಾವನೆಗಳು, ಮನುಷ್ಯರ ಮೇಲಿನ ನಂಬಿಕೆಗಳು, ನಂಬಿಕೆ ಬಹು ಅಮೂಲ್ಯವಾದದ್ದು, ನಮ್ಮೊಳಗಿನ ಭಾವನೆಗಳನ್ನು ಹಂಚಿಕೊಳ್ಳುವಾಗ ಇರಬೇಕಾದದ್ದು ಇದೇ. ತನ್ನ ಅಂಗವೈಕಲ್ಯವನ್ನು ಉದಾಹರಿಸುತ್ತಾ ಹೇಗೆ ನೀನು ಮೇಲೆ ಬರಬೇಕೆಂದು ನಾನು ಉಪದೇಶಿಸಿದಾಗಲೂ ಆ ವ್ಯಕ್ತಿಗೆ ನೈತಿಕತೆ ಚುಚ್ಚಲಿಲ್ಲವೇ  ಮತ್ತೂ ಅದೇ ಹೆಸರಿನಡಿಯಲ್ಲಿ ಅಕ್ಕಾ... ಅಕ್ಕಾ... ಗೆಳತಿ....ಗೆಳತಿ....ಎನ್ನುತ್ತಾ ಖಿನ್ನತೆ, ಒಂಟಿತನ ಎನ್ನುತ್ತಾ ಎಲ್ಲಾರನ್ನೂ ಮೋಸಗೊಳಿಸುತ್ತಾ ಹೋದ. ಅಕ್ಕಾ ಹಾಗೂ ಸ್ನೇಹ ಅನ್ನುವ ಪದಕ್ಕೂ ಅದರ ಘನತೆಗೂ ಅಪಾರ ಹಾನಿಯನ್ನೂ ತಂದಿಟ್ಟ. ಇಂತಹವರಿಂದಲೇ ಇತ್ತೀಚೆಗೆ ಸಾಹಿತ್ಯ, ಸಂಸ್ಕೃತಿಗಳು ಕೊಳಕಾಗುತ್ತಿದೆ ಅನ್ನಿಸುತ್ತಿದೆ. ಮತ್ತೆ ಈ ವ್ಯಕ್ತಿ ಇನ್ನೋರ್ವ ಹುಡುಗಿಯ ಹೆಸರಿನಡಿಯಲ್ಲೋ, ಅಥವಾ ಬೇರಾವ ರೀತಿಯಲ್ಲೋ, ಇನ್ನಾರ ಭಾವನೆಗಳೊಂದಿಗೂ ಆಡದಿರಲೆಂದು, ಮೋಸ ಮಾಡದಿರಲೆಂದು ನಿಮ್ಮೆಲ್ಲರನ್ನೂ ಎಚ್ಚರಿಸುತ್ತಿರುವೆ. ಸಂಪೂರ್ಣ ಮುಸುಕು ಹಾಕಿ ಕೇವಲ ಹೆಸರನ್ನು ಮಾತ್ರ ಹೇಳುತ್ತಾ ವ್ಯವಹರಿಸುವವರೊಂದಿಗೆ ಜಾಗೃತೆಯಾಗಿರಿ.

**ಎಚ್ಚರ ಎಚ್ಚರ ಎಚ್ಚರ !!!!!**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,